# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 08, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 295 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




ಕಾಮಣ್ಣ ಮಕ್ಕಳು...

ದಾವಣಗೆರೆ ನಗರದ ಹಲವೆಡೆ ಮಂಗಳವಾರ ರಾತ್ರಿ ಕಾಮದಹನ ನಡೆಸಲಾಯಿತು. ಮಕ್ಕಳು, ಯುವಕರು 'ಕಾಮಣ್ಣ ಮಕ್ಕಳು ಕಳ್ಳ ಸೂಳೆ ಮಕ್ಕಳು, ಭೀಮಣ್ಣ ಮಕ್ಕಳು ಬಿಟ್ಟಿ ಸೂಳೆ ಮಕ್ಕಳು, ಅಡಿಕೆ ಗೋಟು, ಎಕ್ಕಡದೇಟು..' ಎಂದು ಕೂಗಿ ಸಂಭ್ರಮಿಸಿದರು.

## ಮಾಡಾಳ್‌ಗೆ ನಿರೀಕ್ಷಣಾ ಜಾಮೀನು

ಬೆಂಗಳೂರು, ಮಾ. 7 - ಕರ್ನಾಟಕ ಸಾಬೂನು ಕಾರ್ಖಾನೆಯ ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಆರೋಪಕ್ಕೆ ಗುರಿಯಾಗಿದ್ದ ಬಿಜೆಪಿಯ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ವಿರುಪಾಕ್ಷಪ್ಪ ಕಾರ್ಖಾನೆಯ ಅಧ್ಯಕ್ಷರಾಗಿದ್ದು, ಅವರ ಪುತ್ರ ಟೆಂಡರ್ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಆರೋಪಕ್ಕೆ ಗುರಿಯಾಗಿದ್ದಾರೆ.

ವಿರುಪಾಕ್ಷಪ್ಪ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ಕ್ರಿಮಿನಲ್ ಪ್ರಕರಣದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಷರತ್ತುಬದ್ಧ ಜಾಮೀನು ನೀಡಿದ್ದಾರೆ.

ಅರ್ಜಿದಾರರು 48 ಗಂಟೆಯೊಳಗಾಗಿ ಲೋಕಾಯುಕ್ತ ಮುಂದೆ ಹಾಜರಾಗಿ, ವಿಚಾರಣೆಗೆ ಒಳಪಡಬೇಕು ಎಂದು ಐದು ಲಕ್ಷ ಮೊತ್ತ ಬಾಂಡ್ ಪಡೆದು, ಜಾಮೀನು ಮಂಜೂರು ಮಾಡಿದೆ.

ಸಾಕ್ಷಿ ನಾಶಕ್ಕೆ ಪ್ರಯತ್ನಿಸಬಾರದು. ತನಿಖೆಗೆ ಸಹಕರಿಸಬೇಕೆಂದು ಆದೇಶ ನೀಡಿರುವ ಪೀಠ, ವಿಚಾರಣೆಯನ್ನು ಇದೇ 17ಕ್ಕೆ ನಿಗದಿಪಡಿಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಕೆ.ಸುಮನ್ ಅವರು ಎಫ್‌ಐಆರ್‌ನಲ್ಲಿ ಅರ್ಜಿದಾರರ ವಿರುದ್ಧ ಆರೋಪ ಸಾಬೀತುಪಡಿಸಲು ಯಾವುದೇ ಸಾಕ್ಷಿಗಳಿಲ್ಲ. ಟೆಂಡರ್‌ಗೆ ಲಂಚ ನೀಡುವಂತೆ 30 ಪರ್ಸೆಂಟ್ ಬೇಡಿಕೆ ಇಟ್ಟಿರುವ ಬಗ್ಗೆ ಯಾವುದೇ ಪುರಾವೆಗಳು ಇಲ್ಲ.

ಮಗ ಮತ್ತು ತಂದೆಗೆ ಇದರಲ್ಲಿ ಯಾವುದೇ ಸಂಬಂಧವಿಲ್ಲ. ವಿರೂಪಾಕ್ಷಪ್ಪ ಅವರಿಗೆ 75 ವರ್ಷ ತುಂಬಿದೆ. ನಾಲ್ಕು ಬಾರಿ ಶಾಸಕರಾಗಿದ್ದಾರೆ. ಮಿಗಿಲಾಗಿ ಹೃದಯ ಸಂಬಂಧಿ ಸಮಸ್ಯೆಗಳಿವೆ. ವಿಚಾರಣೆಗೆ ಹಾಜರಾದರೆ, ಲೋಕಾಯುಕ್ತ ಪೊಲೀಸರು ಬಂಧಿಸುವ ಭೀತಿ ಇದೆ.

ಆದ್ದರಿಂದ ನಮ್ಮ ಕಕ್ಷಿದಾರರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕೆಂದು ಮನವಿ ಮಾಡಿದರು. ಇದಕ್ಕೆ ಪ್ರತಿಯಾಗಿ (2ನೇ ಪುಟಕ್ಕೆ)

## ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ

### ಆರೋಪ ಮುಕ್ತನಾಗಿ ಹೊರ ಬರುತ್ತೇನೆ : ಮಾಡಾಳ್



ದಾವಣಗೆರೆ, ಮಾ. 7 - ಲಂಚ ಪ್ರಕರಣದಲ್ಲಿ ಸಿಲುಕಿದ ನಂತರ ನಾಪತ್ತೆಯಾಗಿದ್ದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಮಧ್ಯಂತರ ಜಾಮೀನಿನ ನಂತರ ಮತ್ತೆ ತವರು ಕ್ಷೇತ್ರವಾದ ಚನ್ನಗಿರಿಯಲ್ಲಿ ಬಹಿರಂಗವಾಗಿ ಕಾಣಿಸಿಕೊಂಡಿದ್ದಾರೆ.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಎಲ್ಲೂ ಹೋಗಿರಲಿಲ್ಲ. ಊರಿನಲ್ಲೇ ಇದ್ದೆ. ಆಪಾದನೆ ಬಂದಾಗ ಜನಸಂಪರ್ಕ ಕಡಿಮೆ ಮಾಡಿದ್ದೆ ಎಂದಿದ್ದಾರೆ.

ಕೆಲವರು ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ. ನನ್ನ ವಿರುದ್ಧ ಮಾಡಿರುವ ಆರೋಪದಿಂದ ಮುಕ್ತನಾಗಿ ಹೊರ ಬರುತ್ತೇನೆ ಎಂದ ಅವರು, ನ್ಯಾಯಯುತವಾಗಿ ಗಳಿಸಿದ ಹಣ ತನ್ನ ಮಗ ಪ್ರಶಾಂತ್ ಬಳಿಯಿಂದ

#### ತೆರೆದ ವಾಹನದಲ್ಲಿ ಶಾಸಕರ ಮೆರವಣಿಗೆ

ಲೋಕಾಯುಕ್ತರಿಗೆ ಸಿಕ್ಕಿದೆ ಎಂದರು.

ಅಡಿಕೆಗೆ ಉತ್ತಮ ಬೆಲೆ ಬಂದಿರುವ ಕಾರಣ ಇಲ್ಲಿನ ಸಾಮಾನ್ಯ ಅಡಿಕೆ ತೋಟದವರ ಮನೆಯಲ್ಲೂ ಅಡಿಕೆ ಮಾರಿದ 2.5-3 ಕೋಟಿ ರೂ. ಹಣ ಇರುತ್ತದೆ. ಹೀಗಾಗಿ ತಮ್ಮ ಮನೆಯಲ್ಲಿ ಲೋಕಾಯುಕ್ತರಿಗೆ ಸಿಕ್ಕ ಹಣ ದೊಡ್ಡದೇನೂ ಅಲ್ಲ ಎಂದು ಸಮರ್ಥಿಸಿಕೊಂಡರು.

ನನ್ನ ಬಳಿ 125 ಎಕರೆ ಅಡಿಕೆ ತೋಟ, ಅಡಿಕೆ ಮಂಡಿ, ಎರಡು ಕ್ರಷರ್ ಸೇರಿದಂತೆ, ವ್ಯಾಪಾರ ವಹಿವಾಟು ಇದೆ. ಬೆಂಗಳೂರಿನ ಮನೆಯಲ್ಲಿ ಸಿಕ್ಕಿರುವ ಹಣಕ್ಕೆ (2ನೇ ಪುಟಕ್ಕೆ)

## ಹೆಚ್.ಎ.ಎಲ್.ನಿಂದ 6,800 ಕೋಟಿ ರೂ.ಗಳ ತರಬೇತಿ ವಿಮಾನ ಖರೀದಿ

ನವದೆಹಲಿ, ಮಾ. 7- ಹಿಂದೂಸ್ತಾನ್ ಏರೋನಾಟಿಕ್ಸ್ ಕಂಪನಿಯಿಂದ 70 ಹೆಚ್‌ಟಿಟಿ - 40 ತರಬೇತಿ ವಿಮಾನಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ಒಪ್ಪಂದ ಮಾಡಿಕೊಂಡಿದೆ. ಭಾರತೀಯ ವಾಯುಪಡೆಗಾಗಿ ಇವುಗಳನ್ನು 6,800 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲಾಗುತ್ತಿದೆ. ಇದೇ ವೇಳೆ ಲಾರ್ಸನ್ ಅಂಡ್ ಟರ್ಬೋದಿಂದ 3,100 ಕೋಟಿ ರೂ. ವೆಚ್ಚದಲ್ಲಿ ಮೂರು ಕೆಡೆಟ್ ತರಬೇತಿ ಹಡಗುಗಳನ್ನು ಖರೀದಿಸುವ ಒಪ್ಪಂದವನ್ನೂ ಮಾಡಿಕೊಳ್ಳ ಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಮಾರ್ಚ್ 1ರಂದು ನಡೆದ ಸಂಪುಟದ ರಕ್ಷಣಾ ಸಮಿತಿ ಸಭೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ

## ಮುಖ್ಯ ಚುನಾವಣಾ ಆಯುಕ್ತರ ತಂಡದಿಂದ ಬೆಂಗಳೂರು ಭೇಟಿ

ಬೆಂಗಳೂರು, ಮಾ.7- ಮುಂಬರುವ ಸಾರ್ವತ್ರಿಕ ವಿಧಾನಸಭೆ ಚುನಾವಣೆ ಪೂರ್ವ ತಯಾರಿ ಪರಿವೀಕ್ಷಣೆಗಾಗಿ ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನೇತೃತ್ವದ ಹಿರಿಯ ಅಧಿಕಾರಿಗಳ ತಂಡ ಮಾರ್ಚ್ 9, 10 ಮತ್ತು 11 ರಂದು ಮೂರು ದಿನಗಳ ಕಾಲ ಬೆಂಗಳೂರಿಗೆ ಭೇಟಿ ನೀಡಲಿದೆ.

ತಂಡದಲ್ಲಿ ಭಾರತ ಚುನಾವಣಾ ಆಯೋಗದ ಚುನಾವಣಾ ಆಯುಕ್ತರುಗಳಾದ ಅನೂಪ್ ಚಂದ್ರಪಾಂಡೆ, ಅರುಣ್ ಗೋಯಲ್ ಹಾಗೂ ಉಪ ಆಯುಕ್ತರುಗಳು ಸೇರಿದಂತೆ ಆಯೋಗದ ಹಿರಿಯ ಅಧಿಕಾರಿಗಳು ಆಗಮಿಸಲಿದ್ದಾರೆ.

## ಗೋವಾದಲ್ಲಿ ಬೆಂಕಿ ಚೆಂಡುಗಳ ಓಕುಳಿ

ಪಣಜಿ, ಮಾ. 7 – ದೇಶಾದ್ಯಂತ ಬಣ್ಣದಿಂದ ಓಕುಳಿಯಾಡಿದರೆ, ಗೋವಾದ ಮಲ್ಕರ್ನೆಮ್ ಹಳ್ಳಿಯಲ್ಲಿ ಮಾತ್ರ ಜನರು ಬೆಂಕಿ ಚೆಂಡುಗಳಿಂದ ಓಕುಳಿ ಆಡುತ್ತಾರೆ!

ಕಾಮದಹನದ ಮರು ದಿನ ಓಕುಳಿ ಆಡುವುದು ದೇಶಾದ್ಯಂತದ ಪದ್ಧತಿ. ಆದರೆ, ಮಲ್ಕರ್ನೆಮ್ ಹಳ್ಳಿಯಲ್ಲಿ ಪದ್ಧತಿ ಭಿನ್ನವಾಗಿದೆ. ಶತಮಾನಗಳಿಂದ ಇಲ್ಲಿ ಬೆಂಕಿ ಚೆಂಡಿನಿಂದ ಓಕುಳಿ ಆಡುವ ಪದ್ಧತಿ ಇದೆ.

ಈ ಸಂಪ್ರದಾಯ ಯಾವಾಗಿನಿಂದ ಆರಂಭವಾಯಿತು ಎಂಬುದು ಗೊತ್ತಿಲ್ಲ. ಆದರೆ, 'ಶೆಣಿ ಉಜೋ' ನಮ್ಮ ದೇವಾಲಯ ಸಂಸ್ಕೃತಿ ಅವಿಭಾಜ್ಯ ಅಂಗ. ಪ್ರತಿ ವರ್ಷ ಓಕುಳಿ ಮುನ್ನಾ ದಿನ ಈ ಪದ್ಧತಿ ಆಚರಿಸಲಾಗುತ್ತದೆ ಎಂದು ಗ್ರಾಮಸ್ಥರಾದ ಕುಶ್ಬ ಗಾಂವಕರ್ ಹೇಳಿದ್ದಾರೆ.

ಕೊಂಕಣಿಯಲ್ಲಿ ಶೆಣಿ ಎಂದರೆ ಸೆಗಣಿಯ ಬೆರಣಿ ಹಾಗೂ ಉಜೋ ಎಂದರೆ ಬೆಂಕಿ.

ಓಕುಳಿಯ ಮುನ್ನಾ ರಾತ್ರಿ ನೂರಾರು ಜನರು ಇಲ್ಲಿನ ಶ್ರೀ ಮಲ್ಲಿಕಾರ್ಜುನ, ಶ್ರೀ ವಗ್ರೋದೇವ ಹಾಗೂ ಶ್ರೀ ಝುಲ್ಮಿದೇವ ದೇವಾಲಯಗಳ ಎದುರು ಸೇರಿಕೊಂಡು ಶೆಣಿ ಉಜೋ ಸಂಪ್ರದಾಯ ನೆರವೇರಿಸುತ್ತಾರೆ.

ಓಕುಳಿಗೆ ಹದಿನೈದು ದಿನ ಮುಂಚೆ ಶೆಣಿ ಉಜೋ ಪ್ರಕ್ರಿಯೆ ಆರಂಭವಾಗುತ್ತದೆ. ಇದರಲ್ಲಿ ಪಾಲ್ಗೊಳ್ಳುವವರು ಈ ಅವಧಿಯಲ್ಲಿ ಶುದ್ಧ ಸಸ್ಯಹಾರಿ ಆಗಿರಬೇಕು.

ಓಕುಳಿಗೆ ಮುನ್ನಾ ದಿನ ಜನರು ಅಡಿಕೆ ಮರಗಳ ಕೊಂಬೆಗಳನ್ನು ಹಿಡಿದುಕೊಂಡು ಹಲವಾರು ಸಂಪ್ರದಾಯಗಳನ್ನು ನೆರವೇರಿಸುತ್ತಾರೆ. ಈ ಸಂಪ್ರದಾಯಗಳ ವೇಳೆ ಜನರು ಬರಿಗಾಲಲ್ಲಿ ಇರಬೇಕು. ರಾತ್ರಿಯಿಡೀ ಸಾಂಪ್ರದಾಯಿಕ ವಿಧಿ ವಿಧಾನಗಳನ್ನು ನೆರವೇರಿಸಿದ ನಂತರ ಬೆಳಗಿನ ಜಾವ ಬೆರಣಿಗಳಿಗೆ ಬೆಂಕಿ ಹಚ್ಚಿ ಅದನ್ನು ವ್ರತಧಾರಿಗಳ ಮೇಲೆ ಎಸೆಯಲಾಗುತ್ತದೆ. ಪ್ರೇಕ್ಷಕರೂ ಸಹ ಕೆಲವೊಮ್ಮೆ ಉರಿದು ಬೀಳುವ ಬೆರಣಿಗಳ ಕೆಳಗೆ ಓಡುತ್ತಾರೆ.



ಈ ರೀತಿ ಬೆಂಕಿ ಚೆಂಡಿನ ಓಕುಳಿಯಲ್ಲಿ ಪಾಲ್ಗೊಳ್ಳುವುದರಿಂದ ಪಾಪಗಳು ಪರಿಹಾರವಾಗುತ್ತವೆ ಹಾಗೂ ರೋಗಗಳು ಗುಣವಾಗುತ್ತವೆ ಎಂಬ ನಂಬಿಕೆ ಸ್ಥಳೀಯರದ್ದು.

## ಮೂವರು ಮಾಜಿ ಶಾಸಕರು ಕಾಂಗ್ರೆಸ್‌ಗೆ ಸೇರ್ಪಡೆ

ಬೆಂಗಳೂರು, ಮಾ. 7 - ಮೂವರು ಮಾಜಿ ಶಾಸಕರು ಇಂದು ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾದರು. ರಾಜ್ಯ ಕಾಂಗ್ರೆಸ್ ನಾಯಕರು ಪಕ್ಷದ ಬಾವುಟ ನೀಡಿ ಬರಮಾಡಿಕೊಂಡರು. 2008ರಲ್ಲಿ ದೊಡ್ಡಬಳ್ಳಾಪುರದಿಂದ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿ ಅವಧಿ ಮುಗಿದ ಬಳಿಕ ಬಿಜೆಪಿ ಸೇರ್ಪಡೆಯಾಗಿದ್ದ ಮಾಜಿ ಶಾಸಕ ಜೆ.ನರಸಿಂಹ ಸ್ವಾಮಿ, ಕೊಳ್ಳೆಗಾಲದ ಬಿಜೆಪಿ ಮಾಜಿ ಶಾಸಕ ನಂಜುಂಡ ಸ್ವಾಮಿ, ವಿಜಯಪುರದ ಮಾಜಿ ಪಕ್ಷೇತರ ಶಾಸಕ ಮನೋಹರ್ ಐನಾಪುರ್ ಹಾಗು ಮೈಸೂರು ಮಾಜಿ ಮೇಯರ್ ಪುರುಷೋತ್ತಮ್ ಅಧಿಕೃತವಾಗಿ ಕೈ ಪಕ್ಷ ಸೇರಿದರು.

ಮನೋಹರ್ ಐನಾಪುರ್ ಅವರು 1998ರಲ್ಲಿ ನಾಗಠಾಣಾದಿಂದ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿದ್ದು 2013ರಲ್ಲಿ ಪಕ್ಷೇತರ ಶಾಸಕರಾಗಿದ್ದರು. 2008ರಲ್ಲಿ ಕಾಂಗ್ರೆಸ್ ಪಕ್ಷದಿಂದ ಜೆ.ನರಸಿಂಹಸ್ವಾಮಿ

### 140 ಸೀಟು ಗೆಲ್ಲುವ ವಿಶ್ವಾಸ : ಡಿಕೆಶಿ

ಶಾಸಕರಾಗಿದ್ದರು. ಕೊಳ್ಳೆಗಾಲದಿಂದ 2013ರಲ್ಲಿ ನಂಜುಂಡಸ್ವಾಮಿ ಬಿಜೆಪಿ ಶಾಸಕರಾಗಿದ್ದರು. ಇಂದು ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಡಿಕೆಶಿ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹಾಗೂ ಧ್ರುವ ನಾರಾಯಣ್ ಮತ್ತಿತರೆ ನಾಯಕರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಇಂದು ಪಕ್ಷಕ್ಕೆ ಸೇರ್ಪಡೆಯಾಗಬೇಕಿದ್ದವರ ಪಟ್ಟಿ ದೊಡ್ಡದಿತ್ತು. ಚುನಾವಣೆಗೆ 50 ದಿನ (2ನೇ ಪುಟಕ್ಕೆ)

## ಗಗನಯಾನಕ್ಕಾಗಿ ಪ್ಯಾರಾಚೂಟ್ ಪರೀಕ್ಷೆ

ಬೆಂಗಳೂರು, ಮಾ. 7 – ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ, ಮಾನವ ಸಹಿತ ಗಗನಯಾನ ಯೋಜನೆಗೆ ಸಂಬಂಧಿಸಿದಂತೆ ಪ್ಯಾರಾಚೂಟ್ ಅಳವಡಿಕೆ ಪರೀಕ್ಷೆಗಳನ್ನು ನಡೆಸಿದೆ. 2 ಪ್ಯಾರಾಚೂಟ್‌ಗಳನ್ನು ಮೊದಲ ಪರೀಕ್ಷೆಗೆ ಒಳಪಡಿಸಲಾಗಿದೆ. ಚಂಡೀಘಡದಲ್ಲಿರುವ ಟರ್ಮಿನಲ್ ಬ್ಯಾಲಿಸ್ಟಿಕ್ಸ್ ರೀಸರ್ಚ್ ಲ್ಯಾಬೊರೇಟರಿಯಲ್ಲಿ ಪ್ರಯೋಗ ನಡೆಸಲಾಗಿದೆ.

## ನಾಲ್ಕಾರು ಶಾಸಕರನ್ನು ಹೊರತು ಪಡಿಸಿ ಉಳಿದೆಲ್ಲರಿಗೂ ಟಿಕೆಟ್



ಬೆಂಗಳೂರು, ಮಾ. 7 - ಪ್ರಸಕ್ತ ವಿಧಾನಸಭಾ ಚುನಾವಣೆ ಯಲ್ಲಿ ನಾಲ್ಕಾರನ್ನು ಶಾಸಕರಿಗೆ ಬಿಟ್ಟರೆ ಉಳಿದೆಲ್ಲರಿಗೂ ಟಿಕೆಟ್ ನೀಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಇಂಗಿತ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲ ಕಾರಣಗಳಿಂದ ಹಾಲಿ ಕೆಲವು ಸದಸ್ಯರಿಗೆ ಟಿಕೆಟ್ ದೊರೆಯುತ್ತಿಲ್ಲ. ಪಕ್ಷದ ಮೊದಲ ಪಟ್ಟಿಯನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಎಂದಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ದಂತೆ ವರಿಷ್ಠರು ನಾಲ್ಕಾರು ಚುನಾವಣಾ ಪೂರ್ವ ಸಮೀಕ್ಷೆಗಳನ್ನು ನಡೆಸಿದ್ದಾರೆ. ಅದರ ಆಧಾರದ ಮೇಲೆ ಅಭ್ಯರ್ಥಿಗಳ ಆಯ್ಕೆಯಾಗಲಿದೆ ಎಂದರು. ಉತ್ತರ ಪ್ರದೇಶ ಮತ್ತು ಗುಜರಾತ್ ಮಾದರಿಯಲ್ಲೇ ರಾಜ್ಯ ವಿಧಾನಸಭೆಗೂ ಅಭ್ಯರ್ಥಿಗಳ ಕಸರತ್ತು ನಡೆಯಲಿದೆ.

ಆ ರಾಜ್ಯದಲ್ಲಿ ಕೆಲವು ಕಠಿಣ ತೀರ್ಮಾನ ಕೈಗೊಂಡಿದ್ದರಿಂದಲೇ ಪಕ್ಷ ಮತ್ತೆ ಅಧಿಕಾರಕ್ಕೆ ಬಂದಿತು. ಕರ್ನಾಟಕದಲ್ಲೂ ಬಿಜೆಪಿ 140 (2ನೇ ಪುಟಕ್ಕೆ)

## ಆಫ್ಘಾನಿಸ್ತಾನಕ್ಕೆ ಗೋಧಿ ರವಾನೆ

ನವದೆಹಲಿ, ಮಾ. 7 - ಆಫ್ಘಾನಿಸ್ತಾನಕ್ಕೆ 20 ಸಾವಿರ ಟನ್‌ಗಳ ಗೋಧಿಯನ್ನು ನೆರವಾಗಿ ರವಾನಿಸುವುದಾಗಿ ಭಾರತ ತಿಳಿಸಿದೆ.

ಆಫ್ಘಾನಿಸ್ತಾನದ ಕುರಿತ ಭಾರತ – ಮಧ್ಯ ಏಷಿಯಾ ಜಂಟಿ ಕಾರ್ಯಪಡೆಯ ಮೊದಲ ಸಭೆಯಲ್ಲಿ ಭಾರತ ತನ್ನ ನಿರ್ಧಾರ ತಿಳಿಸಿದೆ. ಇರಾನ್‌ನ ಚಾಬಹಾರ್ ಬಂದರಿನ ಮೂಲಕ ಗೋಧಿ ರವಾನಿಸಲಾಗುವುದು.

ಸಮರ ಪೀಡಿತವಾದ ಆಫ್ಘಾನಿಸ್ತಾನದ ಪರಿಸ್ಥಿತಿಯ ಕುರಿತು ದೆಹಲಿಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಯಿತು. ಆಫ್ಘಾನಿಸ್ತಾನದ ನೆಲವನ್ನು ಉಗ್ರವಾದಿ ಚಟುವಟಿಕೆಗಳಿಗೆ ಬಳಸಬಾರದು ಎಂದು ಸಭೆಯಲ್ಲಿ ಒತ್ತು ನೀಡಲಾಯಿತು.

## ನಿವೇಶನ ಹಂಚಿಕೆಯಲ್ಲಿ ಶೇ. 5 ರಷ್ಟು ಮೀಸಲಾತಿ

ದಾವಣಗೆರೆ, ಮಾ.7 - ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿಯಮದ ಪ್ರಕಾರ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ತಿದ್ದುಪಡಿ ಕೈಗೊಳ್ಳಲಾಗಿದೆ. ಕೇಂದ್ರ ಸಶಸ್ತ್ರ ಪಡೆಯ ಸೇವಾ ನಿರತ ಸೈನಿಕರು, ಮಾಜಿ ಸೈನಿಕರು, ಮೃತ ಮಾಜಿ ಸೈನಿಕರ ಪತ್ನಿ ಮತ್ತು ಸೇವೆಯಲ್ಲಿರುವಾಗ ಮರಣ ಹೊಂದಿರುವ ಯೋಧರ ಅವಲಂಬಿತರಿಗೆ ಶೇ. 5 ರಷ್ಟು ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆಯಲ್ಲಿ ಮೀಸಲಾತಿ ನೀಡಲಾಗಿದೆ ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.



**ಹಳದಿ ಹೂಗಳ ಹಾದಿ**

ದಾವಣಗೆರೆ ನಗರದ ಕಾಳಿದಾಸ ವೃತ್ತದಿಂದ ಬೈಪಾಸ್‌ಗೆ ಹೋಗುವ ಹಾದಿಯ ಉದ್ದಕ್ಕೂ ಇರುವ ತಬೂಬಿಯಾ ಔರಿಯಾ ಜಾತಿಯ ಮರಗಳು ಹಳದಿ ಹೂಗಳನ್ನು ಮೈ ತುಂಬಾ ತುಂಬಿಕೊಂಡಿವೆ. ಬಿರು ಬೇಸಿಗೆಯಲ್ಲೂ ಕಣ್ಣಿಗೆ ಮುದ ನೀಡುತ್ತಿವೆ.


## ರಾಮಗೊಂಡನಹಳ್ಳಿ ಜಿ.ಎಂ. ಕಲ್ಲಮ್ಮ ನಿಧನ



ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದ ವಾಸಿ, ದಿ|| ಗೋಪನಾಳ್ ಶಿವಾನಂದಪ್ಪನವರ ಧರ್ಮಪತ್ನಿ **ಶ್ರೀಮತಿ ಜಿ.ಎಂ. ಕಲ್ಲಮ್ಮ** ಅವರು ದಿನಾಂಕ 7-3-2023ರ ಮಂಗಳವಾರ ರಾತ್ರಿ 10.30ಕ್ಕೆ ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08-03-2023ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮವಾದ ರಾಮಗೊಂಡನಹಳ್ಳಿಯ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ದಿ|| ಗೋಪನಾಳ್ ಶಿವಾನಂದಪ್ಪನವರ ಮಕ್ಕಳಾದ
ಶ್ರೀ ಜಿ.ಎಸ್.ಸುರೇಂದ್ರ, ಸಹಕಾರ ಅಭಿವೃದ್ಧಿ ಅಧಿಕಾರಿಗಳು, ದಾವಣಗೆರೆ.
ಜಿ.ಎಸ್. ಪ್ರಕಾಶ್, ಜಿ.ಎಸ್. ಬಸವರಾಜ್, ತೋಟಗಾರಿಕೆ ಇಲಾಖೆ, ಜಗಳೂರು.
ಮಕ್ಕಳು, ಮೊಮ್ಮಕ್ಕಳು, ಸಹೋದರರು, ಬಂಧು-ಮಿತ್ರರು.
ಗೋಪನಾಳ್ ವಂಶಸ್ಥರು, ರಾಮಗೊಂಡನಹಳ್ಳಿ
ಗೌಡ್ರು ಕಲ್ಲಪ್ಪರ ವಂಶಸ್ಥರು, ಗುಡಾಳು
ರಾಮಗೊಂಡನಹಳ್ಳಿ ಹಾಗೂ ಗುಡಾಳು ಗ್ರಾಮಸ್ಥರು.

## ಕಬ್ಬೂರ್ ಕೆ.ಜಿ. ಮಹದೇವಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಬ್ಬೂರ್ ಗ್ರಾಮದ ವಾಸಿ ದಿ. ಕಬ್ಬೂರು ಗಂಗಜ್ಜರ ವೀರಭದ್ರಪ್ಪನವರ ಪುತ್ರರು ಕಬ್ಬೂರು ಹಾಲು ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷರಾದ **ಕೆ.ಜಿ. ಮಹದೇವಪ್ಪ** ಇವರು ದಿನಾಂಕ 7.03.2023ರ ಮಂಗಳವಾರ ಬೆಳಿಗ್ಗೆ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು, ಸಹೋದರ, ಸಹೋದರಿಯರು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.03.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕಬ್ಬೂರ್ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ : 98441 52987, 94496 74899

## ಪರಿಹಾರ ಪಾವತಿಗೆ ಶ್ರೀರಾಮ ಫೈನಾನ್ಸ್‌ಗೆ ಜಿಲ್ಲಾ ಗ್ರಾಹಕರ ಆಯೋಗ ಆದೇಶ

ದಾವಣಗೆರೆ, ಮಾ. 7 - ವಾಹನ ಖರೀದಿ ಮಾಡಿದ ಗ್ರಾಹಕನಿಗೆ ಪರಿಹಾರ ಮೊತ್ತ ರೂ.13,75,880ಗಳನ್ನು 30 ದಿನದೊಳಗೆ ಪಾವತಿಸುವಂತೆ ಶ್ರೀರಾಮ ಫೈನಾನ್ಸ್ ಕಂಪನಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ ಹೊರಡಿಸಿದೆ.

ದಾವಣಗೆರೆ ನಿವಾಸಿ ಅಹಮದ್ ರಾಜಾಖಾನ ಅವರು ದಿ.19.12.2019 ರಂದು ದಾವಣಗೆರೆ ಶ್ರೀರಾಮ ಫೈನಾನ್ಸ್ ಶಾಖೆ ನಡೆಸಿದ ಸಾರ್ವಜನಿಕ ಹರಾಜಿನಲ್ಲಿ ರೂ.ಎಂಟು ಲಕ್ಷಕ್ಕೆ ವಾಹನ ಖರೀದಿಸಿದ್ದರು. ಫೈನಾನ್ಸ್ ಶಾಖೆಯವರು ವಾಹನವನ್ನು ಖರೀದಿದಾರರ ಹೆಸರಿಗೆ ವರ್ಗಾವಣೆ ಮಾಡಲು ಫಾರ್ಮ ನಂ.29 ಮತದ್ದು 30ಕ್ಕೆ ಸಹಿ ಮಾಡಿದ್ದರು. ನಂತರ ವಾಹನವನ್ನು ತಮ್ಮ ಹೆಸರಿಗೆ ಮಾಡಿಕೊಡಲು ದಾವಣಗೆರೆ ಆರ್.ಟಿ.ಒಗೆ ಮನವಿ ಸಲ್ಲಿಸಿದ್ದರು.

ವಾಹನದ ಮೇಲೆ ಈಗಾಗಲೇ ಒಂದು ಕ್ರಿಮಿನಲ್ ಪ್ರಕರಣದಲ್ಲಿ ಜಪ್ತಾಗಿ ನ್ಯಾಯಾಲಯದಿಂದ ತಾತ್ಕಾಲಿಕ ಸುಪರ್ದಿಗಾಗಿ ವಾಹನ ನೋಂದಾಯಿತ ಮಾಲೀಕರಿಗೆ ಕೊಡಮಾಡಲಾಗಿದೆ. ಹಾಗಾಗಿ ಸಾರ್ವಜನಿಕ ಹರಾಜಿನಲ್ಲಿ ಖರೀದಿಸಿದ ಖರೀದಿದಾರರಿಗೆ ವಾಹನ ವರ್ಗಾವಣೆ ಸಾಧ್ಯವಿಲ್ಲ ಎಂದು ಆರ್.ಟಿ.ಒ. ಅಧಿಕಾರಿಗಳು ತಿಳಿಸಿದ್ದರಿಂದ ಅಹಮದ್ ರಾಜಾಖಾನ ಅವರು ಶ್ರೀರಾಮ ಪೈನಾನ್ಸ್ ವಿರುದ್ಧ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ದೂರು ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ಆಯೋಗದ ಅಧ್ಯಕ್ಷ ಮಹಂತೇಶ ಈರಪ್ಪ ಶಿಗ್ಲಿ, ಸದಸ್ಯ ತ್ಯಾಗರಾಜನ್ ಮತ್ತು ಮಹಿಳಾ ಸದಸ್ಯರಾದ ಶ್ರೀಮತಿ ಬಿ.ಯು.ಗೀತಾ ನೇತೃತ್ವದ ತಂಡ ವಾಹನ ಖರೀದಿಸಿದ ಮೊತ್ತ ರೂ.ಎಂಟು ಲಕ್ಷ, ಭದ್ರತಾ ಠೇವಣಿ ಮೊತ್ತ ರೂ.18,880/-, ವಾಹನ ಸತತ ಮೂರು ವರ್ಷ ಕಾರ್ಯನಿರ್ವಹಸದೇ ನಿಂತಿದ್ದಕ್ಕೆ ಆರ್ಥಿಕ ನಷ್ಟ ರೂ. ಐದು ಲಕ್ಷ, ಪ್ರಕರಣದ ವೆಚ್ಚ ರೂ.10 ಸಾವಿರ ಸೇರಿ ರೂ.13,75,880ಗಳನ್ನು ಆದೇಶವಾದ 30 ದಿನದೊಳಗಾಗಿ ಗ್ರಾಹಕನಿಗೆ ಪಾವತಿಸಲು ಶ್ರೀರಾಮ ಪೈನಾನ್ಸ್ ಕಂಪನಿಗೆ ದಾವಣಗೆರೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಸೂಚನೆ ನೀಡಿದೆ.

## ಮಾಜಿ ಶಾಸಕರು ಕಾಂಗ್ರೆಸ್‌ಗೆ ಸೇರ್ಪಡೆ

(1ನೇ ಪುಟದಿಂದ) ಬಾಕಿ ಇದೆ. ಬಿಜೆಪಿಯವರು ಅರ್ಜೆಂಟ್ ಆಗಿ ಚುನಾವಣೆ ನಡೆಸಲು ಮುಂದಾಗಿದ್ದರು ಎಂದರು. ಕಳೆದ ತಿಂಗಳು 28 ಕಡೆಯ ಕಾರ್ಯ ನಿರ್ವಹಣೆ ದಿನ ಎಂದಿದ್ದರು. ಆದರೆ ದಿನ ಮುಂದೆ ಹೋಗುತ್ತಿದೆ. ಎಷ್ಟು ದಿನ ಸಿಗುತ್ತದೋ ಅನುಕೂಲ ಅನ್ನುವ ಭಾವನೆ ಸರ್ಕಾರದ್ದು. ಶಾರ್ಟ್ ಟರ್ಮ್ ಟೆಂಡರ್ ಆಗುತ್ತಿದೆ. ಗುತ್ತಿಗೆ ನೀಡಿಕೆ, ಹಣ ಬಿಡುಗಡೆ ಆಗುತ್ತಿದೆ ಎಂದು ಹೇಳಿದರು.

ಈಗ ಪಕ್ಷದೊಳಗಿಂದ ಮತ್ತು ಜನರಿಂದ ಬಿಜೆಪಿಗೆ ಶಾಕ್ ಎದುರಾಗುತ್ತಿದೆ. ರಾಷ್ಟ್ರೀಯ ನಾಯಕರು ಮತ ಬೇಟೆಗೆ ಬರುತ್ತಿದ್ದಾರೆ. ಇಲ್ಲಿನ ಜನರ ಭಾವನೆ, ಕಷ್ಟ, ಅಗತ್ಯ ಗಮನಕ್ಕೆ ಬಂದಿಲ್ಲ. ಅವರು ಯಾವ ಯಾತ್ರೆ ಬೇಕಾದರೂ ಮಾಡಲಿ. ನಾವು ಯಾವುದೇ ಕ್ಷಣದಲ್ಲಿ ಚುನಾವಣೆ ಎದುರಾದರೂ ಸಿದ್ಧ. ಚುನಾವಣಾ ಆಯೋಗ ಆದಷ್ಟು ಬೇಗ ಚುನಾವಣೆ ಘೋಷಿಸಬೇಕು ಎಂದರು.

ಇನ್ನೂ ಕೆಲವು ಹಾಲಿ ಶಾಸಕರು ಮುಂದಿನ ದಿನಗಳಲ್ಲಿ ಪಕ್ಷ ಸೇರಲಿದ್ದಾರೆ. ಅವರ ಹೆಸರು ಬಿಡುಗಡೆ ಮಾಡಲ್ಲ. ನಮ್ಮ ಸರ್ವೇ ಪ್ರಕಾರ 130 ಸ್ಥಾನ ಗೆಲ್ಲಲಿದ್ದೇವೆ. ಈ ಹಿಂದೆ 120 ಸ್ಥಾನ ಬರಬಹುದು ಎಂದು ಹೇಳಲಾಗುತ್ತಿತ್ತು. ಆದರೀಗ 130 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ. ಬದಲಾವಣೆ ಆರಂಭವಾಗಿದೆ. ಜನರು ಬೇಸತ್ತಿದ್ದಾರೆ. ನಮ್ಮ ಯಾತ್ರೆ ಎಷ್ಟು ಯಶಸ್ವಿಯಾಗಿದೆ ಎಂಬುದಕ್ಕಿದು ಕೈಗನ್ನಡಿ ಎಂದರು.

## ದೊಡ್ಡಬಾತಿಯಲ್ಲಿ ಇಂದು ರಾತ್ರಿ ಓಕಳಿ

ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಮಹಾರಥೋತ್ಸವದ ಅಂಗವಾಗಿ ಇಂದು ಬುಧವಾರ ರಾತ್ರಿ ಓಕಳಿ ನಡೆಯುವುದು. ಗಂಗಾ ಪೂಜೆ ಮಾಡಿದ ನಂತರ ಶ್ರೀ ಸ್ವಾಮಿ ದೇವಸ್ಥಾನಕ್ಕೆ ದಯಮಾಡಿಸುವ ಕಾರ್ಯಕ್ರಮ ನಡೆಯುವುದು ಎಂದು ತಹಶೀಲ್ದಾರ್ ಹಾಗೂ ಮುಜರಾಯಿ ಅಧಿಕಾರಿ ಡಾ. ಅಶ್ವತ್ಥ್ ಎಂ.ಬಿ. ತಿಳಿಸಿದ್ದಾರೆ.

# ಕಾನೂನು ಚೌಕಟ್ಟು ಮೀರಿ ಸಂಪತ್ತು ಹೊಂದಿದ್ದರೆ ಅವರ ವಿರುದ್ಧ ಕ್ರಮ


ರಾಣೇಬೆನ್ನೂರು

ರಾಣೇಬೆನ್ನೂರು, ಮಾ.7- ನಮ್ಮ ಪಕ್ಷಕ್ಕೆ ಬಂದವರು ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಮಂತ್ರಿಗಳಾಗಿದ್ದಾರೆ. ಅವರು ಎಲ್ಲರೊಡನೆ ವಿಶ್ವಾಸದಿಂದಲೇ ಇದ್ದಾರೆ. ಆದರೆ ನಾರಾಯಣಗೌಡ್ರು ಮಾತ್ರ ಗಲಿಬಿಲಿ ಮಾಡಿಕೊಂಡಿದ್ದಾರೆ. ಯಾಕೋ ಗೊತ್ತಿಲ್ಲ, ಪಕ್ಷದ ಹಿರಿಯರು ಸರಿ ಮಾಡ್ತಾರೆ ಎಂದು ಸಚಿವ ಕೋಟಾ ಶ್ರೀ ನಿವಾಸ ಪೂಜಾರಿ ಹೇಳಿದರು.

ಅವರು ತಾಲ್ಲೂಕಿನ ಮಾಕನೂರ ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಗೂ ಪೂರ್ವದಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದರು.

ಚುನಾವಣೆ ಸನಿಹದ ಸಂದರ್ಭದಲ್ಲಿ ಇಂತಹ ಘಟನೆಗಳು ಸ್ವಾಭಾವಿಕ. ಇವು ಕೇವಲ ಬಿಜೆಪಿಯಲ್ಲಿಲ್ಲ ಎಲ್ಲ ಪಕ್ಷಗಳಲ್ಲೂ ನಡೆಯುತ್ತಿರುತ್ತವೆ. ಅವುಗಳನ್ನು ಸರಿಪಡಿಸಲು ಪಕ್ಷದ ವರಿಷ್ಠರಿದ್ದಾರೆ, ಪಕ್ಷದಲ್ಲಿ ಹಿರಿಯರಿದ್ದಾರೆ. ಅವರೆಲ್ಲ ನೋಡಿಕೊಳ್ಳುತ್ತಾರೆ. ವಿ. ಸೋಮಣ್ಣ ಎಲ್ಲೂ ಹೋಗಲ್ಲಾ, ನಮ್ಮ ಜೊತೆಗೇನೇ ಇರ್ತಾರೆ ಎಂದು ಸಚಿವ ಪೂಜಾರಿ ಹೇಳಿದರು.

ಲೋಕಾಯುಕ್ತದ ಎಲ್ಲ ಅಧಿಕಾರ ಕಿತ್ತುಕೊಂಡ ಕಾಂಗ್ರೆಸ್ ಸರ್ಕಾರ ಕೇವಲ ಬೋರ್ಡ್ ಮಾತ್ರ ಇಟ್ಟಿತ್ತು. ಕಾಂಗ್ರೆಸ್ ಎಸಿಬಿ ರಚಿಸುವ ಮೂಲಕ ರಾಜಕಾರಣಿಗಳನ್ನು ಲೋಕಾಯುಕ್ತದಿಂದ ಹೊರತಂದಿತ್ತು. ಹೈಕೋರ್ಟ್ ನಿರ್ದೇಶನದಂತೆ ಲೋಕಾಯುಕ್ತಕ್ಕೆ ನಾವು ಶಕ್ತಿ ತುಂಬಿದ್ದೇವೆ. ಭ್ರಷ್ಟಾಚಾರಿಗಳನ್ನು ರಕ್ಷಿಸುವುದಾಗಿದ್ದರೆ ನಮ್ಮ ಸರ್ಕಾರ ಶಕ್ತಿ ತುಂಬುವ ಕೆಲಸ ಮಾಡದೇ ಸುಪ್ರಿಂ ಕೋರ್ಟ್ ಮೊರೆ ಹೋಗುತ್ತಿದ್ದೆವು ಎಂದು ಸಚಿವ ಪೂಜಾರಿ ಹೇಳಿದರು.

ಕಾನೂನು ಚೌಕಟ್ಟು ಮೀರಿ ಸಂಪತ್ತು ಹೊಂದಿದ್ದರೆ ಅಂತವರ ಅಧಿಕಾರ, ಅಂತಸ್ತು, ಪಕ್ಷ ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಅವರ ಆಸ್ತಿ, ಅಂತಸ್ತುಗಳ ಮೇಲೆ ರೈಡ್ ಮಾಡುವುದು, ಕಾನೂನು ಕ್ರಮ ಜರುಗಿಸುವುದು ಲೋಕಾಯುಕ್ತದ ಕೆಲಸ. ಇಲ್ಲಿ ಯಾರನ್ನೂ ರಕ್ಷಿಸುವ ಕೆಲಸ ನಡೆಯಲ್ಲ ಎಂದು ವಿವರಿಸಿದ ಸಚಿವ ಶ್ರೀನಿವಾಸ ಪೂಜಾರಿ, ಕಾಂಗ್ರೆಸ್‌ನವರ ಬಹಳಷ್ಟು ಮುಖಂಡರ ಕನಸಲ್ಲಿ ಅಮಿತ್ ಶಾ ಬರುವುದರಿಂದ ಅವರ ಹೆಸರು ಜಪಿಸುತ್ತಾರೆ. ಮಾಡಾಳು ವಿರುಪಾಕ್ಷಪ್ಪ ಮೇಲೆ ಕಾನೂನು ಕ್ರಮ ಜರುಗಲಿದೆ ಎಂದು ಹೇಳಿದರು. ಶಾಸಕ ಅರುಣಕುಮಾರ ಪೂಜಾರ ಜೊತೆಗಿದ್ದರು.

## ಕುಂಬಳೂರಿನಲ್ಲಿ ನಾಳೆ ಹನುಮಂತ ದೇವರ ತೇರು



ಮಲೇಬೆನ್ನೂರು, ಮಾ. 7 - ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ರಥೋತ್ಸವವು ನಾಳೆ ದಿನಾಂಕ 9ರ ಗುರುವಾರ ಜರುಗಲಿದೆ. ದಿನಾಂಕ 8ರ ಬುಧವಾರ ರಾತ್ರಿ 9.30ಕ್ಕೆ ಕುದುರೆ ಉತ್ಸವದ ನಂತರ ರಾತ್ರಿ 12 ಕ್ಕೆ ಮಹಾರಥಕ್ಕೆ ಕಳಸ ಸ್ಥಾಪನೆ ಮಾಡಲಾಗುವುದು.

ದಿನಾಂಕ 9ರ ಗುರುವಾರ ಬೆಳಿಗ್ಗೆ 8.30ಕ್ಕೆ ಆನೆ ಉತ್ಸವ, ಮಧ್ಯಾಹ್ನ 12ಕ್ಕೆ ಹರಿಸೇವೆ. ಭಕ್ತಾದಿಗಳಿಂದ ಹರಕೆ, ಬಾಯಿಬೀಗ, ಕಿವಿ ಚುಚ್ಚುವುದು, ಜವಳ, ದಿಂಡು ಉರುಳು ಸೇವೆ ಸೇರಿದಂತೆ ವಿವಿಧ ಹರಕೆಗಳು ನಡೆಯಲಿದ್ದು, ಮಧ್ಯಾಹ್ನ 3 ಗಂಟೆಗೆ ಸಂಪ್ರದಾಯದಂತೆ ಸರಳ ರಥೋತ್ಸವ ನೆರವೇರಲಿದೆ.

ಇದೇ ದಿನ ತಡರಾತ್ರಿ (ಶುಕ್ರವಾರ ಬೆಳಗಿನ ಜಾವ) ಸ್ವಾಮಿಯ ಮಹಾರಥೋತ್ಸವವು ಶ್ರೀ ಬಸವೇಶ್ವರ ಶ್ರೀ ಬೀರಲಿಂಗೇಶ್ವರ ದೇವರಗಳೊಡಗೊಡಿ ಜರುಗಲಿದೆ.

ದಿನಾಂಕ 10ರ ಶುಕ್ರವಾರ ಬೆಳಿಗ್ಗೆ 10 ರಿಂದ 11.30ರವರೆಗೆ ಸಾಮೂಹಿಕ ವಿವಾಹಗಳನ್ನು ಹಮ್ಮಿಕೊಂಡಿದ್ದು, ಇಡೀ ದಿನ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಮಧ್ಯಾಹ್ನ 4 ಗಂಟೆಗೆ ಮುಳ್ಳೋತ್ಸವ ಇರುತ್ತದೆ. ರಾತ್ರಿ ಕಂಕಣ ವಿಸರ್ಜನೆ ನಂತರ ಓಕಳಿ, ಭೂತಗಳ ಮಣೇವು ಸೇವೆಯೊಂದಿಗೆ ಜಾತ್ರೆಗೆ ತೆರೆಬೀಳಲಿದೆ.

## ನಾಳೆಯಿಂದ ಬ್ರಹ್ಮಲೀನ ಸದ್ಗುರುಗಳ ಸಂಸ್ಮರಣೆ


ಯಲವಟ್ಟಿ

ಮಲೇಬೆನ್ನೂರು, ಮಾ. 7 - ಯಲವಟ್ಟಿ ಗ್ರಾಮದ ಶ್ರೀ ಗುರುಸಿದ್ಧಾಶ್ರಮದಲ್ಲಿ ಇದೇ ದಿನಾಂಕ 9 ರ ಗುರುವಾರ ಮತ್ತು 10 ರ ಶುಕ್ರವಾರ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಸ್ವಾಮೀಜಿ ಹಾಗೂ ಶ್ರೀ ನಿತ್ಯಾನಂದ ಸ್ವಾಮೀಜಿ ಅವರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ಪತ್ರಕರ್ತರಿಗೆ ತಿಳಿಸಿದ್ದಾರೆ.

ದಿನಾಂಕ 9 ರ ಗುರುವಾರ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಗುರು ಕಲಶ ಸ್ಥಾಪನೆ, ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಭಗವದ್ಗೀತಾ, ಸಾಮೂಹಿಕ ಪಾರಾಯಣದ ನಂತರ ಬೆಳಿಗ್ಗೆ 9 ಗಂಟೆಗೆ ಮಹಾತ್ಮರಿಂದ ಪ್ರಣವ ಧ್ವಜಾರೋಹಣ ನೆರವೇರಿಸಲಾಗುವುದು. ನಂತರ ವೇದಾಂತ ಪ್ರವಚನ ಮತ್ತು ಸಂಜೆ 7 ಕ್ಕೆ ಸತ್ಸಂಗ ಕಾರ್ಯಕ್ರಮ ಇರುತ್ತದೆ.

ದಿನಾಂಕ 10 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಉಭಯ ಶ್ರೀಗಳವರ ಪುಣ್ಯಸ್ಮರಣೆ, ವೇದಾಂತ ಪ್ರವಚನ ಮತ್ತು ಮಹಾತ್ಮರ ಪಾದಪೂಜೆ ನಂತರ ಮಹಾಪ್ರಸಾದದೊಂದಿಗೆ ಕಾರ್ಯಕ್ರಮ ಮಂಗಲಗೊಳ್ಳುವುದು.

ಈ ಎರಡೂ ದಿನಗಳ ಕಾರ್ಯಕ್ರಮದಲ್ಲಿ ಚಿತ್ರದುರ್ಗ ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ, ದಾವಣಗೆರೆಯ ಜಡೇಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ, ಇಬ್ರಾಹಿಂಪುರದ ಶ್ರೀ ದಯಾನಂದ ಸ್ವಾಮೀಜಿ, ಹದಡಿಯ ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ, ಹೋತನ ಹಳ್ಳಿಯ ಶ್ರೀ ಶಂಕರಾನಂದ ಸ್ವಾಮೀಜಿ, ದಾಗಿನಕಟ್ಟೆ ಮತ್ತು ಬಸವಾಪಟ್ಟಣ ಮಠಗಳ ಕೃಷ್ಣಾನಂದ ಭಾರತಿ ಸ್ವಾಮೀಜಿಗಳು, ಮಣಕೂರಿನ ಶ್ರೀ ಚನ್ನಬಸಮ್ಮ ತಾಯಿ ಅವರು ಸಾನಿಧ್ಯ ವಹಿಸಲಿದ್ದಾರೆ.

ಸಂಸದ ಜಿ.ಎಂ. ಸಿದ್ಧೇಶ್ವರ, ಶಾಸಕ ಎಸ್. ರಾಮಪ್ಪ, ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಮೋಹನ್ ಕುಮಾರ್ ಕೊಂಡಜ್ಜಿ, ಸೇರಿದಂತೆ ಇನ್ನೂ ಅನೇಕರು ಭಾಗವಹಿಸಲಿದ್ದಾರೆ.

## ಆಧುನಿಕ ಮಹಿಳೆ

ಆಧುನಿಕ ಜಗತ್ತು ಬದಲಾಗುತ್ತಿರುವಂತೆ
ಪ್ರಕೃತಿಸಿರಿಯ ಮಾರ್ಪಾಡಿನಂತೆ
ಮಹಿಳೆ ಮಾತೆಯಾಗಿ; ಮಗಳಾಗಿ;
ಸೊಸೆಯಾಗಿ; ಅತ್ತೆ, ನಾದಿನಿ; ಅಜ್ಜಿಯಾಗಿ
ಮನೆಯ ಮಂಗಳ ಜ್ಯೋತಿಯಾಗಿ
ಮಹಾಲಕ್ಷ್ಮಿಯಾಗಿ;
ಸರ್ವ ಸಂಪನ್ನ ಪತಿಗೆ ಸದ್ಗೃಹಿಣಿಯಾಗಿ
ಸಬಲಳಾಗಿದ್ದಾಳೆ;
ಭವ್ಯ ಭಾರತದ ಸರ್ವ ಶ್ರೇಷ್ಠ ಆಧುನಿಕ ಮಹಿಳೆ!

ಭವ್ಯ ಬದುಕಿನ ಸಾಕಾರಕ್ಕೆ
ಒಮ್ಮೆ ಧರ್ಮ ದೇವತೆಯಾಗಿ
ಮತ್ತೊಮ್ಮೆ ರಣಚಂಡಿಯಾಗಿ
ಹೋರಾಟ ಅನಿವಾರ್ಯವಾಗಿ
ಛಲ- ಗುರಿ ಬದುಕಿನ ಬೆಂಗಾವಲಾಗಿ
ಮುನ್ನಡೆ ಸಾಧಿಸಿದ್ದಾಳೆ ಆಧುನಿಕ ಮಹಿಳೆ!

ಸಮಾಜದ ಸಂಜೀವಿನಿಯಾಗಿ
ಸರ್ವ ಶಕ್ತಿಯ ಛಲಗಾರ್ತಿಯಾಗಿ
ಕುಟುಂಬದ ಸರ್ವಸ್ವವಾಗಿ
ಸರ್ವರ ಹಿತ ಕಾಪಾಡಿ
ಮನೆಯೊಡತಿಯಾಗಿ
ಮನೆಯ ಮಹಾಲಕ್ಷ್ಮಿಯಾಗಿ
ಪತಿಯ ಯಶಸ್ಸಿನ ಹಿಂದೆ ಬೆನ್ನೆಲುಬಾಗಿ
ವಿಶ್ವದೆಲ್ಲೆಡೆ ಮನ್ನಣೆ ಗಳಿಸಿದ್ದಾಳೆ ಆಧುನಿಕ
ಮಹಿಳೆ!

ಭವ್ಯ ಭಾರತದ ಅಧಿಪತಿ ರಾಷ್ಟ್ರಪತಿ ಮಹಿಳೆ
ತನ್ನ ಶಕ್ತಿ ಸಾಮರ್ಥ್ಯವ ತೋರಿ
ರಾಷ್ಟ್ರಪತಿ ಹುದ್ದೆಯನೇರಿ
ತನ್ನ ಪ್ರತಿಭೆಯ ತೋರಿದ್ದಾಳೆ
ಶ್ರೀಮತಿ ದ್ರೌಪದಿ ಮುರ್ಮು
ವಿಶ್ವಶಕ್ತಿಯಾಗಿ ಮಹಾನ್ ವ್ಯಕ್ತಿಯಾಗಿ
ಮುನ್ನಡೆಯುತ್ತಿದ್ದಾಳೆ
ಆಧುನಿಕ ಮಹಿಳೆ!

- ಜೆಂಬಿಗಿ ಮೃತ್ಯುಂಜಯ
ಕನ್ನಡ ಉಪನ್ಯಾಸಕರು, ದಾವಣಗೆರೆ

## ಆಂಜನೇಯ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ


ಹರಪನಹಳ್ಳಿ

ಹರಪನಹಳ್ಳಿ, ಮಾ. 7 - ತಾಲ್ಲೂಕಿನ ರಾಗಿಮಸಲವಾಡ ಗ್ರಾಮದ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯ ಸೋಮವಾರ ನಡೆದಿದ್ದು, ಒಟ್ಟು 79,940 ರೂ. ಹಣ ಸಂಗ್ರಹವಾಗಿದೆ ಎಂದು ಮುಜರಾಯಿ ಇಲಾಖೆ ಕಾರ್ಯ ನಿರ್ವಾಹಣಾಧಿಕಾರಿ ಮಲ್ಲಪ್ಪ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯರಾದ ಶೇಖರಗೌಡ, ಮುಖಂಡರಾದ ಹೆಗ್ಗಪ್ಪರ ಶಂಭುಲಿಂಗಪ್ಪ, ಎಸ್.ಆರ್. ಚಿಕ್ಕನಗೌಡ, ಎಸ್.ಟಿ. ಮಂಜಪ್ಪ, ಸೊಕ್ಕೆ ರಮೇಶ, ಶೇಖರಪ್ಪ, ಎಸ್. ಚಂದ್ರಪ್ಪ, ಎಚ್. ಸೋಮಪ್ಪ, ಎ. ನಾಗರಾಜ, ಬಾಬಣ್ಣ, ರವಿಕುಮಾರ, ಸಿ. ಭೀಮಪ್ಪ, ಗೋವಿಂದಪ್ಪ, ಗುಮಾಸ್ಥರಾದ ನಾಗರಾಜ, ಗಂಗಾಧರ, ಚನ್ನಬಸವರಾಜ ಸೇರಿದಂತೆ ಇತರರು ಇದ್ದರು.

## ಮಾಡಾಳ್‌ಗೆ ನಿರೀಕ್ಷಣಾ ಜಾಮೀನು

(1ನೇ ಪುಟದಿಂದ) ಲೋಕಾಯುಕ್ತ ಪರ ಹಾಜರಾಗಬೇಕಿದ್ದ ವಕೀಲ ವಿ.ವಿ. ಪಾಟೀಲ್ ಗೈರು ಹಾಜರಾಗಿದ್ದರು. ಈ ಹಂತದಲ್ಲಿ ನನ್ನ ವಿರುದ್ಧ ಕಾನೂನು ಬಾಹಿರವಾಗಿ ಮತ್ತು ಕಿರುಕುಳ ಕೊಡುವ ದುರುದ್ದೇಶದಿಂದ ಎಫ್‌ಐಆರ್ ದಾಖಲು ಮಾಡಲಾಗಿದೆ.

ನಾನು ಲಂಚವನ್ನು ಕೇಳಿಯೂ ಇಲ್ಲ ಮತ್ತು ಪಡೆದೂ ಇಲ್ಲ. ಪ್ರಕರಣದಲ್ಲಿ ನನ್ನನ್ನು ಮೊದಲ ಆರೋಪಿಯನ್ನಾಗಿ ಮಾಡಿದ್ದಾರೆ. ಇದರಲ್ಲಿ ಯಾವುದೇ ಪಾತ್ರವಿಲ್ಲ ಎಂದು ವಕೀಲರು ತಮ್ಮ ಕಕ್ಷಿದಾರರ ಪರ ವಾದ ಮಂಡಿಸಿದರು. ವಿರೂಪಾ ಕ್ಷಪ್ಪ ಅವರ ಪುತ್ರ ಪ್ರಶಾಂತ್ ಮಾಡಾಳು ಟೆಂಡರ್ ಪ್ರಕ್ರಿಯೆಯಲ್ಲಿ 40 ಲಕ್ಷ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ, ಲೋಕಾಯುಕ್ತ ಪೊಲೀಸರು ಇದೇ 2 ರಂದು ದೂರು ದಾಖಲಿಸಿದ್ದರು.

## ಉಳಿದೆಲ್ಲರಿಗೂ ಟಿಕೆಟ್

(1ನೇ ಪುಟದಿಂದ) ಕ್ಷೇತ್ರಗಳಲ್ಲಿ ಗೆದ್ದು, ಸ್ವತಂತ್ರವಾಗಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಭವಿಷ್ಯ ನುಡಿದರು.

ಚುನಾವಣಾ ಸಂದರ್ಭದಲ್ಲಿ ಪಕ್ಷದಿಂದ ಪಕ್ಷಕ್ಕೆ ಜಿಗಿಯುವುದು ಸಹಜ. ನಮ್ಮಿಂದ ಯಾರೇ ಅನ್ಯ ಪಕ್ಷಗಳಿಗೆ ಪಕ್ಷಾಂತರ ಮಾಡಿದರೂ, ಬಿಜೆಪಿ ಗಟ್ಟಿಯಾಗಿಯೇ ಇರುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದೇ ಬಿಟ್ಟೆವು ಎಂದು ಮುಖ್ಯಮಂತ್ರಿ ಗದ್ದುಗೆಯ ಕನಸು ಕಾಣುತ್ತಿದ್ದಾರೆ ಕೆಲವರು. ಅದು ಅವರ ಕನಸು ಕನಸಾಗಿಯೇ ಉಳಿಯುತ್ತದೆ ಎಂದರು.

## ನಗರದಲ್ಲಿ ಇಂದು ಜಿಲ್ಲಾ ಉತ್ಪನ್ನಗಳ ಪ್ರದರ್ಶನ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಜಿಲ್ಲಾ ಮಟ್ಟದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

# ಕಾಂಗ್ರೆಸ್‌ನಿಂದ ಸಹಾಯ ಧನ-ಉಚಿತ ವಿದ್ಯುತ್‌ನ ಗ್ಯಾರಂಟಿ ಕಾರ್ಡ್ ವಿತರಣೆ


ರಾಣೇಬೆನ್ನೂರು

ರಾಣೇಬೆನ್ನೂರು, ಮಾ.7- ಬಡವರ ಕೈಗೆಟುಕದ ಬೆಲೆ ಏರಿಕೆ, ಜಿಎಸ್‌ಟಿ ಸುಲಿಗೆ ಮುಂತಾದ ಜನ ವಿರೋಧಿ ನೀತಿಯ ಬಿಜೆಪಿ ಆಡಳಿತದಿಂದ ರಾಜ್ಯದ ಜನತೆ ಬಹಳಷ್ಟು ನೋವು ಅನುಭವಿಸುತ್ತಿದ್ದು, ಅವರನ್ನು ಮನೆಗೆ ಕಳಿಸಲು ಚುನಾವಣೆಯ ದಿನಾಂಕ ಕಾಯುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡರು ಹೇಳಿದರು.

ಗ್ಯಾಸ್ ಸಿಲಿಂಡರ್, ಜಿಎಸ್ ಟಿ ಹಾಗೂ ಬೆಲೆ ಏರಿಕೆ ಇವುಗಳ ನಿರ್ವಹಣೆಗೆ ಕಾಂಗ್ರೆಸ್ ಪಕ್ಷ ಪ್ರತಿ ಮನೆಯ ಒಡತಿಗೆ ಪ್ರತಿ ತಿಂಗಳು ಎರಡು ಸಾವಿರ ಸಹಾಯಧನ ಹಾಗೂ ಇನ್ನೂರು ಯೂನಿಟ್ ಉಚಿತ ವಿದ್ಯುತ್ ನೀಡುವ ಗ್ಯಾರಂಟಿ ಕಾರ್ಡ್‌ಗಳನ್ನು ಇಲ್ಲಿನ ವಿನಾಯಕ ನಗರದಲ್ಲಿ ವಿತರಿಸಿದ ಡಾ. ಪ್ರವೀಣ ಖನ್ನೂರ, ಪ್ರಕಾಶ ಕೋಳಿವಾಡ, ಜಟ್ಟೆಪ್ಪ ಕರೇಗೌಡ ಹೇಳಿದರು.

2013ರಲ್ಲಿ ಪಕ್ಷ ನೀಡಿದ್ದ ಪ್ರಣಾಳಿಕೆಯಲ್ಲಿ ಶೇಕಡಾ 95 ರಷ್ಟು ಭರವಸೆಗಳನ್ನು ಪೂರೈಸಿದ ಅಂದಿನ ಮುಖ್ಯಮಂತ್ರಿಗಳು ಅತ್ಯುತ್ತಮ ಆಡಳಿತ ನೀಡಿದರು. ಈ ಬಾರಿಯೂ ಸಹ ಜನಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡು ಪಕ್ಷದ ಮುಖಂಡರಾದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಜನಮೆಚ್ಚುವ ಸರ್ಕಾರ ರಚಿಸಲಿದ್ದಾರೆ ಎಂದರು.

ಇದಕ್ಕೂ ಮೊದಲು ಕಾಂಗ್ರೆಸ್ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಗ್ರಾಮೀಣ ಅಧ್ಯಕ್ಷ ಮಂಜನಗೌಡ ಪಾಟೀಲ, ನಗರ ಅಧ್ಯಕ್ಷ ಶೇರು ಕಾಬೂಲಿ, ಮುಖಂಡರಾದ ಕೃಷ್ಣಪ್ಪ ಕಂಬಳಿ, ಪುಟ್ಟಪ್ಪ ಮರಿಯಮ್ಮನವರ, ಅಶೋಕ ಗಂಗನಗೌಡ್ರ, ಶಿವಾನಂದ ಕನ್ನಪ್ಪಳವರ, ಗುರು ಕಂಬಳಿ ಮತ್ತಿತರರಿದ್ದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿನ ಪ್ರಜಾಧ್ವನಿ ಯಾತ್ರೆಯು ದಿನಾಂಕ 11ರಂದು ಸಂಜೆ ರಾಣೇಬೆನ್ನೂರಿಗೆ ಬರಲಿದೆ. ಹಲಗೇರಿ ಬೈಪಾಸ್ ಬಳಿ ಸ್ವಾಗತಿಸಿಕೊಂಡು ಹಳೆ ಹೆದ್ದಾರಿ ಮೂಲಕ ಹಾಯ್ದು ನ್ಯಾಯಾಲಯ, ಮೆಡ್ಲೇರಿ ಕ್ರಾಸ್ ಮೂಲಕ ಬಹಿರಂಗ ಸಭೆ ನಡೆಯುವ ಉರ್ದು ಹೈಸ್ಕೂಲ್ ಮೈದಾನಕ್ಕೆ ತೆರಳಲಿದೆ.

## ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ

(1ನೇ ಪುಟದಿಂದ) ಲೆಕ್ಕ ಇದೆ. ಲೆಕ್ಕ ಕೊಟ್ಟು ಆ ಹಣ ವಾಪಸ್ ಪಡೆಯುತ್ತೇವೆ ಎಂದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾನು ಪಕ್ಷದ ಶಾಸಕ ಎಂಬುದನ್ನು ನೋಡದೇ ಕಾನೂನು ಪಾಲಿಸಿ ಎಂದು ಲೋಕಾಯುಕ್ತರಿಗೆ ತಿಳಿಸಿದ್ದಾರೆ. ಆಡಳಿತಾರೂಢ ಶಾಸಕರ ಮನೆ ಮೇಲೆ ದಾಳಿ ನಡೆದಿರುವುದು ಇದೇ ಮೊದಲು. ಇದರಿಂದ ಪಕ್ಷಕ್ಕೆ ಧಕ್ಕೆಯಾಗಿಲ್ಲ. ಭ್ರಷ್ಟಾಚಾರ ಆರೋಪದಿಂದ ಮುಕ್ತನಾಗಿ ಬರುತ್ತೇನೆ ಎಂದರು.

ನನಗೆ ಲೋಕಾಯುಕ್ತದಿಂದ ಇದುವರೆಗೂ ಯಾವುದೇ ನೋಟಿಸ್ ಬಂದಿಲ್ಲ. 48 ಗಂಟೆಗಳ ಒಳಗೆ ಲೋಕಾಯುಕ್ತರ ಎದುರು ವಿಚಾರಣೆಗೆ ಹಾಜರಾಗುವಂತೆ ಜಾಮೀನು ನೀಡುವಾಗ ಹೈಕೋರ್ಟ್ ತಿಳಿಸಿದೆ. ಆ ಅವಧಿಯಲ್ಲಿ ವಿಚಾರಣೆಗೆ ಹಾಜರಾಗುತ್ತೇನೆ ಎಂದರು.

ಮುಂದಿನ ಚುನಾವಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಎರಡು ಬಾರಿ ಪಕ್ಷ ನನ್ನನ್ನು ಶಾಸಕನನ್ನಾಗಿ ಮಾಡಿದೆ. ಪಕ್ಷ ನನಗೆ ತಾಯಿ ಇದ್ದಂತೆ. ದ್ರೋಹ ಮಾಡುವುದಿಲ್ಲ. ಪಕ್ಷ ಹೇಳಿದಂತೆ ಕೇಳುತ್ತೇನೆ ಎಂದರು.

ಕರ್ನಾಟಕ ಸಾಬೂನು ಹಾಗೂ ಮಾರ್ಜಕ ನಿಯಮಿತದಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಯಾವುದೇ ಅವ್ಯವಹಾರ ನಡೆದಿಲ್ಲ. ಅಧ್ಯಕ್ಷನಿಗೆ ಆಡಳಿತಾತ್ಮಕ ಹಾಗೂ ಟೆಂಡರ್ ನಿರ್ಧರಿಸುವ ಅಧಿಕಾರ ಇರುವುದಿಲ್ಲ ಎಂದು ವಿರೂಪಾಕ್ಷಪ್ಪ ಹೇಳಿದರು.

ಕಂಪನಿ ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿದೆ. ಅಧಿಕಾರ ವಹಿಸಿಕೊಂಡಾಗ ಅದರ ಲಾಭ 40 ಕೋಟಿ ರೂ. ಇದ್ದದ್ದು, ಈಗ 240 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ನನ್ನ ಮೇಲೆ ಆರೋಪ ಬಂದ ಹಿನ್ನೆಲೆಯಲ್ಲಿ ಪಕ್ಷ ನಿಗಮದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಕ್ರಮ ತೆಗೆದುಕೊಂಡಿದೆ. ಇದರಲ್ಲಿ ತಪ್ಪೇನೂ ಇಲ್ಲ ಎಂದವರು ಹೇಳಿದರು. ಯಾರೋ ದುರುದ್ದೇಶದಿಂದ ಈ ಕೆಲಸ ಮಾಡಿದ್ದಾರೆ. ಹಿಂದಿನ ಚುನಾವಣೆಯಲ್ಲಿ ನನ್ನ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ಮಾಡಿಸಿದ್ದರು. ಅದಕ್ಕೂ ಹಿಂದಿನ ಚುನಾವಣೆಯಲ್ಲಿ ಇನ್ನೇನೋ ಮಾಡಿಸಿದ್ದರು, ಇದೀಗ ಲೋಕಾಯುಕ್ತ ದಾಳಿ ಮಾಡಿಸಿದ್ದಾರೆ ಎಂದಿದ್ದಾರೆ.


**ಮಾಡಾಳ್ ಮೆರವಣಿಗೆ :** ಈ ವೇಳೆ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮಾಡಾಳ್ ಅವರನ್ನು ಹೆಗಲ ಮೇಲೆ ಹೊತ್ತು ಕುಣಿದರು. ಮೈಸೂರು ಪೇಟೆ ಹಾಗೂ ಹಾರ ಹಾಕಿದರು. ತೆರೆದ ವಾಹನದ ಮೇಲೆ ಮೆರವಣಿಗೆ ಮಾಡಿ ಪುಷ್ಪವೃಷ್ಟಿ ಮಾಡಲಾಯಿತು. ಮಾಡಾಳ್ ಪರ ಜೈಕಾರದೊಂದಿಗೆ, ಕಾರ್ಯಕರ್ತರು ಬಿಜೆಪಿ ಬಾವುಟ ಬೀಸುತ್ತಾ ಸಂಭ್ರಮಿಸಿದರು.

## ಹರಿಹರ ಪತ್ರಕರ್ತ ರಾಘವೇಂದ್ರಗೆ ಶ್ರದ್ಧಾಂಜಲಿ



ಹರಿಹರ, ಮಾ. 7 - ಇತ್ತೀಚೆಗೆ ಅಗ್ನಿ ಅನಾಹುತದಲ್ಲಿ ಮರಣ ಹೊಂದಿದ ಪತ್ರಕರ್ತ ಆರ್.ರಾಘವೇಂದ್ರ ಇವರಿಗೆ ಹರಿಹರ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಿಕಾ ಭವನದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಸಿ. ಕೀರ್ತಿಕುಮಾರ್, ಮಾಜಿ ಅಧ್ಯಕ್ಷ ಇನಾಯತ್ ಉಲ್ಲಾ ಟಿ., ಪದಾಧಿಕಾರಿಗಳಾದ ಎಚ್.ಸುಧಾಕರ, ಶೇಖರ್‌ಗೌಡ ಪಾಟೀಲ್, ಬಿ.ಎಂ.ಚಂದ್ರಶೇಖರ್, ಎಂ. ಎಸ್.ಆನಂದ್ ಕುಮಾರ್, ತರಂಗಿಣಿ ಮಂಜುನಾಥ್, ಚಂದ್ರಶೇಖರ ಕುಂಬಾರ್, ಚಿದಾನಂದ ಕಂಚಿಕೇರಿ, ಮಂಜುನಾಥ ರಾಜನಹಳ್ಳಿ, ವಿಶ್ವನಾಥ ಮೈಲಾಳ, ಎಚ್. ಶಿವಪ್ಪ, ಇರ್ಫಾನ್ ಖಾನ್, ಗಂಗನರಸಿ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಹ್ಯಾಂಡ್‌ಬಾಲ್ ಕ್ರೀಡಾಪಟುಗಳ ಸಾಧನೆ



ದಾವಣಗೆರೆ, ಮಾ. 6- ನಗರದ ಜಿ.ಎಂ.ಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಾದ ಕು. ಧನುಶ್ರೀ, ಕು. ಕ್ಷೇಮಾ ಏಂಜೆಲ್ ಹಾಗೂ ಕು. ಭೂಮಿಕ ಕೆ. ಬಿ ಇವರು ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆದ ಅಖಿಲ ಭಾರತೀಯ ದಕ್ಷಿಣ ವಲಯ ಹ್ಯಾಂಡ್‌ಬಾಲ್ (ಮ) ಪಂದ್ಯಾವಳಿಯಲ್ಲಿ ಪ್ರತಿನಿಧಿಸಿದ್ದರು.

### ಸಣ್ಣ ಹನುಮಪ್ಪ ಬಸವರಾಜ್ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ಸಣ್ಣ ಹನುಮಪ್ಪ ಬಸವರಾಜಪ್ಪ ಅವರು ದಿನಾಂಕ 07.03.2023ರ ಮಂಗಳವಾರ ಸಂಜೆ 7.10ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.03.2023ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಹಳೇಬಾತಿ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

## ಹರಿಹರ : ಪಿ.ಯು. ವಿದ್ಯಾರ್ಥಿನಿ ವರ್ಷ ಆತ್ಮಹತ್ಯೆ



ಹರಿಹರ, ಮಾ. 7 - ನಗರದ ಎಸ್.ಜೆ.ವಿ.ಪಿ. ಪಾಲಿಟೆಕ್ನಿಕ್ ಕಾಲೇಜು ಪಕ್ಕದಲ್ಲಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್‌ನಲ್ಲಿ ಇಂದು ಮಧ್ಯಾಹ್ನ ವರ್ಷ (18) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಂಬೇಡ್ಕರ್ ಪಿ.ಯು. ಕಾಲೇಜಿನಲ್ಲಿ ಕಾಮರ್ಸ್ ವಿದ್ಯಾರ್ಥಿನಿಯಾಗಿ ವರ್ಷ, ವೇಲಿನಿಂದ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದಾರೆ.

ಈ ವೇಳೆ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಾಸ್ಟೆಲ್‌ನಲ್ಲಿ ನಡೆಯುವ ಕೆಲವು ನ್ಯೂನತೆಗಳನ್ನು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಎಸ್ಸಿ, ಎಸ್ಟಿ ಸಮುದಾಯದ ಸಭೆಯಲ್ಲಿ ಸಹ ಪ್ರಸ್ತಾಪವನ್ನೂ ಸಹ ಮಾಡಲಾಗಿತ್ತು. ಅಧಿಕಾರಿಗಳು ಸಾವಿನ ಬಗ್ಗೆ ತನಿಖೆ ಮಾಡಿ ನೊಂದ ಕುಟುಂಬಕ್ಕೆ ನ್ಯಾಯವನ್ನು ಕೊಡಿಸಲು ಮುಂದಾಗಬೇಕಾಗಿದೆ ಎಂದು ಹೇಳಿದರು.

ಹಾಸ್ಟಲ್ ವಾರ್ಡನ್ ಅರ್ಜುಮನ್ ಬಾನು ಮಾತನಾಡಿ, ವರ್ಷ ಉತ್ತಮ ವಿದ್ಯಾರ್ಥಿನಿ ಆಗಿದ್ದು, ಅವಳು ಇಂತಹ ಕೃತ್ಯವನ್ನು ಮಾಡಿಕೊಳ್ಳುತ್ತಾಳೆ ಎಂದು ಊಹಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಾಸೀರ್ ಉದ್ದೀನ್ ಮಾತನಾಡಿ, ವಿದ್ಯಾರ್ಥಿನಿ ಆತ್ಮಹತ್ಯೆ ಬಗ್ಗೆ ನಿಖರ ಮಾಹಿತಿ ಕಲೆ ಹಾಕುತ್ತಿರುವುದಾಗಿ ಹೇಳಿದರು.

## ಜಿಗಳಿ : ಸಂಭ್ರಮದ ಹೋಳಿ ದೇವರ ಉತ್ಸವ

ಮಲೇಬೆನ್ನೂರು, ಮಾ. 7 - ಜಿಗಳಿಯ ಶ್ರೀ ರಂಗನಾಥಸ್ವಾಮಿ ರಥೋತ್ಸವದ ಅಂಗವಾಗಿ ಮಂಗಳವಾರ ಸಂಜೆ ಶ್ರೀ ರಂಗನಾಥ ಸ್ವಾಮಿ ಶ್ರೀ ಬೀರಲಿಂಗೇಶ್ವರ ಸ್ವಾಮಿ ಮತ್ತು ಜಿ.ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ದೇವರುಗಳ ಸಮ್ಮುಖದಲ್ಲಿ ಭೂತನ ಸೇವೆ ಶ್ರದ್ಧಾ-ಭಕ್ತೆಯಿಂದ ನೆರವೇರಿತು. ನಂತರ ಗ್ರಾಮದ ರಾಜ ಬೀದಿಗಳಲ್ಲಿ ದೇವರುಗಳ ಉತ್ಸವ ನಡೆಯಿತು.

**ಸಂಭ್ರಮದ ಹೋಳಿ :** ಗ್ರಾಮದಲ್ಲಿ ಹೋಳಿ ಹುಣ್ಣಿಮೆ ಅಂಗವಾಗಿ ಬೆಳಿಗ್ಗೆ ಯುವಕರು ಪರಸ್ಪರ ಬಣ್ಣ ಎರಚಿ ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದರು. ನಂತರ ವಾಲ್ಮೀಕಿ ವೃತ್ತದಲ್ಲಿ ಕಾಮನ ದಹನ ಮಾಡಲಾಯಿತು.



# ದಾವಣಗೆರೆ ರಸ್ತೆಗಳೇನು ಕರ್ಮ ಮಾಡಿವೆಯೋ ದೇವರೇ ಬಲ್ಲ..!

ಉತ್ತಂಗಿ ಕೊಟ್ರೇಶ್

ದಾವಣಗೆರೆ ನಗರದ ರಸ್ತೆಗಳು ಅದೇನು ಕರ್ಮ ಮಾಡಿವೆಯೋ ದೇವರೇ ಬಲ್ಲ. ಕಾಂಕ್ರೀಟ್ ರಸ್ತೆ ಪೂರ್ಣಗೊಂಡಿರುತ್ತದೆ. ಮತ್ತ್ಯಾವುದೋ ಪೈಪ್ ಲೈನ್ ಹಾಕಲು ಮತ್ತದೇ ರಸ್ತೆ ಕೊರೆಯಲು ಡ್ರಿಲ್ ಹಚ್ಚಿ ನೆಲ ಬಗೆಯಲಾಗುತ್ತದೆ. ಹೀಗೆಯೇ ಸಾಗುತ್ತೇ ರಸ್ತೆಗಳ ಕಥೆ. ನಿತ್ಯದ ಕಥೆ 'ಕೆತ್ತು-ಮೆತ್ತು'..!

ಈ ಕಾಂಕ್ರೀಟ್ ರಸ್ತೆಗಳು ಪದೇ ಪದೇ ಜಜ್ಜಿಸಿಕೊಂಡು, ರಿಪೇರಿ ಆದ ನಂತರ, ವೈದ್ಯರು ಆಪರೇಷನ್ ಮಾಡಿ ಹೊಲಿಗೆ ಹಾಕಿ, ಪ್ಲಾಸ್ಟರ್ ಅಂಟಿಸಿದ ರೀತಿ ಕಾಣತೊಡಗುತ್ತದೆ. ಅದು ಹೋಗಲಿ, ಆ ರಿಪೇರಿ ಮಾಡಿದ ರಸ್ತೆಯಲ್ಲಿಯೇ, ಅವರು ಮಾಡಿದ ಕೆಲಸದ ಪಕ್ಕದಲ್ಲಿಯೇ ಬೇರೆ ಯಾವುದೋ ಒಂದು ಸಣ್ಣ ಗುಂಡಿ ಇದ್ದು, ಅದು ಸಂಚಾರಕ್ಕೆ ತೊಂದರೆ ಕೊಡುತ್ತದೆ ಎಂದು ಗೊತ್ತಾದರೂ ಅದನ್ನು ಮುಚ್ಚುವ ಗೋಜಿಗೆ ಹೋಗುವುದಿಲ್ಲ. ಏಕೆಂದರೆ ಅದು ಅವರ ಕಾಂಟ್ರ್ಯಾಕ್ಟ್ ವ್ಯಾಪ್ತಿಗೆ ಬರುವುದಿಲ್ಲ..! ಪ್ಲಾನ್ ಮೊದಲೇ ಇಲ್ಲ.

ಕೆಲಸಗಾರರನ್ನು ಬಿಡಿ, ಅಲ್ಲಿ ಉಸ್ತುವಾರಿ ನಡೆಸುವ ಇಂಜಿನಿಯರ್‌ಗಾದರೂ ತುಸು ಜಾಣತನ, ಜ್ಞಾನ ಬೇಡವೇ, ಅಲ್ಲಿ ಕಾಂಕ್ರೀಟ್ ಹಾಕದಿದ್ದರೂ ಸ್ವಲ್ಪ ಮಣ್ಣನ್ನಾದರೂ ಹಾಕಿಸಿ ಗುಂಡಿ ಮುಚ್ಚಿಸುವ ಶಕ್ತಿ ಇರುತ್ತದಲ್ಲವೇ..? ಲಕ್ಷ್ಮೀ ಫ್ಲೋರ್ ಮಿಲ್ ಬಳಿ ಕೆರೆಗೆ ಹೋಗುವ ಕಾರ್ನರ್ ರಸ್ತೆಯಲ್ಲಿ ಆ ಕೆಲಸ ನೋಡಬಹುದು. ಗುಂಡಿ ಚಿಕ್ಕದಾದರೂ ಅಲ್ಲಿ ಆಗುವ ಅನಾಹುತ ದೊಡ್ಡದೇ ಆಗಿರುತ್ತದೆ.

**ಜಲ್ಲಿ ಕಲ್ಲು ಅವಾಂತರ..**

'ಸ್ಮಾರ್ಟ್‌ಸಿಟಿ' ದಾವಣಗೆರೆ ನಗರ ಮತ್ತು ಸುತ್ತ-ಮುತ್ತಲ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಗಳು ಭರ್ಜರಿ ಯಾಗಿಯೇ ನಡೆದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಎಲ್ಲ



ಕೆಲಸಗಳಿಗೂ ವಿವಿಧ ತರಹದ ಜಲ್ಲಿ ಕಲ್ಲುಗಳ ಅವಶ್ಯಕತೆ ಇದೆ. ಆ ಜಲ್ಲಿ ಕಲ್ಲುಗಳನ್ನು ಪ್ರಮಾಣಕ್ಕನುಗುಣವಾಗಿ ಆಪೆ ಗಾಡಿ, ಟ್ರ್ಯಾಕ್ಟರ್, ಮಜ್ದಾ, ಲಾರಿ ಮತ್ತು ಟಿಪ್ಪರ್ ಇತ್ಯಾದಿ ವಾಹನಗಳಲ್ಲಿ ಸಾಗಿಸಲಾಗುತ್ತಿದೆ. ಅದರಲ್ಲೇನು ವಿಶೇಷ ಇಲ್ಲ ಬಿಡಿ.

ಆದರೆ, ಈ ಗಾಡಿಗಳಲ್ಲಿ ಕಲ್ಲನ್ನು ತುಂಬಿಕೊಂಡು ಬರುವಾಗ, ಮಾರ್ಗ ಮಧ್ಯೆ ಹಂಪ್ಸ್‌ಗಳು ಬಂದಾಗ, ಬ್ರೇಕ್ ಹಾಕಿದಾಗ ಗಾಡಿಯಲ್ಲಿರುವ ಕಲ್ಲುಗಳು ರಸ್ತೆಗೆ ಬೀಳುತ್ತವೆ. ಇದಕ್ಕೂ ನಮಗೂ ಸಂಬಂಧವೇ ಇಲ್ಲ ಎನ್ನುವಂತೆ ಗಾಡಿಗಳು ಮುಂದೆ ಚಲಿಸುತ್ತದೆ. ಬಿದ್ದ ಆ ಕಲ್ಲುಗಳನ್ನು ಯಾರೂ ತೆಗೆಯುವುದಿಲ್ಲ. ಪಾಲಿಕೆ ಯವರಂತೂ ಕಣ್ಣೆತ್ತಿಯೂ ನೋಡುವುದಿಲ್ಲ. ಹಾಗಾದರೆ ಇದನ್ನು ಸರಿಪಡಿಸಬೇಕಾದವರು ಯಾರು.?

ರಸ್ತೆಗೆ ಬಿದ್ದ ಆ ಕಲ್ಲುಗಳು ವಾಹನಗಳ ಟೈರುಗಳ ಅಡಿ ಸಿಕ್ಕು ಪುಡಿ-ಪುಡಿಯಾಗಿ ಕರಗಬೇಕಷ್ಟೇ. ಕೆಲ ದಿನಗಳ ಹಿಂದೆ ನಿಜಲಿಂಗಪ್ಪ ಬಡಾವಣೆಯ ಶಾರದಾ ದೇವಿ ದೇವಸ್ಥಾನದ ಬಳಿ ಇರುವ ಸರ್ಕಲ್ ಬಳಿ ಹೀಗೆಯೇ ಯಾವುದೋ ಗಾಡಿ ಕಲ್ಲು ಚೆಲ್ಲಿ ಹೋಗಿದೆ. ಅವನ್ನು ಈವರೆಗೂ ಯಾರೂ ಸ್ವಚ್ಛ ಮಾಡಿಸಿರುವುದಿಲ್ಲ. ಇದು ಬರೀ ಒಂದು ಸ್ಯಾಂಪಲ್ ಅಷ್ಟೆ.

ರಸ್ತೆಗೆ ಬಿದ್ದ ಈ ಕಲ್ಲುಗಳು ಟೈರ್ ತುದಿಗೆ ಸಿಲುಕಿ, ಸಿಡಿದು ರಸ್ತೆ ಬದಿಯಲ್ಲಿ ಹೋಗುವವರಿಗೆ ಘಾಸಿ ಮಾಡಲೂಬಹುದು. ದ್ವಿಚಕ್ರ ವಾಹನಗಳು ಸ್ಕಿಡ್ ಆಗಿ ಬೀಳಲುಬಹುದು. ಆದ್ದರಿಂದ ಹೀಗೆ ವಾಹನಗಳಲ್ಲಿ ಜಲ್ಲಿ ಕಲ್ಲುಗಳನ್ನು ಸಾಗಿಸುವ ಜನರಿಗೆ ಎಚ್ಚರಿಸುವವರು ಯಾರು? ಕ್ರಮ ತೆಗೆದುಕೊಳ್ಳು ವವರು ಯಾರು?

**ಅಬ್ಬಾ ಅದೆಂತಾ ನಾಯಿಗಳು..**

ನಗರದಲ್ಲಿ ನಾಯಿಗಳ ಸಂಖ್ಯೆ ಜಾಸ್ತಿಯೋ ಅಥವಾ ಹಂದಿಗಳ ಸಂಖ್ಯೆ ಜಾಸ್ತಿಯೋ ಎಂಬ ಪ್ರಶ್ನೆ ಹಾಕಿದರೆ ನಾಯಿಗಳ ಸಂಖ್ಯೆಯೇ ಜಾಸ್ತಿ ಎನ್ನುವವರೇ ಜಾಸ್ತಿ. ಅದರಲ್ಲಿಯೂ ಬೀದಿ ನಾಯಿಗಳ ಸಂಖ್ಯೆಯೇ ಜಾಸ್ತಿ.

ಯಾವುದೇ ಬಡಾವಣೆ, ಸಂಧಿ-ಗೊಂದಿಗಳಲ್ಲಿ ನೋಡಿದರೂ ಈ ನಾಯಿಗಳ ಕಾಟ ಹೇಳತೀರ ದಾಗಿದೆ. ಪೂರ್ಣ ಶಾಖಾಹಾರಿಗಳಂತಾಗಿರುವ ಈ ಬೀದಿ ನಾಯಿಗಳು ತಂಗಳು ತಿನ್ನುವುದನ್ನೇ ಮರೆತಿವೆ. ತಂಗಳಲ್ಲ, ಬಿಸಿ ಅನ್ನ-ರೊಟ್ಟಿ-ಮುದ್ದೆ ಹಾಕಿದರೂ ಈ ಬೀದಿ ಶುನಕಗಳು ಮೂಸಿ ನೋಡುತ್ತವೆಯೇ ಹೊರತು ತಿನ್ನುವುದಿಲ್ಲ.

ನಗರ ಸ್ವಚ್ಛತೆಯ ಹರಿಕಾರರು ಆಗಿರುವ ಚಿಂದಿ ಆಯುವವರನ್ನು, ರಸ್ತೆಯಲ್ಲಿ ಅಡ್ಡಾಡುವ ಅಪರಿಚಿತ ಮತ್ತು ಪರಿಚಿತ ಎಂಬ ಭೇದ-ಭಾವ ತೋರದೆ ಬೆನ್ನು ಹತ್ತುತ್ತವೆ. ಸೋಜಿಗವೆಂದರೆ ಅಲ್ಲಿಯೇ ವಾಸಿಸುವ ಜನರನ್ನು ಕಂಡರೂ ಗುರ್. ಎನ್ನುತ್ತವೆ. ಅಂದರೆ ಈ ಬೀದಿ ನಾಯಿಗಳು ಸಂವೇದನೆ ಕಳೆದುಕೊಂಡುಬಿಟ್ಟವೆ. ರಾತ್ರಿ ವೇಳೆಯಂತೂ ಜನ ಮಲಗುವಂತಿಲ್ಲ ಬಿಟ್ಟು-ಬಿಡದೆ ಅಳತೊಡಗುತ್ತವೆ.

ಅನಾರೋಗ್ಯ ಮತ್ತಿನ್ಯಾವುದೋ ಕಾರಣಕ್ಕೆ ಕೆಲವರು ಸಾಕು ನಾಯಿಗಳನ್ನು ಬೇರಲ್ಲೋ ದೂರ ಬಿಟ್ಟು ಬರುವುದು ಹೊಸದೇನಲ್ಲ. ವಿದ್ಯಾನಗರ ದವರಿಗೆ ಅರಸು ಬಡಾವಣೆ ದೂರವಾದರೆ, ಅಲ್ಲೇ ಇರುವ ನಿಜಲಿಂಗಪ್ಪ ಬಡಾವಣೆಗೂ ವಿದ್ಯಾನಗರ ದೂರವಾಗಿಯೇ ಕಾಣುತ್ತದೆ. ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ನಾಯಿಗಳು ಬಂದು ಸೇರುತ್ತಲೇ ಇವೆ.

ಶಾಂತಿನಗರ, ರಿಂಗ್ ರಸ್ತೆ ಭೂತಪ್ಪ ದೇವಸ್ಥಾನದ ಬಳಿ ನಾಯಿ ಒಂದಿದೆ. ಅದು ರಸ್ತೆಯಲ್ಲಿ ಅಡ್ಡಾಡುವ ಕಾರನ್ನು ಕಂಡರೆ ಸಾಕು, ಬೊಗಳುತ್ತಾ ಬೆನ್ನು ಹತ್ತುತ್ತದೆ, ಪಿ.ಬಿ.ರಸ್ತೆಯಲ್ಲಿ, ಶನೇಶ್ವರ ದೇವಸ್ಥಾನದ ಹತ್ತಿರವೂ ಇಂತಹ ಕೆಲವು ನಾಯಿಗಳಿವೆ. ಆಗಾಗ್ಗೆ ವಾಹನಕ್ಕೆ ಸಿಕ್ಕು ಸಾಯುವ ನಾಯಿಗಳನ್ನು ಅಲ್ಲಿ ಸಾಮಾನ್ಯವಾಗಿ ಕಾಣಬಹುದು.

ಈ ಮೂರು ಸಮಸ್ಯೆಗಳು ಜನತೆಗೆ ಮಾರಕ ವಾಗಿರುವಂತಹವೇ ಆಗಿವೆ. ಇವುಗಳು ಯಾರ ಖಾತೆಗೆ ಸೇರುತ್ತವೆ ಮತ್ತು ಅದಕ್ಕೆ ಪರಿಹಾರ ಯಾವಾಗ ? ಎಂಬುದು ನೊಂದ ಜನರ ಕಳಕಳಿಯ ಪ್ರಶ್ನೆ.

## ತ್ಯಾವಣಿಗೆಯಲ್ಲಿ ನಾಳೆ ಬಿಜೆಪಿ ಹಿಂದುಳಿದ ವರ್ಗಗಳ ಸಮಾವೇಶ

ದಾವಣಗೆರೆ, ಮಾ.7- ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ಮಾಯಕೊಂಡ ವಿಧಾನಸಭಾ ಕ್ಷೇತ್ರದ ತ್ಯಾವಣಿಗೆಯ ನೀರಾವರಿ ಇಲಾಖೆ ಆವರಣದಲ್ಲಿ ನಾಡಿದ್ದು ದಿನಾಂಕ 9 ರ ಗುರುವಾರ ಹಿಂದುಳಿದ ವರ್ಗಗಳ ಜಿಲ್ಲಾ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಬಸವರಾಜ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 3 ಗಂಟೆಗೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಜಿಲ್ಲೆಯ ಸುಮಾರು 8 ರಿಂದ 10 ಸಾವಿರ ಜನರು ಆಗಮಿಸುವ ನಿರೀಕ್ಷೆಯಿದೆ ಎಂದರು.

ಪ್ರತಿ ಜಿಲ್ಲೆಯಲ್ಲಿ ಒಬ್ಬ ಹಿಂದುಳಿದ ವರ್ಗದ ಅಭ್ಯರ್ಥಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಪಕ್ಷದ ವರಿಷ್ಠರ ಮಟ್ಟದಲ್ಲಿ ಚರ್ಚಿಸಲಾಗಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆಯೂ ಹಿಂದುಳಿದ ವರ್ಗದ ಅಭ್ಯರ್ಥಿಗೆ ಟಿಕೆಟ್ ನೀಡಲಾಗಿತ್ತು. ಅಂತೆಯೇ, ಈ ಬಾರಿಯೂ ಕೂಡ ಟಿಕೆಟ್ ನೀಡುವ ನಿರೀಕ್ಷೆಯಿದೆ ಎಂದರು.

ಸಮಾವೇಶದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಲೋಕಸಭಾ ಸದಸ್ಯ ಜಿ.ಎಂ ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ ರವೀಂದ್ರನಾಥ್, ಪ್ರೊ.ಲಿಂಗಣ್ಣ, ಎಸ್.ವಿ ರಾಮಚಂದ್ರ, ಎಂ.ಪಿ ರೇಣುಕಾಚಾರ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮಾಜಿ ಶಾಸಕರಾದ ಬಿ.ಪಿ ಹರೀಶ್, ಬಸವರಾಜ್ ನಾಯ್ಕ್ ಮತ್ತು ಇತರರು ಭಾಗವಹಿಸುವರು.

ಸುದ್ದಿಗೋಷ್ಠಿಯಲ್ಲಿ ಮಾಯಕೊಂಡ ಮಂಡಲದ ಅಧ್ಯಕ್ಷ ದೇವೇಂದ್ರಪ್ಪ, ಮಹೇಂದ್ರ ಹೆಬ್ಬಾಳು, ಎಂ.ಎನ್ ಮಂಜುನಾಥ್, ಓಂಕಾರಪ್ಪ, ಕೃಷ್ಣಕುಮಾರ್, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಉಕ್ಕಡಗಾತ್ರಿಯಲ್ಲಿ ನಾಳೆ ಸಭೆ

ಹರಿಹರ, ಮಾ. 7- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಹರಿಹರ ತಾಲ್ಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ನಾಡಿದ್ದು ದಿನಾಂಕ 9ರ ಗುರುವಾರ ಸಂಜೆ 4 ಗಂಟೆಗೆ ಉಕ್ಕಡಗಾತ್ರಿಯಲ್ಲಿ ಸ್ಥಳೀಯರ ಹಾಗೂ ಹರಿಹರ ತಾಲ್ಲೂಕಿನ ಸಾಹಿತ್ಯಾಸಕ್ತರ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ತಿಳಿಸಿದ್ದಾರೆ.

## ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮನ ಅಕಾಡೆಮಿ



ಚನ್ನಗಿರಿ, ಮಾ. 7- ಹರನಹಳ್ಳಿ-ಕೆಂಗಾಪುರದ ರಾಮಲಿಂಗೇಶ್ವರ ವಿದ್ಯಾ ಸಂಸ್ಥೆಯ ಆವರಣದಲ್ಲಿ ನಿನ್ನೆ ನಡೆದ ದಾವಣಗೆರೆ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮನ ಅಕಾಡೆಮಿಯ ನೃತ್ಯ ಕಲಾವಿದರು ವಚನಗಳಿಗೆ ಜನಪದ ಶೈಲಿಯಲ್ಲಿ ನೃತ್ಯಗಳನ್ನು ಪ್ರಸ್ತುತಪಡಿಸಿದರು.

## ಹೊನ್ನಾಳಿ : ರೈತರಿಂದ ಅರ್ಜಿ ಆಹ್ವಾನ

ಹೊನ್ನಾಳಿ, ಮಾ.7- ಕೃಷಿ ಸಂಸ್ಕರಣೆ ಘಟಕಗಳಾದ ರಾಗಿ ಕ್ಲೀನಿಂಗ್ ಮಷಿನ್, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣಗಳು, ಹಿಟ್ಟಿನ ಗಿರಣಿ, ರೊಟ್ಟಿ ಮಷಿನ್, ಪಶು ಆಹಾರ ತಯಾರಿಕಾ ಘಟಕಗಳನ್ನು ರೈತರಿಗೆ ಸಹಾಯಧನದಡಿ ವಿತರಿಸಲಾಗುತ್ತಿದೆ. ಆಸಕ್ತ ಸಾಮಾನ್ಯ ವರ್ಗದ ರೈತರು ದಿನಾಂಕ 08.03.2023 ರೊಳಗೆ ಕೃಷಿ ಇಲಾಖೆಗೆ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸುವಂತೆ ಹೊನ್ನಾಳಿ ಸಹಾಯಕ ಕೃಷಿ ನಿರ್ದೇಶಕರು ಕೋರಿದ್ದಾರೆ.

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ : ವರ್ಷಕ್ಕೊಮ್ಮೆ ಅವಳ ದಿನ...

ಮಂಗಳವಾರ ವಿಶ್ವ ಮಹಿಳಾ ದಿನ. ಮನೆಯಲ್ಲಿ ನೆನಪಿಸಿಕೊಂಡು ಶುಭಾಶಯ ಹೇಳುವ ಜನರಿದ್ದಾರೆ. ಆಫೀಸಿನಲ್ಲಿ ಒಂದು ಹೂ ಗುಚ್ಛ ಕೊಟ್ಟು ಊಟಕ್ಕೆ ಕರೆದೊಯ್ಯುವ ಜನರೂ ಇದ್ದಾರೆ. ಮನೆಯಲ್ಲಿ, ಆಫೀಸಿನಲ್ಲಿ ನಡೆಯುವ ಈ ಆಚರಣೆಗಳ ನಡುವೆ ನಾವು ಎಷ್ಟೊಂದು ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದು ಅನಿಸುವುದು ಅದೊಂದು ದಿನ ಮಾತ್ರ.

***ಮಹಿಳೆ ಎಂಬ ಪದದ ಅನ್ವರ್ಥ :***

***ಮ – ಮನಸ್ಸೆಂಬ ಕನ್ನಡಿಯ***

***ಹಿ - ಹಿಂದಿರುವ***

***ಳೆ – ಒಂದು ಸೂಕ್ಷ್ಮ ಎಳೆ***

ಅಮ್ಮ, ತಾಯಿ, ಅಕ್ಕ-ತಂಗಿ, ಹೆಂಡತಿ, ಮಗಳಾಗಿ ಮಹಿಳೆಯ ಸಾಧನೆ ದೊಡ್ಡದು. ಪೂರ್ವಕಾಲದಲ್ಲಿ ನಾಲ್ಕು ಗೋಡೆಗಳ ಮಧ್ಯೆ ಬಾಳಿ ಬದುಕುತ್ತಿದ್ದ ಸ್ತ್ರೀ ಇವತ್ತು ಎಲ್ಲಾ ರಂಗಗಳಲ್ಲೂ ಕೂಡ ಅಪ್ರತಿಮ ಸಾಧನೆ ಗೈದಿದ್ದಾರೆ. ಸಾಧನೆ ಶಿಖರ ಏರುವುದರಲ್ಲಿ ಯಾವ ಮಹಿಳೆಯೂ ಹಿಂದೆ ಬಿದ್ದಿಲ್ಲ. "ತೊಟ್ಟಿಲನ್ನು ತೂಗುವ ಕೈ ದೇಶವನ್ನು ಆಳುತ್ತಿದೆ" ರಾಜಕಾರಣ, ಕ್ರೀಡೆ, ಶಿಕ್ಷಣ, ಆರ್ಥಿಕ ವ್ಯವಹಾರದಲ್ಲೂ ಪುರುಷರಷ್ಟೇ ಸರಿಸಮಾನಳಾಗಿ ತಮ್ಮದೇ ಆದ ರೀತಿಯಲ್ಲಿ ಕೀರ್ತಿ ಪತಾಕೆಯನ್ನು ಹಾರಿಸಿದ್ದಾಳೆ.

ಬ್ರಿಗಾಮ್ ಯಂಗ್ ಹೇಳಿದಂತೆ....

"ಪುರುಷನೊಬ್ಬ ಕಲಿತರೆ ಆತನೊಬ್ಬ ಕಲಿತಂತೆ, ಮಹಿಳೆಯೊಬ್ಬಳು ಕಲಿತರೆ ಇಡೀ ಪೀಳಿಗೆಯೇ ಕಲಿತಂತೆ" ಒಂದು ಹೆಣ್ಣು ಹುಟ್ಟಿದಾರಭ್ಯ ತಾಯಿಯ ಬಾಹುಗಳ



ನೋವ ನುಂಗಿ ನಗುವ ಚೆಲ್ಲುವ ಆಕೆಗೊಂದು ನಮನ...

ಬಂಧನದಲ್ಲಿಯೇ ತನ್ನ ಜೀವನ ಕಳೆಯುತ್ತಾಳೆ. ಬೆಳೆಯುತ್ತಾ ತಾಯಿಯ ಶ್ರೀರಕ್ಷೆಯಲ್ಲಿ ಬೆಳೆಯುತ್ತಾಳೆ. ಆಕೆ ತಂದೆ-ತಾಯಿಯರ ಪಾಲನೆ-ಪೋಷಣೆಯಲ್ಲಿ ಓದನ್ನು ಮುಂದುವರೆಸುತ್ತಾಳೆ. ಆ ತಾಯಿಗೆ ಒಂಭತ್ತು ಮಕ್ಕಳಿರಲಿ, ಹನ್ನೆರಡು ಮಕ್ಕಳಿರಲಿ ಎಲ್ಲರನ್ನೂ ಪ್ರೀತಿಯಿಂದ ತೋಳ್ತೆಕ್ಕೆಯಲ್ಲಿ ಬದಿಗಿಟ್ಟುಕೊಳ್ಳುತ್ತಾಳೆ. ಈ ಜಗತ್ತಿನಲ್ಲಿ ತಾಯಿ ಪ್ರೀತಿಗೆ ಸರಿಸಾಟಿಯಾದದ್ದು ಯಾವುದೂ ಇಲ್ಲ. ಅದಕ್ಕೆ ಅವಳನ್ನು ತಾಯಿಯೆಂಬ ಅಗ್ರಸ್ಥಾನದಲ್ಲಿಟ್ಟು ಪೂಜಿಸುತ್ತೇವೆ.

ನದಿ ಹರಿದು ಸಮುದ್ರ ಸೇರುವಂತೆ ಹುಟ್ಟಿದ ಮನೆಯಿಂದ ಮೆಟ್ಟಿದ ಮನೆಗೆ ಸೇರಿ ಅಲ್ಲಿನ ಕುಟುಂಬದ ವಾತಾವರಣಕ್ಕೆ ಹೊಂದಿಕೊಂಡು ಅತ್ತೆ, ಮಾವ, ಅತ್ತಿಗೆ, ನಾದಿನಿಯರ ಹಾಗೂ ಮುಖ್ಯವಾಗಿ ಪತಿಯ ಸ್ವಭಾವಕ್ಕೆ ಹೊಂದಿಕೊಂಡು ಸಂತೋಷವಾಗಿ ಬಾಳುವುದು ಕನಸಾಗಲಿ, ನನಸಾಗಲಿ ಒಟ್ಟಿನಲ್ಲಿ ಬಾಳುತ್ತಾಳೆ. "ಹೆಣ್ಣು ಬಾಳಿನ ಕಣ್ಣು".

ಭಾರತೀಯ ಸ್ತ್ರೀಯರೆಂದರೆ ತ್ಯಾಗದ ಮೂರ್ತಿಗಳು ಮೂರ್ತಿಯಂತೆ ತಪಸ್ಯೆ. ಅವಳಿಗೆ ತನ್ನದೆಂಬ ಬೇಡಿಕೆಗಳು, ಸೇರಿಕೆಗಳೇ ಇಲ್ಲ. ಗಂಡನ, ಮಕ್ಕಳ ಸೇರಿಕೆ, ಬೇಡಿಕೆಗಳೇ ಇವಳ ಇಚ್ಛೆಗಳು. ಇವಳಿಗೆ ಅವರನ್ನು ಬಿಟ್ಟು ಬೇರೆ ಆಕಾಂಕ್ಷೆಗಳೇ ಇಲ್ಲ. ಏನು ಮಾಡಿದರೂ ಪತಿಗಾಗಿಯೇ ಮಾಡುತ್ತಾಳೆ ಅದಕ್ಕಾಗಿಯೇ ಹೆಣ್ಣು ಈಶ್ವರಿ ಸ್ವರೂಪಳೇ ಸರಿ. ಮಕ್ಕಳನ್ನು, ಪತಿಯನ್ನು, ಅವರ ಧ್ಯೇಯಗಳನ್ನು ಜೋಪಾನ ಮಾಡುತ್ತಾಳೆ, ಪೂಜಿಸುತ್ತಾಳೆ, ಸೇವೆ ಸಲ್ಲಿಸುತ್ತಾಳೆ. ದೇವರ ಪ್ರೇಮದ ತಿರುಳನ್ನು ಯಾರಾದರೂ ಜಗತ್ತಿನಲ್ಲಿ ತೋರುತ್ತಿದ್ದರೆ ಆ ವ್ಯಕ್ತಿ "ತಾಯಿಯೇ" ಮತ್ತಾರಲ್ಲ...

ಹೆಣ್ಣು ಸಮಾಜದ ಕಣ್ಣು, ಹೆಣ್ಣಿಲ್ಲದೇ ಸಮಾಜವಿಲ್ಲ. ಹೆಣ್ಣಿನ ಕೊನೆಯಾದರೆ ಸಮಾಜದ ಕೊನೆಯಾದಂತೆ ಭೂಮಿಯಿಂದ ಮನುಕುಲವೇ ಅಳಿಸಿಹೋದಂತೆಯೇ ಸರಿ. ಆದರೆ ಸಮಾಜದಲ್ಲಿ ಅನಾದಿ ಕಾಲದಿಂದಲೂ ನಡೆಯುತ್ತಿರುವುದಾದರೂ ಏನು? ಹೆಣ್ಣಿನ ಶೋಷಣೆ, ಹೆಣ್ಣಿನ ಮೇಲೆ ದೌರ್ಜನ್ಯ, ಇದಕ್ಕೆ ಕಾರಣವಾದರೂ ಏನು? ಪುರುಷ ಪ್ರಧಾನ ಸಮಾಜವೇ? ಹೆಣ್ಣಿನ ಶೋಷಣೆಗೆ ಹೆಣ್ಣೆ ಕಾರಣವೇ? ಪರಿಸ್ಥಿತಿಯ ಒತ್ತಡವೇ? ಹೆಣ್ಣಿನ ದೌರ್ಬಲ್ಯ ಒಂದೂ ಅರ್ಥವಾಗುವುದಿಲ್ಲ.

ಹೆಣ್ಣು ಹುಟ್ಟಿದಾಗಿನಿಂದಲೂ ಪರರ ಸ್ವತ್ತು ಎಂದು ಭಾವಿಸಿ, ಅದೇ ರೀತಿಯಲ್ಲಿ ಹೆಣ್ಣನ್ನು ಬೆಳೆಸಲಾಗುತ್ತದೆ. ಅಂದರೆ ಹುಟ್ಟಿದಾಗ ತಂದೆ-ತಾಯಿಯ ಆಶ್ರಯದಲ್ಲಿ, ಮದುವೆಯಾದ ಮೇಲೆ ಗಂಡನ ಆಶ್ರಯದಲ್ಲಿ ಮತ್ತು ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಹೀಗೆಯೇ ಹುಟ್ಟಿದಾಗಿನಿಂದ ಸಾಯುವವರೆಗೆ ಪರರ ಅಧೀನದಲ್ಲಿರ ಬೇಕು.

ಗ್ರಾಮೀಣ ದೇಶವಾದ ಭಾರತದಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಜನ ಬೇಸಾಯದ ರೈತರ ಮನೆಯ ಹೆಂಗಸರು ಬೇಸಾಯದಲ್ಲಿ ಗಂಡಸರಿಗಿಂತ ಹೆಚ್ಚು ಭಾಗ ಕೆಲಸ ಮಾಡುತ್ತಾರೆ. ಹೆಣ್ಣು ರಕ್ಕಸಿ ಎಂದು ಕೆಲವರು ಹೇಳಿದರೆ, ಹೆಣ್ಣು ಮಮತೆಯ ಸಹೃದಯದ ಕರುಣಾಮಯಿ ಎನ್ನುವವರು ಇದ್ದಾರೆ. ಹೆಣ್ಣೆಂದರೆ ಭೂಮಿಯಲ್ಲಿ ಸ್ವರ್ಗ ಎನ್ನುವುದೂ ಇದೆ. ನಮ್ಮ ಕವಿಗಳಾದ ಜಿ. ಎಸ್. ಶಿವರುದ್ರಪ್ಪನವರು ಸ್ತ್ರೀಯನ್ನು ಹೀಗೆ ವರ್ಣಿಸಿದ್ದಾರೆ.

***ಆಕಾಶದ ನೀಲಿಯಲ್ಲಿ***
***ಚಂದ್ರತಾರೆ ತೊಟ್ಟಿಲಲ್ಲಿ***
***ಬೆಳಕನಿಟ್ಟು ತೂಗಿದಾಕೆ,***
***ನಿನಗೆ ಬೇರೆ ಹೆಸರು ಬೇಕೆ***
***ಸ್ತ್ರೀ ಎಂದರೇ ಅಷ್ಟೇ ಸಾಕೆ....?***

**- ರೇಣುಕಾ ಬಿ.ಆರ್.**, ಮನೋಶಾಸ್ತ್ರಜ್ಞೆ.
ನಾಗೇನಹಳ್ಳಿ, ಹರಿಹರ (ತಾ)
renuka.ngn@gmail.com

## ಅಬಾಕಸ್ ಸ್ಪರ್ಧೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರಶಸ್ತಿ

ದಾವಣಗೆರೆ, ಮಾ.7- ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಇತ್ತೀಚೆಗೆ ಒಲಂಪಿಯಾಡ್ ಅಬಾಕಸ್‌ನವರು ನಡೆಸಿದ ರಾಷ್ಟ್ರಮಟ್ಟದ ಅಬಾಕಸ್ ಸ್ಪರ್ಧೆಯಲ್ಲಿ ಜಿಲ್ಲೆಯ ಯೂನಿಕ್ ಅಬಾಕಸ್‌ನ 24 ವಿದ್ಯಾರ್ಥಿಗಳು ಸಾಧನೆ ಮಾಡಿ ಗಮನ ಸೆಳೆದಿದ್ದಾರೆ.

ಮಹಾರಾಷ್ಟ್ರದ ಒಲಂಪಿಯಾಡ್‌ನ ಫೌಂಡರ್ ಸಾಗರ್ ಆನಂದ ಥ್ರೂಟ್, ಅಡ್ವೊಕೇಟ್ ರುದ್ರೇಗೌಡ, ನಿರ್ದೇಶಕರಾದ ಮೀನಾಕ್ಷಿ ಲಂದೆಯವರ ನೇತೃತ್ವದಲ್ಲಿ ನಡೆದ ಸ್ಪರ್ಧೆಯಲ್ಲಿ ಒಟ್ಟು 918 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದರಲ್ಲಿ ಯೂನಿಕ್ ಸಂಸ್ಥೆಯ ವಿದ್ಯಾರ್ಥಿಗಳು 9 ರ್‍ಯಾಂಕಿಂಗ್‌ಗಳು, 11 ಕಾನ್ಸೋಲೇಷನ್ ಹಾಗೂ 4 ಸಮಾಧಾನಕರ ಬಹುಮಾನ ಪಡೆದು ಯೂನಿಕ್




ಅಬಾಕಸ್‌ಗೆ ಗೌರವ ತಂದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಮಾರ್ಗದರ್ಶನ ನೀಡಿದ ಯೂನಿಕ್ ಅಬಾಕಸ್‌ನ ಶಿಕ್ಷಕಿ ಸುಮನ್ ತೆಲಗಾವಿಯವರಿಗೆ ಫ್ರಾಂಚೈಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ನ್ಯೂ ಸೇಂಟ್ ಪೀಟರ್ಸ್ ಕಾನ್ವೆಂಟ್ ಮತ್ತು ಜ್ಞಾನ ಗಂಗಾ ಶಾಲೆಯ ಶಿಕ್ಷಕರು ಮತ್ತು ಪೋಷಕರು ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಸೈಕಲ್ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 5.30 ಕ್ಕೆ ಕೂಲಿಕಾರ್ಮಿಕರಿಗೆ ಸೈಕಲ್ ವಿತರಣೆ ಕಾರ್ಯಕ್ರಮವು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ನಡೆಯಲಿದೆ. ಪ್ರಾಸ್ತಾವಿಕ ನುಡಿಯನ್ನು ಶಿವನಕೆರೆ ಬಸವಲಿಂಗಪ್ಪ ನೆರವೇರಿಸುವರು. ಡಾ. ಎಂ.ಜಿ.ಈಶ್ವರಪ್ಪ ಅಧ್ಯಕ್ಷತೆ ವಹಿಸುವರು, ಮುಖ್ಯ ಅತಿಥಿಗಳಾಗಿ ನಿರ್ಮಲ ಕರಿಬಸಪ್ಪ, ಡಾ. ರಾಜಶೇಖರ್ ಜಿ.ಎಂ., ಬಸವರಾಜ್ ಒಡೆಯರ್, ಮಂಜುಳಾ ಬಸವಲಿಂಗಪ್ಪ, ಮಧುಸೂದನ್, ಎನ್.ಪಿ.ಜಯ್ಯಣ್ಣ, ಶ್ರೀಮತಿ ಕಸ್ತೂರಿ ಭಾಗವಹಿಸುವರು.

## ಮಕ್ಕಳ ಲೋಕದಿಂದ ಸಾಹಿತ್ಯೋತ್ಸವ

ದಾವಣಗೆರೆ, ಮಾ.7- ವಿದ್ಯಾರ್ಥಿ ಗಳಿಗೆ ತಾಯಿ ಬಾಷೆ ಬಂದರೆ ಅವರು ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಗತಿ ಸಾಧಿಸುತ್ತಾರೆ ಎಂದು ಶ್ರೀ ಸಿದ್ದಗಂಗಾ ಮಕ್ಕಳ ಲೋಕದ ಸ್ಥಾಪಕ ಹಿರಿಯ ಸಾಹಿತಿ ಕೆ.ಎನ್.ಸ್ವಾಮಿ ಹೇಳಿದರು.

ಬಸವೇಶ್ವರ ಶಾಲೆಯಲ್ಲಿ ನಡೆದ ಮಕ್ಕಳ ಸಾಹಿತ್ಯೋತ್ಸವ ಕಾರ್ಯಕ್ರಮ ದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಮಕ್ಕಳಿಗೆ ಕಲಿಕೆಯ ಮಹತ್ವವನ್ನು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಗುರುಗಳಾದ ಜಿ.ಉಮೇಶ್ ಮಾತನಾಡಿ, ಕನ್ನಡದ ಮಕ್ಕಳು ಕನ್ನಡದ ಮೂಲಕವೇ ಪ್ರಗತಿ ಸಾಧಿಸಬೇಕೆಂದು ತಿಳಿಸಿದರು. ಕನ್ನಡದ ಬರವಣಿಗೆ ಸ್ಪರ್ಧೆಯಲ್ಲಿ ನೂರಾರು ಮಕ್ಕಳು ಭಾಗ ವಹಿಸಿದ್ದರು. 3ನೇ ತರಗತಿಯ ಚಿನ್ಮಯಿ, 2ನೇ ತರಗತಿಯ ಅಭಿಷೇಕ್, 4ನೇ ತರಗತಿ ಪ್ರಾರ್ಥನಾ ಪ್ರಥಮ ಬಹುಮಾನ ಪಡೆದರು. ಶ್ರೀ ಸಿದ್ದಗಂಗಾ ಮಕ್ಕಳ ಲೋಕದ ಪ್ರಾಚಾರ್ಯ ವಿದುಷಿ ರುದ್ರಾಕ್ಷಿಬಾಯಿ ಚಿನ್ನಸಮುದ್ರ ಅವರು ಮಕ್ಕಳಿಗೆ ಬಹುಮಾನ ವಿತರಿಸಿ ದರು. ಹಿರಿಯ ಕವಿ ಪುಟ್ಟಾನಾಯ್ಕರು ಕಾರ್ಯಕ್ರಮ ಏರ್ಪಡಿಸಿದ್ದರು.

ತೀರ್ಪುಗಾರರಾಗಿ ಪ್ರಸನ್ನ ಕುಮಾರ್, ಸಿದ್ದೇಶ್, ಚಂದ್ರಶೇಖರ್, ಮಹದೇವಪ್ಪ ಹೊಳಲು,ರಾಜಪ್ಪ, ಜ್ಯೋತಿಲಕ್ಷ್ಮಿ, ಛಾಯಾ, ಬಸಮ್ಮ ಬೆಟಗೇರಿ ಆಗಮಿಸಿದ್ದರು.

## ಹೋಳಿ ಹಬ್ಬದಿಂದ ಅರಿಯೋಣ ಬನ್ನಿ

ಹೋಳಿ ಹಬ್ಬ ಇಂದು ಸಂತೋಷ ತಂದಿದೆ
ಏಳಿ ಒಟ್ಟಾಗಿ ಸಂಭ್ರಮಿಸಿ ಎಂದಿದೆ
ಕೇಳಿ ಸ್ನೇಹದಿ ಬಾಳಿ ಎಂದು ಸಾರಿದೆ
ಓಕುಳಿ ಆಡಲು ಬನ್ನಿ ಎಂದು ಕರೆದಿದೆ

ಹೋಳಿಗೆ ನೈವೇದ್ಯ ದೇವಗೆ ನಡೆದಿದೆ
ಹೋಳಿ ಹಬ್ಬಕ್ಕೆ ಕಾಮನ ದಹನವಾಗಿದೆ
ಬಾಳಿ ಕಾಮನೆ ಬಿಟ್ಟು ಎಂದು ನುಡಿದಿದೆ
ತಾಳಿ ಕಷ್ಟಕಳೆದು ಸುಖ ಬರುವುದೆಂದಿದೆ

ಬಣ್ಣ ಬಣ್ಣದ ಓಕುಳಿ ಹೊಸ ಹರುಷ ತಂದಿದೆ
ಕಣ್ಣಿಗೆ ಆನಂದ ಮನವ ಹಗುರಾಗಿಸಿದೆ
ತಣ್ಣಗೆ ಎಲ್ಲರ ಒಂದೇ ಬಣ್ಣ ಮಾಡುತಿದೆ
ಸಣ್ಣದೊಡ್ಡವರೆಲ್ಲರ ಸಮ ಮಾಡಿ ಹಿಗ್ಗಿದೆ

ಅರಿಯಿರಿ ಒಳಗಿರುವ ಆತ್ಮ ಒಂದೇ ಎನುತಿದೆ
ಬೆರೆತು ಬಣ್ಣದ ಜೊತೆಗೆ ಭಿನ್ನವಾಗಿ ಕಂಡಿದೆ
ನರರ ಪರಿಚಯವ ಬಣ್ಣ ಮುಚ್ಚುವಂತೆ
ಶರೀರ ಆತ್ಮನ ರೂಪವ ಮರೆಮಾಚಿದೆ

ಸದಾ ಬಿಳಿಯ ಸಾತ್ವಿಕ ಬಣ್ಣ ಹೃದಯ ತುಂಬಲಿ
ಮದದ ಕೆಂಪು ಬಣ್ಣ ಸ್ವಲ್ಪ ದೂರವೇ ಇರಲಿ
ಹೃದಯಕೆ ಕಪ್ಪು ತಾಮಸವು ಬಾರದಿರಲಿ
ಸದಾ ನೀಲಿ ಸಿರಿಹರಿಯು ಕಾಣುತಲಿರಲಿ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ದೇಹ, ಮನಸ್ಸುಗಳ ಆರೋಗ್ಯಕ್ಕೆ ಸಾತ್ವಿಕ ಆಹಾರವೇ ಶ್ರೇಷ್ಠ

## ಸಸ್ಯಾಹಾರ ಜನಜಾಗೃತಿ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ವಿಶ್ಲೇಷಣೆ

ದಾವಣಗೆರೆ, ಮಾ.7- ಪ್ರತಿಯೊಬ್ಬ ಜೀವಿಗೂ ಆಹಾರ ಸ್ವಾತಂತ್ರ್ಯ ಇದೆಯಾದರೂ ದೇಹ ಮತ್ತು ಮನಸ್ಸಿನ ಆರೋಗ್ಯಕ್ಕೆ ಸಾತ್ವಿಕ ಆಹಾರಗಳನ್ನು ಸೇವಿಸುವುದು ಉತ್ತಮ ಎಂದು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ ಅಭಿಪ್ರಾಯ ಪಟ್ಟರು.

ದೇವನಗರಿ ಮೈತ್ರೇಯ ಪಿರಮಿಡ್ ಧ್ಯಾನ ಕೇಂದ್ರದ ವತಿಯಿಂದ ಏರ್ಪಾಡಾಗಿದ್ದ ಸಸ್ಯಾಹಾರ ಜನಜಾಗೃತಿ ಜಾಥಾ ಅಂಗವಾಗಿ ರೋಟರಿ ಹಾಲ್‌ನಲ್ಲಿ ಏರ್ಪಾಡಾಗಿದ್ದ ಸಭೆಯ ವಿಶೇಷ ಆಹ್ವಾನಿತರಾಗಿ ಮಾತನಾಡುತ್ತಾ, ಪ್ರಪಂಚದಲ್ಲಿ ಅತಿ ಹೆಚ್ಚು ಶೇಕಡವಾರು ಪ್ರಮಾಣದಲ್ಲಿ ಸಸ್ಯಾಹಾರಿಗಳಿರುವ ದೇಶ ಭಾರತವಾಗಿದ್ದು, ವಿಶ್ವದಲ್ಲಿ ಕಡಿಮೆ ಪ್ರಮಾಣದ ಮಾಂಸಾಹಾರ ಬಳಸುವ ದೇಶವೂ ಭಾರತವಾಗಿದೆ.

ನಮ್ಮ ದೇಶದಲ್ಲಿ ಶೇ.39 ರಷ್ಟು ಪೂರ್ಣ ಸಸ್ಯಾಹಾರಿಗಳೇ ಇದ್ದಾರೆ. ಶೇ.61 ರಷ್ಟು ಮಾಂಸಾಹಾರಿಗಳಿದ್ದರೂ ಅವರೂ ಸಹ ಹೆಚ್ಚಿನ ಪ್ರಮಾಣದಲ್ಲಿ ಸಸ್ಯಹಾರಗಳನ್ನೇ ಬಳಸುವವರೂ ಆಗಿದ್ದಾರೆ. ಭಾರತ ಬಿಟ್ಟರೆ ವಿಶ್ವದಲ್ಲಿ ತೈವಾನ್ ಹಾಗೂ ಇಸ್ರೇಲ್ ದೇಶಗಳಲ್ಲಿ ಶೇ.13ರಷ್ಟು ಸಸ್ಯಹಾರಿಗಳಿದ್ದು, ಇಟಲಿ ಮತ್ತು ಸ್ವೀಡನ್‌ನಲ್ಲಿ



ಶೇ.10 ರಷ್ಟು ಸಸ್ಯಾಹಾರಿಗಳಿದ್ದಾರೆ. ಸಸ್ಯಾಹಾರ ಸೇವನೆಯಿಂದ ಸಾತ್ವಿಕ ಭಾವನೆಗಳು ಉಂಟಾಗುತ್ತವೆ. ಇದು ಆರೋಗ್ಯಕ್ಕೂ ಪೂರಕವಾಗಿದೆ ಎಂಬುದು ವಿಶ್ವದ ಅನೇಕ ಆಹಾರ ತಜ್ಞರ ಅಭಿಪ್ರಾಯವೂ ಆಗಿದೆ ಎಂದ ಹೆಚ್.ಬಿ. ಎಂ, ಸಸ್ಯಹಾರಿಗಳ ಸಂಖ್ಯೆ ಹೆಚ್ಚಾದರೆ ಆಹಾರದ ಕೊರತೆಯಾಗಬಹುದೆಂಬ ಆತಂಕ ಬೇಡ, ಕಾರಣ ಒಂದು ಕೆಜಿ ಮಾಂಸ ಉತ್ಪತ್ತಿಯಾಗಲು ಕನಿಷ್ಠ 3 ರಿಂದ 7 ಕೆಜಿಯಷ್ಟು ದವಸಧಾನ್ಯ ಹಾಗೂ ಕನಿಷ್ಠ 10 ರಿಂದ 80 ಕೆಜಿಯಷ್ಟು ಸಸ್ಯಗಳು ಮೂಲಗಳು, ಪ್ರಾಣಿಗಳಿಗೆ ಬೇಕು ಎಂಬ ಲೆಕ್ಕಾಚಾರವೂ ಇದೆ ಎಂದರಲ್ಲದೇ, ಕೇವಲ ಸಸ್ಯಾಹಾರದಿಂದ ಕೆಲ ಜೀವ ಸತ್ವಗಳು ಹಾಗೂ ಪೋಷಕಾಂಶಗಳು ಸಿಗಲಿಕ್ಕಿಲ್ಲ ಎಂಬ ಆತಂಕವೂ ಬೇಡ, ಎಲ್ಲಾ ಅಗತ್ಯ ಜೀವ ಸತ್ವ ಹಾಗೂ ಪೋಷಕಾಂಶಗಳನ್ನು ಒದಗಿಸುವ ವೈವಿಧ್ಯಮಯ ಸಸ್ಯ ಜನ್ಯ ಆಹಾರಗಳಿಗೆ ವಿಶ್ವದಲ್ಲಿ ಅದರಲ್ಲೂ ಭಾರತದಲ್ಲಿ ಕೊರತೆ ಇಲ್ಲ ಎಂದರು.

ಮಾಂಸಾಹಾರಿ ಪ್ರಾಣಿಗಳೂ ಸಹ ಸಸ್ಯಾಹಾರಿ ಪ್ರಾಣಿಗಳ ಮಾಂಸವನ್ನೇ ಸೇವಿಸುತ್ತವೆ ವಿನಃ ಮಾಂಸಾಹಾರಿ ಪ್ರಾಣಿಗಳನ್ನು ಸೇವಿಸುವುದಿಲ್ಲ ಎಂದರು.

ನಮ್ಮ ಸನಾತನ ವೇದಾದಿ ಸಾಹಿತ್ಯಗಳು ಭಗವದ್ಗೀತೆ ಸಹಾ ಸಾತ್ವಿಕ ಆಹಾರವನ್ನೇ ಸಮರ್ಥಿಸು ತ್ತಿದ್ದು, ಮಾಂಸಾಹಾರವನ್ನು ತ್ಯಜಿಸಿದಲ್ಲಿ ಸಿಗುವ ಪುಣ್ಯಗಳ ಬಗ್ಗೆ ವಿಷ್ಣುಧರ್ಮೋತ್ತರ ಪುರಾಣದಲ್ಲಿ ಉಲ್ಲೇಖಿಸ ಲಾಗಿದೆ ಎಂದೂ ಮಂಜುನಾಥ್ ಹೇಳಿದರು.

ಡಿವೈಎಸ್ಪಿ ಬೆರಳಚ್ಚುತಜ್ಞ ರುದ್ರೇಶ್, ಪಾಲಿಕೆ ಸದಸ್ಯ ಕೆ.ಎಂ.ವೀರೇಶ್, ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಆರ್.ಶೇಖರಪ್ಪ, ಕರ್ನಾಟಕ ಪಿರಮಿಡ್ ಮೂವ್‌ಮೆಂಟ್‌ನ ಸಂಸ್ಥಾಪಕಿ ಸುಮಂಗಲಾ, ಅಧ್ಯಾತ್ಮ ಚಿಂತಕ ಬರಹಗಾರ ಕಣಜನಹಳ್ಳಿ ನಾಗರಾಜ್, ಗೌರಿಶಂಕರ್, ಗೌರೀಶ್ ಮುಂತಾದವರು ಮಾತನಾಡಿ, ಸಸ್ಯಹಾರದ ಮಹತ್ವ ಹಾಗೂ ಪಿರಮಿಡ್ ಧ್ಯಾನದ ವಿಶೇಷತೆ ವಿವರಿಸಿದರು. ಕೃಷ್ಣಕುಮಾರ್, ಜಯಾ ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

ಎನ್.ಸಿದ್ಧಾರೂಢ ಸ್ವಾಮಿ ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಗೀತಾರಾಮ್ ಹಾಗೂ ಮಂಗಳಮ್ಮ ಸಂಗಡಿಗರು ಹಾಡಿದರೆ, ಸ್ವಾಗತವನ್ನು ಕೆ.ಜಿ.ಮಾರುತಿ ರಾಮ್ ಕೋರಿದರು.

ನಗರದಲ್ಲಿ ನೂತನ ಪಿರಮಿಡ್ ನಿರ್ಮಾಣಕ್ಕಾಗಿ ಪಾಲಿಕೆ ಸದಸ್ಯ ಕೆ.ಎಂ.ವೀರೇಶ್ ಅವರಿಗೆ ಮನವಿ ಸಲ್ಲಿಸಲಾಯಿತು. ಕರಿಬಸಪ್ಪ ವಂದನೆ ಸಲ್ಲಿಸಿದರು.

## ಪವರ್ ಲಿಫ್ಟಿಂಗ್‌ನಲ್ಲಿ ಸುಕೃತಾ ಪ್ರಥಮ



ದಾವಣಗೆರೆ, ಮಾ.7- ಉತ್ತರ ಕನ್ನಡ ಜಿಲ್ಲೆ ಕುಮುಟಾದ ಟೌನ್‌ಹಾಲ್‌ನಲ್ಲಿ ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಷಿಯೇಷನ್ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಸಬ್ ಜ್ಯೂನಿಯರ್ ಪವರ್ ಲಿಫ್ಟಿಂಗ್ ಸ್ಪರ್ಧೆಯ 76 ಕೆಜಿ ವಿಭಾಗದಲ್ಲಿ ನಗರದ ಶ್ರೀ ಸೋಮೇಶ್ವರ ವಿದ್ಯಾಲಯದ ವಿದ್ಯಾರ್ಥಿನಿ ಸುಕೃತಾ ಜಿ.ಆರ್ ಪ್ರಥಮ ಸ್ಥಾನ ಗಳಿಸಿದ್ದಾರೆ.

ಶಾಲಾ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿ ಕೆ.ಎಂ ಸುರೇಶ್ ಹಾಗೂ ಪ್ರಾಚಾರ್ಯರು, ಮುಖ್ಯೋಪಾಧ್ಯಾಯರು ಸೇರಿದಂತೆ ಶಿಕ್ಷಕ ವೃಂದದವರು ಶುಭ ಕೋರಿ ಅಭಿನಂದಿಸಿದ್ದಾರೆ.

## ಬೆರಗು ಮೂಡಿಸುವ ಸಫಾಯಿ ಕರ್ಮಚಾರಿ

# ಶೇಕಮ್ಮನ ಶೈಕ್ಷಣಿಕ ಕಳಕಳಿ...!



'ನನ್ನವ್ವ ಫಲವತ್ತಾದ ಕಪ್ಪು ನೆಲ ಅಲ್ಲಿ ಹಸಿರು ಪತ್ರದ ಹರವು,
ಬಿಳಿ ಹೂ ಹಬ್ಬ ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು...'
ಕರಡಿ ತನ್ನ ಮಕ್ಕಳನ್ನ ಹೊತ್ತು ಸಾಗುವಂತೆ,
ನನ್ನವ್ವ ಮಕ್ಕಳನ್ನು ಕುತ್ತಿಗೆ, ಕಂಕುಳದಲ್ಲಿ ಹೊತ್ತು ಸಾಗಿದಳು...


ವಿಶ್ವ ಮಹಿಳಾ ದಿನ
ಮಹಿಳೆಯ ಅರಿಯಲೊಂದು ದಿನ

**ಪಿ. ಲಂಕೇಶ್ ಅವರ "ಅವ್ವ" ಕವನದ ಈ ಸಾಲುಗಳು ನೆನಪಾಗುತ್ತಿವೆ. ಕಾರಣ ಇತ್ತೀಚಿಗೆ ಶೇಕಮ್ಮ ಎಂಬ 88 ವರ್ಷದ ಅನಕ್ಷರಸ್ಥ ಮಹಿಳೆ ತನ್ನ ಮಕ್ಕಳನ್ನು ಕಷ್ಟಪಟ್ಟು ಅಕ್ಷರಸ್ಥ ನಾಗರಿಕರನ್ನಾಗಿ ಬೆಳೆಸಿದ ಬೆರಗು ಮೂಡಿಸುವ ಕಥೆಯನ್ನು ಕೇಳಿದಾಗ....ಶಿಕ್ಷಣವೇ ಶಕ್ತಿ! ಇದು ಸಫಾಯಿ ಕರ್ಮಚಾರಿಯಾಗಿದ್ದ ಶೇಕಮ್ಮನವರ ಧ್ಯೇಯ ವಾಕ್ಯ. ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯಲ್ಲಿ ಸಫಾಯಿ ಕರ್ಮಚಾರಿಯಾಗಿ ಶೇಕಮ್ಮ ಕೆಲಸ ಮಾಡುತ್ತಿದ್ದರು. ಅವರ ವಂಶದಲ್ಲಿ ತಲೆತಲಾಂತರದಿಂದ ಬಂದಂತಹ ವೃತ್ತಿ ಈ ಸಫಾಯಿ ಕೆಲಸ. ಈ ಸಫಾಯಿ ಕರ್ಮಚಾರಿ ವೃತ್ತಿ ನನ್ನೊಂದಿಗೆ ಕೊನೆಗಾಣಬೇಕು. ಇದನ್ನು ಮಾಡಿಯೇ ತೀರುತ್ತೇನೆ ಎಂದು ಶೇಕಮ್ಮ ಅವರ ತಂದೆಗೆ ಶಪಥ ಮಾಡಿದ್ದರು. ಜೊತೆಗೆ ತನ್ನ ಮಕ್ಕಳನ್ನು ಶಿಕ್ಷಿತರನ್ನಾಗಿ ಖಂಡಿತಾ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದರು. ಶಿಕ್ಷಣ ಎನ್ನುವುದು ಅವರ ಕುಟುಂಬದಲ್ಲಿ ಕನಸಿನ ಮಾತಾಗಿತ್ತು.**



ಮಕ್ಕಳು-ಮೊಮ್ಮಕ್ಕಳೊಂದಿಗೆ ಶೇಕಮ್ಮ....

ನನ್ನವ್ವ ಯಾವತ್ತೂ ಶಾಲೆಗೆ ಹೋದವಳಲ್ಲ
ಆದ್ರೆ ಅವಳು ಕಲಿಸಿದ ಪಾಠನ
ನನಗೆ ಯಾವ ಶಾಲೆನೂ ಕಲಿಸಿಲ್ಲ
ನನ್ನವ್ವ ಎಂಬಿಬಿಎಸ್ ಓದಿ ಡಾಕ್ಟರ್ ಆದವಳಲ್ಲ,
ಆದ್ರೆ ಅವಳು ಕೊಟ್ಟ ಮದ್ದನ್ನ
ಇವತ್ತಿಗೂ ಯಾವ ಡಾಕ್ಟರ್‌ನೂ ಕೊಟ್ಟಿಲ್ಲ....
ನನ್ನವ್ವ ದೊಡ್ಡ ದೊಡ್ಡ ಪುಸ್ತಕಗಳನ್ನು
ಓದಿ ಅರ್ಥಶಾಸ್ತ್ರ ಕಲಿತಿಲ್ಲ
ಆದ್ರೆ ಅವಳ ರೀತಿ ದುಡ್ಡು ಉಳಿಸೋದನ್ನ
ಯಾವ ಅರ್ಥಶಾಸ್ತ್ರಜ್ಞನಿಂದನೂ ನಾ ಕೇಳಿಲ್ಲ...
ನನ್ನವ್ವ ಅಂಥ ದೊಡ್ಡ ಹಾಡುಗಾರ್ತಿ ಏನಲ್ಲ,
ಆದ್ರೆ ಅವಳು ಹಾಡಿದ ಜೋಗುಳಕ್ಕಿಂತ ಮಧುರವಾದ
ಇನ್ನೊಂದು ಹಾಡನ್ನ ನಾ ಇಲ್ಲಿಯವರೆಗೂ ಕೇಳಿ ಇಲ್ಲ...
ಕೊನೆಗೆ, ಅವಳಷ್ಟು ನಿಷ್ಕಲ್ಮಶವಾದ ಪ್ರೀತಿನಾ ನಾ ಹಿಂದೆ ಕಂಡಿಲ್ಲ...,
ಮುಂದೆಂದೂ ಕಾಣೋದು ಇಲ್ಲ....!



ಸಂಗ್ರಹ

ಶೇಕಮ್ಮನವರ ವೈಯಕ್ತಿಕ ಜೀವನವೂ ಸುಖಕರವಾಗಿರಲಿಲ್ಲ. ಗಂಡ ಪಿ. ನಾರಾಯಣ್ ಹಟ್ಟಿ ಚಿನ್ನದ ಗಣಿಯಲ್ಲಿ ಫೋರ್ ಮನ್ ಆಗಿದ್ದರು. ಅವರು ಅಲ್ಲಿಯ ಕಾರ್ಮಿಕರ ಯೂನಿಯನ್ ನಲ್ಲಿ ಮುಖಂಡರಾಗಿದ್ದರು. ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಯೂನಿಯನ್ ನ ಮುಷ್ಕರಗಳಿಂದಾಗಿ ಪದೇ ಪದೇ ಜೈಲು ಸೇರುತ್ತಿದ್ದರು. ಒಮ್ಮೆ 1964ರಲ್ಲಿ ಕಮ್ಯುನಿಷ್ಟ್ ಪಕ್ಷದ ಕಾನ್ ಫರೆನ್ಸ್ ಗೆಂದು ಕೊಲ್ಕೊತ್ತಾಗೆ ಹೋಗಿದ್ದ ನಾರಾಯಣ್ ಮತ್ತೆ ಹಿಂದಿರುಗಲೇ ಇಲ್ಲ! ಅವರು ಏನಾದರು? ಎಲ್ಲಿಗೆ ಹೋದರು ಗೊತ್ತಾಗಲೇ ಇಲ್ಲ. ಆಗ ಶೇಕಮ್ಮನವರಿಗೆ ಕೇವಲ ಇಪ್ಪತ್ತೆಂಟು ವರ್ಷ! ಮಡಿಲಲ್ಲಿ ನಾಲ್ಕು ಮಕ್ಕಳು. ರವಿ, ಕಮಲ, ಪದ್ಮವರ್ಧನ್, ಭಾಗ್ಯ. ಇದ್ದಕಿದ್ದ ಹಾಗೆ ಶೇಕಮ್ಮನ ಜೀವನದಲ್ಲಿ ಬರಸಿಡಿಲು ಬಡಿದಂತಾಗಿತ್ತು. ಮುಂದೇನು ಮಾಡಬೇಕು? ಹೇಗೆ ಜೀವನ ನಡೆಸಬೇಕು? ಒಂದೂ ತೋಚಲಿಲ್ಲ. ನೆರವಿಗೆ ನೆಂಟರಾರೂ ಬರಲಿಲ್ಲ. ಕಾರ್ಮಿಕ ಸಂಘಟನೆಯವರು ಪ್ರತಿಯೊಬ್ಬರಿಂದ ಚಂದಾ ಎತ್ತಿ ಆರ್ಥಿಕ ಸಹಾಯ ಮಾಡಲು ಮುಂದಾದಾಗ ಶೇಕಮ್ಮ ಅದಕ್ಕೆ ಒಪ್ಪಲಿಲ್ಲ. ಸ್ಥಳೀಯ ಶಾಸಕರೊಬ್ಬರು ಇವರ ಮಗನಿಗೆ ಸಹಾಯಕ್ಕೆಂದು ಇಪ್ಪತ್ತು ರೂಪಾಯಿ ಕೊಟ್ಟಾಗ ಅದನ್ನು ನಯವಾಗಿ ತಿರಸ್ಕರಿಸಲು ಹೇಳಿದರು. ಅತ್ಯಂತ ಸ್ವಾಭಿಮಾನಿಯಾಗಿದ್ದ ಶೇಕಮ್ಮ ಗಟ್ಟಿ ಮನಸ್ಸು ಮಾಡಿಕೊಂಡು ಒಬ್ಬಂಟಿಯಾಗಿ ಬದುಕಿನ ಜಟಕಾ ಬಂಡಿಯನ್ನು ಸಾಗಿಸಲು ಮುಂದಾದರು. ಆಗ ಒಂದು ದಿಟ್ಟ ನಿರ್ಧಾರವನ್ನು ತೆಗೆದುಕೊಂಡರು. ಏನೇ ಕಷ್ಟ ಬರಲಿ ಎಲ್ಲಾ ಮಕ್ಕಳನ್ನು ಓದಿಸಲೇಬೇಕು ಎಂಬ ಛಲ ತೊಟ್ಟರು. ಎಲ್ಲರನ್ನೂ ಕಾನ್ವೆಂಟ್ ಶಾಲೆಗೆ ಸೇರಿಸಿದರು. ಆಗ ಅವರಿಗೆ ಬರುತ್ತಿದ್ದ ಸಂಬಳ ಕೇವಲ ಐವತ್ತೈದು ರೂಪಾಯಿಗಳು! ಬರುವ ಸಂಬಳದಲ್ಲಿ ಶೇಕಡಾ ಎಂಬತ್ತರಷ್ಟು ಮಕ್ಕಳ ವಿದ್ಯಾಭ್ಯಾಸಕ್ಕೆ ಹೋಗುತ್ತಿತ್ತು. ಇನ್ನುಳಿದ ಹಣದಲ್ಲಿ ಸಂಸಾರ ಸಾಗಿಸಬೇಕು. ತನ್ನ ಮಕ್ಕಳ ಹೊಟ್ಟೆಗೆ ಬಟ್ಟೆಗೆ ಶೇಕಮ್ಮ ಯಾವತ್ತೂ ಕೊರತೆ ಮಾಡಲಿಲ್ಲ. ತಾನು ಮಾತ್ರ ವರ್ಷಾನುಗಟ್ಟಲೇ ಗಂಜಿ ಕುಡಿದು ಜೀವನ ಸಾಗಿಸಿದರು. ಮುಂದೆ ಹಿರಿಯ ಮಗ ರವಿ ಹೈಸ್ಕೂಲ್ ಸೇರುವ ದಿನ ಬಂದಿತು. ಆತನನ್ನು ರಾಯಚೂರಿನ ಶಾಲೆಗೆ ಸೇರಿಸಬೇಕಿತ್ತು. ಅದಕ್ಕಾಗಿ ಹೆಚ್ಚಿನ ಹಣದ ಅವಶ್ಯಕತೆಯಿತ್ತು. ಆಗ ಕಂಪನಿಯವರು ಮಗನಿಗೆ ಕೆಲಸ ಕೊಡುವುದಾಗಿ ಹೇಳಿದರೂ ಶೇಕಮ್ಮ ಅದನ್ನು ನಿರಾಕರಿಸಿ ಮಗನಿಗೆ ಹೆಚ್ಚು ಓದಿಸಲೇಬೇಕೆಂದು ತಾನು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಸಾಲ ಪಡೆದರು. ರಾಯಚೂರಿನ ಶಾಲೆಗೆ ರವಿಯನ್ನು ಸೇರಿಸಿದರು. ರವಿ ಕಷ್ಟಪಟ್ಟು ಓದಿದರು. ಪದವಿಯನ್ನು ಪಡೆದರು. ಬ್ಯಾಂಕ್‌ನಲ್ಲಿ ಒಂದಷ್ಟು ವರ್ಷ ಕೆಲಸ ಮಾಡಿದರು. ಪೊಲೀಸ್ ಪರೀಕ್ಷೆಯಲ್ಲಿ ಪಾಸಾದರು. ದಾವಣಗೆರೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಸರ್ಕಲ್ ಇನ್‌ಸ್ಪೆಕ್ಟರ್ ಆಗಿ, ಮುಂದೆ ಪೊಲೀಸ್ ವರಿಷ್ಠಾಧಿಕಾರಿಯಾಗಿ ನಿವೃತ್ತಿ ಹೊಂದಿದರು. ತಮ್ಮ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು ಸೂಪರ್ ಕಾಪ್ ರವಿನಾರಾಯಣ್ ಎನಿಸಿಕೊಂಡರು. ಶೇಕಮ್ಮನವರ ಮೊದಲನೆಯ ಮಗ ರವಿ ಹೀಗೆ ಬೆಳಗಿದರೆ, ಅವರ ಸೋದರಿ ಕಮಲ ಸಹ ರಾಯಚೂರಿನಲ್ಲಿ ಹೈಸ್ಕೂಲ್‌ನಲ್ಲಿ ನಂತರ ಮುಂದಿನ ವ್ಯಾಸಂಗವನ್ನು ಚೆನ್ನಾಗಿ ಮಾಡಿ ಪೋಸ್ಟ್ ಆಫೀಸಿನಲ್ಲಿ ಕೆಲಸ ಗಿಟ್ಟಿಸಿದರು. ಮುಂದೆ ತಾಯಿ ಶೇಕಮ್ಮನವರ ಸಂಕಲ್ಪವನ್ನು ಮುಂದುವರೆಸಿ ತನ್ನ ಮಗಳಾದ ಪದ್ಮಾ ಅವರನ್ನು ಚೆನ್ನಾಗಿ ಓದಿಸಿದರು. ಜಿಯೋಗ್ರಫಿಯಲ್ಲಿ ಬಂಗಾರದ ಪದಕವನ್ನು ಪಡೆದ ಪದ್ಮಾ ಬಸವಂತಪ್ಪ ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಸು ಮಾಡಿ ದಾವಣಗೆರೆಯ ಜಿಲ್ಲಾ ಪಂಚಾಯತ್ ನಲ್ಲಿ ಕೆಲವು ವರ್ಷ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿ.ಇ.ಒ) ಆಗಿ ಕೆಲಸ ನಿರ್ವಹಿಸಿ ಈಗ ಐ.ಎ.ಎಸ್. ಅಧಿಕಾರಿಯಾಗಿದ್ದಾರೆ.

ಕಮಲ ಅವರ ಮಗ ಪ್ರಮೋದ್ ಕೂಡ ಚೆನ್ನಾಗಿ ಶಿಕ್ಷಣ ಪಡೆದು ಈಗ ಒಳ್ಳೆಯ ಕೆಲಸದಲ್ಲಿದ್ದಾರೆ. ಶೇಕಮ್ಮನವರ ಕೊನೆಯ ಮಗಳು ಭಾಗ್ಯ ಕೂಡ ಅತ್ಯುತ್ತಮವಾಗಿ ವ್ಯಾಸಂಗ ಮಾಡಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಎಕನಾಮಿಕ್ಸ್ ವಿಷಯದಲ್ಲಿ ಬಂಗಾರದ ಪದಕ ಪಡೆದು ಉತ್ತೀರ್ಣರಾದರು. ಅವರೂ ಸಹ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಭಾರತೀಯ ರೆವಿನ್ಯೂ ಸರ್ವೀಸ್ ಅಧಿಕಾರಿಯಾಗಿ ಹೊರಹೊಮ್ಮಿದರು. ಭಾಗ್ಯ ಅವರು ಹೈದರಾಬಾದ್ ಕರ್ನಾಟಕದ ಮೊಟ್ಟಮೊದಲ ಸಿವಿಲ್ ಸರ್ವೀಸ್ ತೇರ್ಗಡೆ ಹೊಂದಿದ ಮಹಿಳೆ ಎಂದು ಹೇಳಲಾಗುತ್ತಿದೆ. ಮೂರನೆಯ ಮಗ ಪದ್ಮವರ್ಧನ್ ಸಹ ತಾಯಿಯ ಪ್ರೋತ್ಸಾಹದಿಂದ ಉತ್ತಮವಾಗಿ ವ್ಯಾಸಂಗ ಮಾಡಿದರು ಮುಂದೆ ವಕೀಲರಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಕೆಲಸ ನಿರ್ವಹಿಸಿದರು.

ತನ್ನ ಮಕ್ಕಳು ಓದುವಾಗ ಶೇಕಮ್ಮ ಸಮಯವನ್ನು ವ್ಯರ್ಥ ಮಾಡಿಲ್ಲ, ಸಿನಿಮಾ, ನಾಟಕ, ಟಿ.ವಿ. ಒಂದೂ ನೋಡಿಲ್ಲ. ಬೆಳಿಗ್ಗೆ ಎದ್ದು ದೇವಸ್ಥಾನಗಳಿಗೆ ಭೇಟಿ ನೀಡಿ ನೇರವಾಗಿ ಮನೆಗೆ. ಅಕ್ಕಪಕ್ಕ ಮನೆಗಳ ಕಡೆಗೂ ತಲೆ ಹಾಕುತ್ತಿರಲಿಲ್ಲ. ಅಕ್ಕಪಕ್ಕದಲ್ಲಿದ್ದ ತನ್ನ ವೃತ್ತಿ ಬಾಂಧವರು ಮನೆಗಳ ಮುಂದಿನ ಹಳ್ಳದ ಪಕ್ಕದಲ್ಲಿದ್ದ ಹೆಂಡದ ಅಂಗಡಿಗೆ ತಮ್ಮ ಮಕ್ಕಳನ್ನು ಸಾರಾಯಿ ತರಲು ಕಳುಹಿಸುತ್ತಿದ್ದರೆ, ಈ ತಾಯಿ ತನ್ನ ಮಕ್ಕಳಿಗೆ ಆ ವಿಷಯ ಗಮನಕ್ಕೆ ಬಾರದಂತೆ ಒಂದರ್ಥದಲ್ಲಿ ಕೋಳಿ ತನ್ನ ಮರಿಗಳು ಹೊರಗಡೆ ಹೋಗದಂತೆ ರೆಕ್ಕೆಯಿಂದ ಬಾಚಿ ತಬ್ಬಿಕೊಂಡ ಹಾಗೆ ನೋಡಿಕೊಳ್ಳುತ್ತಿದ್ದರು. ಏನಿದ್ದರೂ ಮಕ್ಕಳ ಓದಿನ ಕಡೆ ನಿಗಾ. ಬುದ್ಧಿ ಹೇಳುವ ತಾಯಿ, ವಿದ್ಯೆ ಕಲಿಸುವ ಗುರು ಇದ್ದರೆ ಮಕ್ಕಳ ಬಾಳು ಬೆಳಗುತ್ತದೆ. ಇದು ಶೇಕಮ್ಮನವರ ಯಶಸ್ಸಿನ ಮಂತ್ರ.

ತನ್ನ ಎಲ್ಲಾ ಮಕ್ಕಳು ಚೆನ್ನಾಗಿ ಓದಿ ಉನ್ನತ ಸ್ಥಾನ ಗಿಟ್ಟಿಸಿದ ಮೇಲೆ ಶೇಕಮ್ಮ ದುಡಿಯದೇ ಸುಮ್ಮನೇ ಕೂರಬಹುದಿತ್ತು. ಆದರೆ, ಅವರು ಹಾಗೆ ಮಾಡಲಿಲ್ಲ ತಾನು ಮಾಡುತ್ತಿದ್ದ ಕೆಲಸ ಬಿಡಲಿಲ್ಲ. ತನಗೆ ಬರುತ್ತಿದ್ದ ಸಂಬಳದಲ್ಲಿ ಉಳಿತಾಯ ಮಾಡಿ ಕೂಡಿಡುತ್ತಿದ್ದರು. ತನ್ನಂತೆ ಬಡವರಾದ ಹೆಣ್ಣು ಮಕ್ಕಳಿಗೆ, ಓದಲು ಇಷ್ಟಪಡುವ ಬಡ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ತಾನು ಕಷ್ಟಪಟ್ಟು ದುಡಿದು ಬ್ಯಾಂಕಿನಲ್ಲಿ, ಪೋಸ್ಟ್ ಆಫೀಸಿನಲ್ಲಿ ಕೂಡಿಟ್ಟಿದ್ದ ಸುಮಾರು ನಲವತ್ತು ಲಕ್ಷ ರೂ.ಗಳ ಹಣದಿಂದ ಮಕ್ಕಳ ಸಹಕಾರದೊಂದಿಗೆ ಶೇಕಮ್ಮ ಪಿ, ನಾರಾಯಣ್ ಟ್ರಸ್ಟ್ ಸ್ಥಾಪಿಸಿದ್ದಾರೆ. ಅದರಿಂದ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದವರಿಗೆ ರ್‍ಯಾಂಕ್ ಪಡೆದ ಮಕ್ಕಳಿಗೆ ಮಾತ್ರ ಟ್ರಸ್ಟ್ ನಿಂದ ಸ್ಕಾಲರ್‌ಶಿಪ್ ಅನ್ನು ಸೀಮಿತವಾಗಿರಸದೇ ಓದುವ ಆಸಕ್ತಿ ಇರುವ ಪ್ರತಿಯೊಬ್ಬ ಬಡ ಮಕ್ಕಳಿಗೆ ಸಹಾಯ ಮಾಡುತ್ತಿದ್ದಾರೆ. ಈಗ ಈ ಟ್ರಸ್ಟಿನಿಂದ ಪ್ರತಿ ವರ್ಷ ಪೆನ್, ನೋಟ್ ಬುಕ್ಕುಗಳನ್ನು, ಸ್ಕೂಲ್ ಬ್ಯಾಗುಗಳನ್ನು ಬಡ ಮಕ್ಕಳಿಗೆ ವಿತರಿಸಲಾಗುತ್ತಿದೆ. ಅಂಗನವಾಡಿಯಲ್ಲಿ ಸ್ವಚ್ಛತಾ ಕೆಲಸ ಮಾಡುವ ಕಾರ್ಯಕರ್ತೆಯರಿಗೆ ಬಟ್ಟೆಯನ್ನು ವಿತರಿಸುತ್ತಾರೆ.

ತುಂಬಾ ದೈವ ಭಕ್ತೆಯಾದ ಶೇಕಮ್ಮ ನಾಲ್ಕು ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ. ಪ್ರತಿ ಶ್ರಾವಣದಲ್ಲಿ, ಶಿವರಾತ್ರಿಯಲ್ಲಿ ಅನ್ನ ದಾಸೋಹ ಮಾಡುತ್ತಿದ್ದಾರೆ. ತನ್ನ ವೈಯಕ್ತಿಕ ಖರ್ಚಿಗಾಗಿ ಒಂದಷ್ಟು ಹಣವನ್ನು ಕೂಡಿಟ್ಟುಕೊಂಡಿರುವುದಾಗಿ ಹೇಳುವ ಅವರು, ಮುಂದೆ ಆ ಹಣವನ್ನೂ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುತ್ತೇನೆ ಎಂದು ನಮ್ರತೆಯಿಂದ ನುಡಿಯುತ್ತಾರೆ.

ಏನೆಲ್ಲಾ ಯಶಸ್ಸು ಕಂಡಿದ್ದರೂ ಶೇಕಮ್ಮ ದುಃಖಿತರಾಗಿ ಇರುವಂತಹ ಧಾರುಣ ಘಟನೆಗಳು ನಡೆದಿವೆ. ಹಿರಿಯ ಮಗಳು ಕಮಲ ಕ್ಯಾನ್ಸರ್ ನಿಂದ ಮೃತ ಪಟ್ಟರೆ, ಮಗ ಪದ್ಮವರ್ಧನ್ ಹೃದಯಾಘಾತದಿಂದ ಅಸು ನೀಗಿದ್ದಾರೆ. ಆ ದುಃಖದ ಕೆಂಡವನ್ನು ಸೆರಗಿನಲ್ಲಿಟ್ಟುಕೊಂಡು ಬಡವರ ವಿದ್ಯಾಭ್ಯಾಸಕ್ಕಾಗಿ ಸಹಾಯ ಹಸ್ತವನ್ನು ಚಾಚುವ ಈ ಶೇಕಮ್ಮನವರನ್ನು ನೋಡಿದರೆ ಹೆಮ್ಮೆಯೆನಿಸುತ್ತದೆ. ಹೆಣ್ಣೊಂದು ಕಲಿತರೆ ಶಾಲೆಯೊಂದನ್ನು ತೆರೆದಂತೆ, ಇದು ಒಂದು ಪ್ರಚಲಿತ ಮಾತು. ಆದರೆ... ಅನಕ್ಷರಸ್ಥೆಯಾದ ಶೇಕಮ್ಮ ಬಡ ಮಕ್ಕಳ ಶಿಕ್ಷಣಕ್ಕಾಗಿ ಒಂದು ವಿಶ್ವವಿದ್ಯಾಲಯವನ್ನೇ ತೆರೆದಿದ್ದಾರೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ಶೇಕಮ್ಮನವರ ಶೈಕ್ಷಣಿಕ ಕಳಕಳಿಗೆ ಸಾವಿರದ ಶರಣು.

✍ ಅರುಣ್ ಕುಮಾರ್ ಆರ್.ಟಿ.

## ಡಾ. ಶಾಂತಾಭಟ್ ಸೇವೆಗೆ 'ವನಿತಾ ಸೇವಾ ಪ್ರಶಸ್ತಿ' ಇಂದು ಪ್ರದಾನ



ದಾವಣಗೆರೆಯ ಶ್ರೀ ಸತ್ಯಸಾಯಿ ಮಂದಿರದಲ್ಲಿ ಇಂದು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿರುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭ ದಲ್ಲಿ 'ವನಿತಾ ಸೇವಾ ಪ್ರಶಸ್ತಿ'ಯನ್ನು ಡಾ.ಶಾಂತಾಭಟ್ ಅವರಿಗೆ ಪ್ರದಾನ ಮಾಡಲಾಗುವುದು.

ಮಾಜಿ ಸಚಿವರು ಹಾಗು ವನಿತಾ ಸಮಾಜದ ಗೌರವಾಧ್ಯಕ್ಷರಾದ ಸಿ.ನಾಗಮ್ಮ ಕೇಶವಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಮದರ್ಸ್ ತರಬೇತಿ ಕಾರ್ಯಕ್ರಮದ ಸಂಯೋಜಕಿ, ಬೆಂಗಳೂರು ಡಾ.ಎಸ್. ಆರ್.ಸಿ. ವಾಕ್ ಮತ್ತು ಶ್ರವಣ ಸಂಸ್ಥೆಯ ಶ್ರೀಮತಿ ರತ್ನ ಬಿ.ಶೆಟ್ಟಿ ಆಗಮಿಸುವರು.

ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ ಛೇರ್ಮನ್ ಸಿ.ಆರ್. ವಿರೂಪಾಕ್ಷಪ್ಪ 'ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ವನಿತಾ ಸೇವಾ ಪ್ರಶಸ್ತಿ'ಯನ್ನು ಪ್ರದಾನ ಮಾಡುವರು. ವನಿತಾ ಸಮಾಜದ ಅಧ್ಯಕ್ಷರಾದ ಪದ್ಮಾ ಪ್ರಕಾಶ್ ಮತ್ತು ಕಾರ್ಯದರ್ಶಿ ಸುಷ್ಮಾ ಮೋಹನ್ ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿರಲಿದ್ದಾರೆ.

**ಪರಿಚಯ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 30 ವರ್ಷ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರಾಗಿ ಸೇವೆ ಸಲ್ಲಿಸಿ 2014 ರಲ್ಲಿ ವಯೋ ನಿವೃತ್ತಿ ಹೊಂದಿರುವ ಡಾ. ಶಾಂತಾಭಟ್ ಅವರ ಪತಿ ಡಾ.ಎಸ್. ಶ್ರೀಪಾದ ಭಟ್ ಅವರೂ ಸಹ ಹೆಸರಾಂತ ವೈದ್ಯರಾಗಿದ್ದಾರೆ.

ನೂರಾರು ಜನ ಕಿರಿಯ ವೈದ್ಯರಿಗೆ ಪಲ್ಸ್ ಪೋಲಿಯೋ ಸೇರಿದಂತೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತಂತೆ ತರಬೇತಿ ನೀಡಿದ್ದಾರೆ.

ನಿವೃತ್ತಿ ನಂತರ 'ಕಸ-ರಸ' ಅಭಿಯಾನ ಪ್ರಾರಂಭಿಸಿ ಸಾರ್ವಜನಿಕರಿಗೆ ತ್ಯಾಜ್ಯ ನಿರ್ವಹಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದ ಜೊತೆಗೆ ಆರೋಗ್ಯದ ಬಗ್ಗೆಯೂ ಅರಿವು ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ.

ತಮ್ಮ ಮರಣಾ ನಂತರ ಕಣ್ಣು ಮತ್ತು ದೇಹದಾನ ಮಾಡಲು ಉಯಿಲು ಮಾಡಿರುವ ಡಾ.ಶಾಂತಾಭಟ್ ಅವರು ಅನೇಕ ಸೇವಾ ಸಂಸ್ಥೆಗಳಲ್ಲಿ ಸಕ್ರಿಯರಾಗಿ ದ್ದಾರೆ.

ಎಸ್.ಎಸ್.ಬಡಾವಣೆ ನಾಗರಿಕ ಸಮಿತಿ ಅಧ್ಯಕ್ಷರಾಗಿ, ದಾವಣಗೆರೆ ಸ್ಮಾರ್ಟ್ ಸಿಟಿ ಸಲಹಾ ಸಮಿತಿ, ನಗರ ಗ್ರಂಥಾಲಯ ಪ್ರಾಧಿಕಾರ, ಕರ್ನಾಟಕ ಸರ್ಕಾರದ ಖಾಸಗಿ ವೈದ್ಯಕೀಯ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಸಮಿತಿ, ಜಿಲ್ಲಾಮಟ್ಟದ ಕಾರಾಗೃಹ ಸಮಿತಿ ಮತ್ತು ಹಿಮೋಫಿಲಿಯಾ ಸೊಸೈಟಿ ಬ್ಲಡ್ ಬ್ಯಾಂಕ್ ಸಲಹಾ ಸಮಿತಿ ಸದಸ್ಯರಾಗಿ, ವನಿತಾ ಸಮಾಜದ ಪರಿಸರ ವೇದಿಕೆ ಅಧ್ಯಕ್ಷರಾಗಿ, ವನಿತಾ ವೈದ್ಯ ವೇದಿಕೆ ಕಾರ್ಯದರ್ಶಿ ಆಗಿ ಬಿಡುವಿಲ್ಲದೆ ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

## ಅವಳು ಅಳುವಿನಕೊಳ..

ಹಿಗ್ಗಿದ ದಿನವಿಲ್ಲ ಸುಗ್ಗಿಯ ಸಡಗರವಿಲ್ಲ
ಬದುಕಿನಲ್ಲಿ
ಆದರೂ ಏಳುವಳು ನಸುಕಿನಲ್ಲಿ
ಮುಂಜಾವಿನಿಂದ ತಡರಾತ್ರಿಯವರೆಗೆ ಕೆಲಸ
ಕಟ್ಟಿಕೊಂಡಿಹಳು ನಾಳೆ ನನ್ನದೆನ್ನುವ ಕನಸ

ಸೀರೆಯ ಸೆರಗಿನ ಹೊದಿಕೆ ಕಾಲ್ಗೆಜ್ಜೆಯ ಹಾಕಿ
ಕುಳಿತುಕೊಂಡಿಹಳು ಆ ರಾತ್ರಿ ಎಂಬ ಘನ
ಮೌನದಲ್ಲಿ
ಸಾವಿರಾರು ದುಃಖದ ಸಿಕ್ಕುಗಳು ಅವಳ ಮನದಲ್ಲಿ
ರಾತ್ರಿಯಾದರೆ ಅವನ ಕಾಮಕ್ಕೆ ರತಿಯಾಗಿ
ದೇಹವೆಲ್ಲ ದಹನ
ಬೆಳಗಾದರೆ ಬದುಕಿನ ಧ್ಯಾನ

ಉಮ್ಮಳಿಸಿ ಬರುವ ಅವಳ ನಿಟ್ಟುಸಿರಿನ ನೀರವತೆ
ಅರಿಯುವವರು ಯಾರು .?
ಬಾಲ್ಯದಲ್ಲಿ ತಂದೆ ಯೌವ್ವನದಲ್ಲಿ ಗಂಡ
ವೃದ್ಧಾಪ್ಯದಲ್ಲಿ ಮಕ್ಕಳೇ ಅವಳ ಬದುಕಿನ ಸೂರು.!
ಕುಳಿತಿಹಳ ಅಳುವಿನ ಕೊಳದೊಳಗೆ .!!
ಅವಳೊಲವ ಅರಿಯುವ ಒಂದು ಜೀವಕೆ .

ಪ್ರತಿ ಸೂರ್ಯೋದಯವು ಅವಳ ಬಾಳು
ಬೆಳಗುವ ಬದಲು ಸುಡುತ್ತಿದೆ
ದಿನ ನಡೆಯುವ ದೌರ್ಜನ್ಯ, ದರ್ಪ,
ಅತ್ಯಾಚಾರಕ್ಕೆ, ಬದುಕು ನಲುಗಿದೆ
ಸಮಾನವಿಲ್ಲದ ವಿಷಮವು ಅವಳ ಬದುಕು
ನಡೆದರು ನುಡಿದರು ಮೌನವಾದರು ಅವಳ
ಮೇಲೆ ಅನಗತ್ಯ ಕುಹಕ.!

ಹೆಣ್ಣು ಬರಿ ಗಂಡಿನ ಭೋಗವಲ್ಲ
ಬದುಕನ್ನು ಬೆಳಗುವ ಭಾಗ್ಯವು
ಅರಿತರೆ ಬದುಕಿದು ಸಾರ್ಥಕವು
ಹೆಣ್ಣು ಈ ಸೃಷ್ಟಿಯ ಕಣ್ಣಾದರೆ ಗಂಡು ಆ ಕಣ್ಣಿನ
ದಿವ್ಯದೃಷ್ಟಿಯಾದರೆ ಜೀವನ ಸಮ ತೂಕವು .

- ಬಸವರಾಜ. ಕರುವಿನ
ಬಸವನಾಳು

## ರಾಣೇಬೆನ್ನೂರು : ಖೋ-ಖೋ ಪ್ರಥಮ



ರಾಣೇಬೆನ್ನೂರು, ಮಾ.7- ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಮಾಡರ್ನ್ ಖೋ-ಖೋ ಪಂದ್ಯದಲ್ಲಿ ಪ್ರಥಮ ಸ್ಥಾನ ಪಡೆದ ರಾಣೇಬೆನ್ನೂರು ಕ್ರೀಡಾಪಟುಗಳನ್ನು ಶಾಸಕ ಅರುಣಕುಮಾರ ಪೂಜಾರ್ ಅಭಿನಂದಿಸಿದರು.

## ನಗರದಲ್ಲಿ ಇಂದು ಜಸ್ಟಿನ್ ಡಿಸೋಜಾಗೆ ಸನ್ಮಾನ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್, ದಾವಣಗೆರೆ ದಕ್ಷಿಣ ವಲಯ ಘಟಕದ ವತಿಯಿಂದ ಡಾಕ್ಟರೇಟ್ ಪುರಸ್ಕೃತ ಸಿದ್ಧಗಂಗಾ ಶಾಲೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೋಜಾ ಅವರಿಗೆ ಹಾಗು ದಾವಣಗೆರೆ ವಿಶ್ವವಿದ್ಯಾನಿಲಯದ ಪ್ರಸ್ತುತ ಸಾಲಿನಲ್ಲಿ ಚಿನ್ನದ ಪದಕ ಪಡೆದ ಮೂವರು ವಿದ್ಯಾರ್ಥಿನಿಯರನ್ನು ಇಂದು ಸನ್ಮಾನಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ದಾವಣಗೆರೆ ದಕ್ಷಿಣ ವಲಯದ ಅಧ್ಯಕ್ಷ ಡಾ. ರವಿಕುಮಾರ್ ಎ.ಜೆ. ತಿಳಿಸಿದ್ದಾರೆ.

## ಬಡ ಮಕ್ಕಳಿಗೆ ಪ್ರಸಾದ ವ್ಯವಸ್ಥೆ

ದಾವಣಗೆರೆ, ಮಾ. 7- ವನಿತಾ ಸಮಾಜದಿಂದ ಮಾರುತಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ 50ಕ್ಕೂ ಹೆಚ್ಚು ಮಕ್ಕಳಿಗೆ ಅನೇಕ ಸೇವಾ ಸಂಸ್ಥೆಗಳು ಉಚಿತವಾಗಿ ಪೆನ್ನು, ಪುಸ್ತಕ, ಬ್ಯಾಗ್ ನೀಡಿ ಪ್ರೋತ್ಸಾಹಿಸಿವೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ 40x60 East, 40 ಅಡಿ ರೋಡಿಗಿದೆ. 40x57 Corner, 40x60 East, 40x60 North- East Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
20x40 sqft, #523/37, ಶ್ರೀ ಸಿದ್ಧಗಂಗಾ ಹೊಸ ಬಡಾವಣೆ, ಟಾಟಾ ಕಾರ್ ಶೋ ರೂಂ ಹಿಂಭಾಗ , ಆವರಗೆರೆಯಲ್ಲಿ ಒಳ್ಳೆಯ ಇಂಟೀರಿಯರ್, ಟೀಕ್ ಮರದ ಕಿಟಕಿ, ಬಾಗಿಲುಗಳನ್ನೊಳಗೊಂಡ (ಟ್ರಿಪ್ಲೆಕ್ಸ್) ನಾಲ್ಕು ಬೆಡ್ ರೂಂಗಳ ಹೊಸ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಸಂಪರ್ಕಿಸಿ:
99720 13331

**ಮಾರಾಟಕ್ಕಿದೆ**
5-6 ವರ್ಷದ ಉತ್ತಮ ತಳಿ ಅಡಿಕೆ ತೋಟ, 3.18 ಎಕರೆ, ದಾವಣಗೆರೆಯಿಂದ 10 ಕಿ.ಮೀ.
ಫೋ. : 77950 10929

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, 2 ಬೆಡ್ ರೂಮ್, ಬೋರ್ ಕಾರ್ಪೊರೇಷನ್ ನೀರಿನ ಸೌಲಭ್ಯ ಇದೆ. 1 ಹಾಲ್,ವಾಲ್ ಡ್ರೋಪ್, 2 ಶೋಕೇಸ್, 2 ಅಟ್ಟ, ವಿದ್ಯಾನಗರ ಪಾರ್ಕ್ ಪಕ್ಕ, 4th ಮೇನ್, 7th ಕ್ರಾಸ್, H/2 ಶಶಿಕಿರಣ್ ನಿಲಯ.
95917 47333, 97416 78794

**ಸೈಟುಗಳು ಮಾರಾಟಕ್ಕಿವೆ**
ಹಳೆ ಕುಂದುವಾಡದ ಬಳಿ 40x50 ಪಶ್ಚಿಮ ದಕ್ಷಿಣ ಕಾರ್ನರ್ ಮತ್ತು 30×60 ಪಶ್ಚಿಮ ಸೈಟುಗಳು ಮಾರಾಟಕ್ಕಿವೆ. (ಉದ್ದೇಶಿತ ಹೊಸ ಕೋರ್ಟ್ ಎದುರಿಗೆ) ಸಂಪರ್ಕಿಸಿ.
97432 09680

**EC / ಇಸಿ**
E-swathu
Khatha Change
Building Licence
Call : 96118-66449

**ಬೇಕಾಗಿದ್ದಾರೆ**
ಮರ್ಚೆಂಟೈಸರ್ ಹಾಗೂ ಅಕೌಂಟೆಂಟ್ ಹುದ್ದೆಗೆ, ಅನುಭವವುಳ್ಳ BE / Diploma Textile, B.Com ಪದವಿ ಪಡೆದ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ.
99806 62860

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 12000, ಕೆಲಸ 12 ಗಂಟೆ, ಊಟ, ರೂಂ ಉಚಿತ. ವಯಸ್ಸು 18 ರಿಂದ 30. ಸಂಪರ್ಕಿಸಿ :
97400 98064
97400 98047

**WANTED**
Senior Accoutant, Sale Man, Interior designer having knowledge of AUTO CAD (Attractive Salary with PF and ESI)
Contcat : Ambik Furniture, 843, Ashoka Road, Davanagere.-577002
88844 88205

**ಮಳಿಗೆ ಬಾಡಿಗೆಗೆ ಇದೆ**
ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಸರಸ್ವತಿ ಬಡಾವಣೆ, ಕೆನರಾ ಬ್ಯಾಂಕ್ ಹತ್ತಿರ, ನಿಟುವಳ್ಳಿ, ದಾವಣಗೆರೆ.
81055 42689, 97419 44456

**2 BHK ಮನೆ ಬಾಡಿಗೆಗೆ ಇದೆ**
ಸರಸ್ವತಿ ಬಡಾವಣೆ, ಗ್ರೌಂಡ್ ಫ್ಲೋರ್‌ನಲ್ಲಿ ಇಂಡಿಪೆಂಡೆಂಟ್ 30x50 ಅಳತೆಯ ಉತ್ತರ ದಿಕ್ಕಿನ 2 BHK ಮನೆ ಬಾಡಿಗೆಗೆ ಇದೆ.
96069 18129, 98453 52460

**JOBS**
HR, Civil Engineer, Autocad Draftsman, Telecallers, CRM, Billing, sales, Graphic Designer, Office Manager, Marketing, Cashier, Digital Marketing
98444 92888

**ನೇರ ಪರೀಕ್ಷೆಗಳು**
SSLC, PUC, BA, B.Com, BBA, MBA (ALL) B.Tech, Diploma, ITI, NTC,
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**ಮನೆ ಬಾಡಿಗೆಗೆ ಇದೆ**
ಶ್ರೀ ಗುರು ಕೊಟ್ಟೂರೇಶ್ವರ ಬಡಾವಣೆ, ಗಣೇಶ್ ಮಿಲ್ ಹತ್ತಿರ, ನಾಲ್ಕು ಬೆಡ್ರೂಮ್ ಮನೆ ಬಾಡಿಗೆಗೆ ಇದೆ.
98803 99998, 97414 48981

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101
25.03.2023 ಮೂರು ಜ್ಯೋತಿರ್ಲಿಂಗ, ಶಿರಡಿ, ಬಸ್ ಪ್ರವಾಸ, ಭೀಮಾಶಂಕರ, ಘೃಷ್ಣೇಶ್ವರ, ತ್ರಯಂಭಕೇಶ್ವರ, ನಾಸಿಕ್, ಶಿರಡಿ ಶನಿಸಿಂಗನಾಪುರ, ಎಲ್ಲೋರ, ಕೊಲ್ಲಾಪುರ, ಪಂಡರಾಪುರ, ಬಿಜಾಪುರ 6 ದಿನಗಳು.
12.4.2023 ತಮಿಳುನಾಡು ಬಸ್ ಪ್ರವಾಸ: ಶ್ರೀರಂಗಂ, ರಾಮೇಶ್ವರ, ಕನ್ಯಾಕುಮಾರಿ, ಸುಚೀಂದ್ರಂ, ಕೊಡೈಕೆನಾಲ್, ಪಳನಿ, ಈಶ ಫೌಂಡೇಶನ್.. 5 ದಿನಗಳು. ರೂ.12000/-
27.4.2023 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಮಧ್ಯಪ್ರದೇಶ ವಿಮಾನ ಪ್ರವಾಸ: ಸೋಮನಾಥ, ನಾಗೇಶ್ವರ, ಮಹಾಕಾಳೇಶ್ವರ, ಓಂಕಾರೇಶ್ವರ, ನಿಷ್ಕಳಂಕ ಮಹಾದೇವ, ದ್ವಾರಕ, ಬೇಟ್ ದ್ವಾರಕ, ಪೋರ್ ಬಂದರ್, ಸರ್ದಾರ್ ಪಟೇಲ್ ಪ್ರತಿಮೆ, ಅಹಮದಾಬಾದ್ 10 ದಿನಗಳು. 42900/-
11.5.2023 ವೈಷ್ಣೋದೇವಿ ವಿಮಾನ ಪ್ರವಾಸ: ಅಮೃತಸರ, ವೈಷ್ಣೋದೇವಿ, ದೆಹಲಿ, ಆಗ್ರಾ, ಮಥುರ 8 ದಿನಗಳು. ರೂ. 36900/-
25.7.2023 ಕಾಶಿ, ಜಾರ್ಖಂಡ್ ( ವೈದ್ಯನಾಥ) ನಾಲ್ಕು ಜ್ಯೋತಿರ್ಲಿಂಗ ವಿಮಾನ ಪ್ರವಾಸ: ಕಾಶಿ ವಿಶ್ವನಾಥ, ವೈದ್ಯನಾಥ, ಓಂಕಾರೇಶ್ವರ, ಮಹಾಕಾಳೇಶ್ವರ & ಸಾರಾನಾಥ್, ಪ್ರಯಾಗ್ ರಾಜ್, ಅಯೋಧ್ಯ ಗಯಾ, ಬುದ್ಧಗಯಾ, 12 ದಿನಗಳು ರೂ. 47900/- (ಏಪ್ರಿಲ್ ತಿಂಗಳೊಳಗೆ ಬುಕ್ ಮಾಡಿದರೆ 2000/- ರಿಯಾಯಿತಿ) ಎಲ್ಲಾ ಪ್ರವಾಸಕ್ಕೂ ಕಾಫಿ, ತಿಂಡಿ-ಊಟ, ಏಸಿ ರೂಂ, ಪ್ರಯಾಣ ವೆಚ್ಚ ಸೇರಿದೆ (ಸ್ಥಳೀಯ ವೆಚ್ಚ ಪ್ರತ್ಯೇಕ)
ಮಲ್ಲಿಕಾರ್ಜುನ ಟೂರ್ಸ್, ತುಮಕೂರು
8496044942, 8277409101

**ಬೇಕಾಗಿದ್ದಾರೆ**
ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. & ಪಿಯುಸಿ, & ಐಟಿಐ ಆಗಿರಬೇಕು.
9844541894, 9611966599

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ, ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ: 2 & 3 ರಂದು ಬಸವರಾಜ ಲಾಡ್ಜ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಭಟ್ಟರು, ದೋಸೆ, ಚೈನೀಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಸಂಪರ್ಕಿಸಿ : 93537 16855

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಆಸಕ್ತ ಯುವಕರು ಬೇಕಾಗಿದ್ದಾರೆ.
91106 21233

**WANTED**
Service Engineer
ITI Electronics & Mechanic
Freshers can also apply.
Only Davangere Localates can contact:
ESSKAY TECHNOLOGY
98807 65334

**WANTED CENTRE HEAD AND TEACHERS**
FOR A CONCEPT PRE-SCHOOL
Candidates Who Are Graduate With Minimum Two Years Experience In The Education Field, With Good Communication Skill Are Requested. To Forward The Resume To E-mail : CHIRANTANA.DVG@GMAIL.COM.
CALL : 63609 93735

**ಮನೆ ಮತ್ತು ರೂಂ ಬಾಡಿಗೆಗೆ**
2 BHK ಆಂಜನೇಯ ಬಡಾವಣೆ, 15ನೇ ಕ್ರಾಸ್, 1st Floor, 24 Hours ಬಿಸಿ ನೀರಿನ ವ್ಯವಸ್ಥೆ. ರೂಂ For Ladies Only (Semi Furnished) (only for Vegeterians)
99002 11208
99801 33935

**WANTED MALE/ FEMALE TEACHERS**
B.SC B.ED (SCIENCE), BA B.ED (SOCIAL SCI) D.ED. PUC NTC.
APPLY/ CONTACT WITH RESUME.
VINAYAKA CONVENT KALIKADEVI ROAD DVG.
VINAYAKA PUBLIC SCHOOL KONDAJJI ROAD DVG.
CELL: 95356 10817
NOTE: We'll give preference experienced hands only.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60-40x60 South ಅಕ್ಕ-ಪಕ್ಕ, 120 ಅಡಿ ರೋಡಿಗಿದೆ. 40x60 South, 40x60 East, 40x60 West, 50x80 West
ಐನಳ್ಳಿ, ಚನ್ನಬಸಪ್ಪ ಏಜೆಂಟ್
99166 12110

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. ಬಿ ಬ್ಲಾಕ್, 5ನೇ ಮೇನ್, ಕಾರ್ನರ್, 3ನೇ ಕ್ರಾಸ್ ಸೈಟ್ ಅಳತೆ 10x30
ಫೋ. : 82177 72482

**WANTED**
Need experienced suppliers for Shiva nanda Hotel, Need tea, coffee maker boy. Hadadi Road.
80951 08807

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ, 8000-11000 ಸಂಬಳ, ವಿನೋಬ ನಗರ, 2ನೇ ಬಸ್ ಸ್ಟಾಪ್, ದಾವಣಗೆರೆ.
99729 38086, 91130 53483

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ , ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ಗಾಂಧಿ ಸರ್ಕಲ್, ಆಹಾರ 2000, ದಾವಣಗೆರೆ.
89716 99826

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 2000/- ದಿಂದ 1400/- ಕಂತುಗಳು, ಸ್ಕಂದ ಚಿಟ್ ಫಂಡ್ಸ್- (ರಿ).
ಸಂಪರ್ಕಿಸಿ : 78997 75159

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ವಧು ಬೇಕಾಗಿದೆ**
ಎರಡನೇ ವಿವಾಹದ ವರನಿಗೆ ವಧು ಬೇಕಾಗಿದೆ.
ಫೋ. : 90199 76891

**WANTED**
Male / Female Experienced Teachers
1) B.Sc, B.Ed, 2) BA, B.Ed 3) D.Ed / Degree 4) NTC / PUC
Apply with / WhatsApp resume
S.N PUBLIC SCHOOL
Harihara (Br), Davanagere (Br), Mitlakatte (Br)
73493 97287, 97417 46205

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೊರಿಯರ್ ಸೌಲಭ್ಯವಿದೆ)
8749098879

**DULL IN MATHS**
Junior Abacus
UKG To 3rd Std,
Vedic Maths
4th Std To 10th Std,
Bruit Abacus And Vedic Maths, Nijalingappa Badavane`
97390 66956

# ಸಿಪಿಐ ನೇತೃತ್ವದಲ್ಲಿ ನಾಳೆ ನಿವೇಶನ ರಹಿತರಿಂದ ವಿಧಾನ ಸೌಧ ಚಲೋ

ದಾವಣಗೆರೆ, ಮಾ. 7- ಭಾರತ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಮಾರ್ಚ್ 9 ರಂದು ನಿವೇಶನ ರಹಿತರಿಂದ ವಿಧಾನಸೌಧ ಚಲೋ ನಡೆಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ವಸತಿ ಇಲ್ಲದವರಿಗೆ ವಸತಿ ಒದಗಿಸಬೇಕು, ನಿವೇಶನ ಇಲ್ಲದವರಿಗೆ ನಿವೇಶನ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ ವಿಧಾನಸೌಧ ಚಲೋ ನಡೆಸುವ ಮೂಲಕ ಸರ್ಕಾರಕ್ಕೆ ಒತ್ತಾಯಿಸಲಾಗುವುದು

ಅಂದು ಬೆಳಗ್ಗೆ 10.30 ಕ್ಕೆ ಬೃಹತ್ ಪ್ರತಿಭಟನೆ ಮೂಲಕ ಬೆಂಗಳೂರು ರೈಲು ನಿಲ್ದಾಣದಿಂದ ಫ್ರೀಡಂ ಪಾರ್ಕಿಗೆ ತೆರಳಿ ಧರಣಿ ನಡೆಸಲಾಗುವುದು. ನಗರ ಪ್ರದೇಶ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿರುವ ಮತ್ತು ಮುಂದೆ ಅರ್ಜಿ ಸಲ್ಲಿಸುವ ಎಲ್ಲಾ ವಸತಿ ರಹಿತರಿಗೆ ನಿವೇಶನ ಮತ್ತು ವಸತಿ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ ಸಿಪಿಐ ರಾಜ್ಯ ಸಮಿತಿ ನೇತೃತ್ವದಲ್ಲಿ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗಿದೆ.

ದಾವಣಗೆರೆ ಜಿಲ್ಲೆಯ ಎಲ್ಲಾ ವಸತಿ ರಹಿತರು ಮತ್ತು ನಿವೇಶನ ರಹಿತರು ಮಾರ್ಚ್ 9 ರ ವಿಧಾನಸೌಧ ಚಲೋ ಹೋರಾಟದಲ್ಲಿ ಭಾಗವಹಿಸಬೇಕೆಂದು ಪಕ್ಷದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಪಕ್ಷದ ಜಿಲ್ಲಾ ಸಹಕಾರ್ಯದರ್ಶಿಗಳಾದ ಕಾಂ. ಹೆಚ್.ಜಿ. ಉಮೇಶ್, ಕಾಂ. ಆವರಗೆರೆ ವಾಸು, ಖಜಾಂಚಿ ಕಾಂ.ಆನಂದರಾಜ್, ಮುಖಂಡರುಗಳಾದ ಕಾಂ. ಟಿ.ಎಸ್. ನಾಗರಾಜ, ಕಾಂ. ಎಂ.ಬಿ. ಶಾರದಮ್ಮ, ಕಾಂ. ಐರಣಿ ಚಂದ್ರು, ಕಾಂ. ಮಹಮ್ಮದ್ ಬಾಷಾ, ಕಾಂ. ಟಿ.ಹೆಚ್. ನಾಗರಾಜ್, ಕಾಂ. ಮಹಮ್ಮದ್ ರಫೀಕ್, ಕಾಂ. ಪಿ. ಷಣ್ಮುಖಸ್ವಾಮಿ ಮತ್ತಿತರರು ನೇತೃತ್ವ ವಹಿಸಲಿದ್ದಾರೆ.

## ಸಿಬಿಐನಿಂದ ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ವಿಚಾರಣೆ

ನವದೆಹಲಿ, ಮಾ. 7- ಕೆಲಸಕ್ಕಾಗಿ ಜಮೀನು ಹಗರಣಕ್ಕೆ ಸಂಬಂಧಿಸಿದಂತೆ ಕೇಂದ್ರದ ಮಾಜಿ ರೈಲ್ವೆ ಸಚಿವ ಹಾಗೂ ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಅವರನ್ನು ಸಿ.ಬಿ.ಐ. ವಿಚಾರಣೆಗೆ ಒಳಪಡಿಸಿದೆ. ಲಾಲು ಯಾದವ್ ಕುಟುಂಬ ಹಾಗೂ ಸಹಚರರಿಗೆ ಕಡಿಮೆ ಬೆಲೆಯಲ್ಲಿ ಜಾಗ ಮಾರಿದವರಿಗೆ ರೈಲ್ವೆಯಲ್ಲಿ ಉದ್ಯೋಗ ನೀಡಲಾಗಿತ್ತು ಎಂದು ಸಿ.ಬಿ.ಐ. ಆರೋಪಿಸಿದೆ.

# ಬ್ಯಾಂಕ್‌ಗಳು ಕೇವಲ ವ್ಯವಹಾರಕ್ಕೆ ಸೀಮಿತವಾಗಬಾರದು

## ಕರ್ನಾಟಕ ಬ್ಯಾಂಕ್ ಸಹಾಯಕ ಮಹಾ ಪ್ರಬಂಧಕ ಹಯವದನ ಉಪಾಧ್ಯಾಯ



ದಾವಣಗೆರೆ, ಮಾ.7- ಬ್ಯಾಂಕುಗಳು ಕೇವಲ ವ್ಯವಹಾರಕ್ಕೆ ಸೀಮಿತವಾಗದೇ ಮಾನವೀಯ ಮೌಲ್ಯದೊಂದಿಗೆ, ಸಾಮಾಜಿಕ ಕಾಳಜಿಯೊಂದಿಗೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂದು ಕರ್ನಾಟಕ ಬ್ಯಾಂಕ್ ಶಿವಮೊಗ್ಗ ಪ್ರಾಂತೀಯ ಮುಖ್ಯ ಕಚೇರಿಯ ಸಹಾಯಕ ಮಹಾ ಪ್ರಬಂಧಕ ಹಯವದನ ಉಪಾಧ್ಯಾಯ ತಿಳಿಸಿದರು.

ಇತ್ತೀಚಿಗೆ ಕೇಂದ್ರ ಸರ್ಕಾರ ಎಲ್ಲಾ ಬ್ಯಾಂಕುಗಳಿಗೆ ಈ ನಿಯಮವನ್ನು ನಿಗದಿ ಪಡಿಸಿದೆ. ಶತಮಾನದ ಇತಿಹಾಸ ಪರಂಪರೆ ಇರುವ ಕರ್ನಾಟಕ ಬ್ಯಾಂಕ್‌ಗೆ ಬರುವ ಲಾಭದಲ್ಲಿ ಶೇ. 2ರಷ್ಟು ಸಮಾಜಕ್ಕೆ, ದೀನ ದಲಿತರಿಗೆ, ಆರ್ಥಿಕ ಕುಂಠಿತಗೊಳ್ಳುವ ಬಡ ಬಗ್ಗರಿಗೆ ಕೊಡುಗೆ ನೀಡುವ, ಸಹಾಯ ಮಾಡುವ ಪರಿಕಲ್ಪನೆ ಪ್ರಾರಂಭದಿಂದಲೇ ಮಾಡುತ್ತಾ ಬಂದಿದೆ.ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಲಾಕುಂಚ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ಮಾತನಾಡಿ, ಮಾನವನ ಬದುಕು ಕೇವಲ ಹೊಟ್ಟೆ ಪಾಡಿಗೆ ಸೀಮಿತವಾಗದೇ ಸಾಮಾಜಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಖಿನ್ನತೆಯ ಮನಸುಗಳು ಪುಳಕಿತಗೊಳ್ಳುತ್ತವೆ ಹಾಗೂ ಬದುಕಿಗೆ ಬೆಲೆ ಬರುತ್ತದೆ ಎಂದರು.

ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕ ಬಿ.ಎನ್. ರಾಘವೇಂದ್ರ ನಾಯ್ಕ, ಕಿರಣ್ ಬಿ.ಎನ್., ಲಕ್ಷ್ಮಣ್ ಬಾಡಗಿ, ರಾಕೇಶ್ ಶ್ಯಾನಭೋಗ್, ರಮೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಲಾಕುಂಚದ ಮುಖ್ಯಸ್ಥರಾದ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ, ಶ್ರೀಮತಿ ಪರ್ವಿನ್ ಅಮೀರ್‌ಜಾನ್, ಶ್ರೀಮತಿ ವಸಂತಿ ಮಂಜುನಾಥ್ ಉಪಸ್ಥಿತರಿದ್ದರು.

ಬ್ಯಾಂಕಿನ ಸಿಬ್ಬಂದಿ ವರ್ಗ, ಅವರ ಕುಟುಂಬ ಮತ್ತು ಮಕ್ಕಳಿಗೆ ವಿವಿಧ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.

ಅನಿತಾ ಕಲ್ಯಾಣಿ ಪ್ರಾರ್ಥಿಸಿದರು. ಬಿ. ಎಸ್. ವೀರೇಶ್ ಸ್ವಾಗತಿಸಿದರು. ಸಾಲಿಗ್ರಾಮ ಗಣೇಶ್‌ಶೆಣೈ ನಿರೂಪಿಸಿದರು. ಮಮತ ಕೊಟ್ರೇಶ್ ವಿಜೇತರ ಪಟ್ಟಿ ಓದಿದರು. ಶೈಲಾ ವಿನೋದ್ ದೇವರಾಜ್ ವಂದಿಸಿದರು.

## ಬಿಜೆಪಿಯೇ ಭರವಸೆ : ಬಿ.ಪಿ.ಹರೀಶ್



ಮಲೆಬೆನ್ನೂರು, ಮಾ.7- ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾಧನೆಗಳ ಮಾಹಿತಿ ತಿಳಿಸುವ ಪ್ರಗತಿ ರಥಯಾತ್ರೆಯ ವಾಹನ ಪಟ್ಟಣದಲ್ಲಿ ಸಂಚರಿಸಲಿರುವ ಕರಪತ್ರವನ್ನು ಸೋಮವಾರ 1ನೇ ವಾರ್ಡಿನಿಂದ 5ನೇ ವಾರ್ಡಿನವರೆಗೂ ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ತಾ. ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ಅವರು ಮನೆ - ಮನೆಗೆ ತೆರಳಿ ಕರಪತ್ರವನ್ನು ವಿತರಿಸಿದರು.

ಈ ವೇಳೆ ಮಾತನಾಡಿದ ಹರೀಶ್, ಜನರಿಗೆ ಬಿಜೆಪಿಯೇ ಭರವಸೆ ಆಗಿದ್ದು, ರಾಜ್ಯದಲ್ಲಿ ಪುನಃ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು. ಇದೇ ಸಂದರ್ಭದಲ್ಲಿ ಮಲೇಬೆನ್ನೂರು ಗ್ರಾ.ಪಂ.ಮಾಜಿ ಸದಸ್ಯ ಹೈದರ್ ಅಲಿ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ವೀರೇಶ್ ಆದಾಪುರ, ಕೆ.ಎನ್.ಹಳ್ಳಿ ಹುಗ್ಗಿ ಮಹಾಂತೇಶ್, ಪುರಸಭೆ ಸದಸ್ಯರಾದ ಬೆಣ್ಣಹಳ್ಳಿ ಸಿದ್ದೇಶ್, ಗೌಡ್ರು ಮಂಜಣ್ಣ, ಬಿ.ಮಂಜುನಾಥ್, ಭಾನುವಳ್ಳಿ ಸುರೇಶ್, ಓ.ಜಿ.ಕುಮಾರ್, ಜಿಗಳೇರ ಹಾಲೇಶಪ್ಪ, ಪಿ. ಆರ್.ರಾಜು, ಎ.ಕೆ. ಲೋಕೇಶ್, ಮುಖಂಡರಾದ ಮುದೇಗೌಡ್ರ ತಿಪ್ಪೇಶ್, ಪಾನಿಪೂರಿ ರಂಗನಾಥ್, ಆನಂದಚಾರಿ, ಹರಿವಿ ನಿಂಗಪ್ಪ, ಕರಿಬಸಣ್ಣ, ಬಸ್ ಪುಟ್ಟಣ್ಣ, ವಿಶ್ವ, ವೈ ಚಂದ್ರಶೇಖರ್, ಬಿ.ಬಸವರಾಜ್, ಬಿ.ಚಂದ್ರಪ್ಪ, ಪಿ.ಕೆ.ಗಂಗಾಧರ, ಪಿಂಟು, ಸಂಜು, ಕುಮಾರ್, ಕೊಮಾರನಹಳ್ಳಿ ಸುನೀಲ್ ಇನ್ನೂ ಮುಂತಾದವರು ಈ ವೇಳೆ ಹಾಜರಿದ್ದರು.

## ಶಾಸಕರಿಗೆ ಮಕ್ಕಳ ಸಾಹಿತ್ಯ ಪರಿಷತ್ ಮನವಿ



ದಾವಣಗೆರೆ, ಮಾ.7- ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ದಕ್ಷಿಣ ವಿಭಾಗದ ವತಿಯಿಂದ, ಅಧ್ಯಕ್ಷ ಡಾ. ಎ.ಜೆ. ರವಿಕುಮಾರ್ ಮತ್ತು ಪರಿಷತ್ತಿನ ಪದಾಧಿಕಾರಿಗಳು ಇಂದು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ನವರನ್ನು ಭೇಟಿ ಮಾಡಿ, ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ಮಕ್ಕಳ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸುವಂತೆ ಮನವಿ ಮಾಡಿದರು. ಮನವಿಯನ್ನು ಸ್ವೀಕರಿಸಿದ ಶಾಸಕರು, ಆದಷ್ಟು ಬೇಗ ಶಾಶ್ವತ ಪರಿಹಾರವನ್ನು ಕೊಡಿಸುವುದಾಗಿ ಭರವಸೆ ನೀಡಿದರು

## ಇಟಲಿ : ವಾಯುಪಡೆ ವಿಮಾನಗಳು ಡಿಕ್ಕಿ ; ಸಾವು

ರೋಮ್, ಮಾ. 7 – ಇಟಲಿ ವಾಯುಪಡೆಯ ಎರಡು ಹಗುರ ವಿಮಾನಗಳು ಆಗಸದಲ್ಲಿ ಡಿಕ್ಕಿ ಹೊಡೆದು ಇಬ್ಬರು ಪೈಲಟ್‌ಗಳು ಸಾವನ್ನಪ್ಪಿದ್ದಾರೆ. ಯು-208 ಮಾದರಿಯ ಎರಡು ಹೆಲಿಕಾಪ್ಟರ್‌ಗಳು ರೋಮ್‌ಗೆ 25 ಕಿ.ಮೀ. ದೂರದಲ್ಲಿ ಡಿಕ್ಕಿ ಹೊಡೆದು ನೆಲಕ್ಕುರುಳಿವೆ. ವಿಮಾನಗಳ ಪೈಕಿ ಒಂದು ವಸತಿ ಪ್ರದೇಶದಲ್ಲಿ ಹಾಗೂ ಮತ್ತೊಂದು ಹೊಲದಲ್ಲಿ ಬಿದ್ದಿದೆ.

## ನಗರದಲ್ಲಿಂದು ವಿನೂತನದಿಂದ ಮಹಿಳಾ ದಿನ

ವಿನಾಯಕ ಬಡಾವಣೆ, ವಿದ್ಯಾನಗರದಲ್ಲಿರುವ ವಿನೂತನ ಮಹಿಳಾ ಸಮಾಜದ ಆಶ್ರಯದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ವಿದ್ಯಾನಗರದ ಈಶ್ವರ ಪಾರ್ವತಿ ದೇವಸ್ಥಾನದ ಆವರಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಗುವುದು.

ಅಧ್ಯಕ್ಷತೆಯನ್ನು ಶ್ರೀಮತಿ ಚಂದ್ರಿಕಾ ಮಂಜುನಾಥ ವಹಿಸುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಡಾ. ಆರತಿ ಸುಂದರೇಶ್, ಶ್ರೀಮತಿ ಭಾನುಶ್ರೀ ಆಗಮಿಸುವರು.

## ಇಂದು ಜಿಲ್ಲಾಡಳಿತದಿಂದ ಮಹಿಳಾ ದಿನಾಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಡಳಿತ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಮಹಿಳೆಯರಿಗಾಗಿ ಕಾನೂನು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ಪತ್ರಕರ್ತರ ಸಂಘದ ಸದಸ್ಯತ್ವಕ್ಕೆ ಅರ್ಜಿ

ದಾವಣಗೆರೆ, ಮಾ.7- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯತ್ವಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಜಿಲ್ಲಾ ಅಧ್ಯಕ್ಷ ಇ.ಎಂ ಮಂಜುನಾಥ ತಿಳಿಸಿದ್ದಾರೆ.

2023-24ನೇ ಸಾಲಿನ ಹೊಸ ಸದಸ್ಯತ್ವ ಹಾಗೂ ನವೀಕರಣ ಮಾಡಿಕೊಳ್ಳಲು ಮಾರ್ಚ್ 10 ಕೊನೆಯ ದಿನವಾಗಿದೆ. ಹೊಸ ಸದಸ್ಯತ್ವ ಪಡೆಯಲು ಕನಿಷ್ಠ ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆ ಹೊಂದಿರಬೇಕು. ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘದ ಪರ್ಯಾಯ ಸಂಘದಲ್ಲಿ ಸದಸ್ಯರಾಗಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ತಿರಸ್ಕೃತಗೊಂಡ ಅರ್ಜಿಗಳ ಸದಸ್ಯತ್ವದ ಹಣವನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್ ತಿಳಿಸಿದ್ದಾರೆ.

ಅರ್ಜಿ ಪಡೆಯಲು ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಅವರ ಕಚೇರಿ 'ದಾವಣಗೆರೆ ಇಮೇಜ್ ಪತ್ರಿಕೆ ಕಾರ್ಯಾಲಯ' ಸಿಟಿ ಸೆಂಟ್ರಲ್ ಹಾಸ್ಪಿಟಲ್ ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ ಇಲ್ಲಿ ಸಲ್ಲಿಸಬಹುದಾಗಿದೆ.

ಮಾಹಿತಿಗೆ ಅಧ್ಯಕ್ಷ ಇ.ಎಂ. ಮಂಜುನಾಥ 9448277772, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್ 8494949909, ಖಜಾಂಚಿ ಎನ್.ವಿ. ಬದರಿನಾಥ್ 9448728858 ಸಂಪರ್ಕಿಸಬಹುದು.

## ನಕಲಿ ಬೇಡ ಜಂಗಮ ಪ್ರಮಾಣ ಪತ್ರ ಕ್ರಮಕ್ಕೆ ಒತ್ತಾಯಿಸಿ 14 ರಂದು ಧರಣಿ

ದಾವಣಗೆರೆ, ಮಾ.7- 'ಬೇಡ ಜಂಗಮ' ನಕಲಿ ಜಾತಿ ಪ್ರಮಾಣ ಪತ್ರ ಪಡೆದು ರಾಜಕಾರಣದ ಚುಕ್ಕಾಣಿ ಹಿಡಿಯಲು ಪ್ರಯತ್ನಿಸುವವರ ವಿರುದ್ಧ ಜಿಲ್ಲಾಡಳಿತ ಒಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ ಇದೇ ದಿನಾಂಕ 13ರಂದು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ನಿರಂತರ ಧರಣಿ ಸತ್ಯಾಗ್ರಹ ನಡೆಸುವುದಾಗಿ ಪರಿಶಿಷ್ಟ ಜಾತಿಗಳ ರಕ್ಷಣಾ ವೇದಿಕೆ ಸಂಚಾಲಕ ಹೆಚ್. ಮಲ್ಲೇಶ್ ತಿಳಿಸಿದ್ದಾರೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಯಕೊಂಡ ಕ್ಷೇತ್ರದಲ್ಲಿ ವಾಗೀಶ್ ಸ್ವಾಮಿ ಅವರು ಬೇಡ ಜಂಗಮ ಎಂದು ನಕಲಿ ಜಾತಿ ಪ್ರಮಾಣ ಪತ್ರ ಮಾಡಿಸಿಕೊಂಡು ರಾಜಕಾರಣ ಮಾಡಲು ಹೊರಟಿದ್ದು, ಕ್ಷೇತ್ರದ ಸಂಸದರು, ಶಾಸಕರುಗಳು ಈ ಬಗ್ಗೆ ಕ್ರಮ ಕೈಗೊಂಡು ಪರಿಶಿಷ್ಟ ಜಾತಿ, ವರ್ಗಗಳ ಸಮುದಾಯದವರ ಹಿತ ಕಾಪಾಡಬೇಕು ಎಂದು ಹೇಳಿದರು.

ಚಿನ್ನಸಮುದ್ರದ ಶೇಖರನಾಯ್ಕ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸೋಮಶೇಖರಪ್ಪ, ಲಕ್ಷ್ಮಣ್ ರಾಮಾವತ್, ವೆಂಕಟೇಶ್ ಬಾಬು, ಸಂದೇಶ್, ಜಿ.ಎನ್. ಮಲ್ಲಿಕಾರ್ಜುನ್ ಇತರರು ಉಪಸ್ಥಿತರಿದ್ದರು.

## ಪಾದಯಾತ್ರೆ ಟ್ರಸ್ಟ್‌ನಿಂದ ಅಥಣಿ ವೀರಣ್ಣನವರಿಗೆ ಅಭಿನಂದನೆ



ದಾವಣಗೆರೆ, ಮಾ.7- ದಾವಣಗೆರೆ ವಿಶ್ವವಿದ್ಯಾನಿಲಯದ ವತಿಯಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವ ಲೆಕ್ಕ ಪರಿಶೋಧಕರೂ ಮತ್ತು ಕೊಟ್ಟೂರೇಶ್ವರ ಪಾದಯಾತ್ರೆ ಟ್ರಸ್ಟ್‌ನ ಗೌರವ ಅಧ್ಯಕ್ಷರು ಆಗಿರುವ ಅಥಣಿ ವೀರಣ್ಣನವರಿಗೆ ಟ್ರಸ್ಟ್ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷರಾದ ಕಣಕುಪ್ಪಿ ಮುರುಗೇಶಪ್ಪ, ಆರ್.ಜಿ. ದತ್ತರಾಜ್, ದೇವರಮನಿ ಶಿವಕುಮಾರ್, ಹೋಲೂರು ಬಸವರಾಜ್, ಬಿ ಚಿದಾನಂದ, ಎ.ಎಸ್. ಮೃತ್ಯುಂಜಯ, ಇಂಜಿನಿಯರ್ ವೀರೇಶ್, ಸಿ.ಆರ್. ಜಯರಾಜ್, ಜೋಳದ ಕೊಟ್ರಪ್ಪ, ಕಣಕುಪ್ಪಿ ನಾಗರಾಜ್, ತಿಪ್ಪಣ್ಣ, ಮತ್ತಿಹಳ್ಳಿ ಕೊಟ್ರೇಶ್, ವಿನುತ ರವಿ ಉಪಸ್ಥಿತರಿದ್ದರು.

## ಆಲೂರಿನಲ್ಲಿ ಇಂದು ಉಚ್ಚಂಗೆಮ್ಮ ದೇವಿ ಜಾತ್ರೆ

ದಾವಣಗೆರೆ ತಾಲ್ಲೂಕಿನ ಆಲೂರು ಗ್ರಾಮದ ಶ್ರೀ ಉಚ್ಚಂಗೆಮ್ಮ ದೇವಿ ಜಾತ್ರೆ ಇಂದು ಮತ್ತು ನಾಳೆ ನಡೆಯಲಿದೆ ಎಂದು ಕೆರೆ ಹೋರಾಟಗಾರ ಹೇಮಂತರಾಜ್ ತಿಳಿಸಿದ್ದಾರೆ.

ನಾಳೆ ಗುರುವಾರ ಅಮ್ಮನವರ ಕಾರ್ಯಕ್ರಮಗಳು ಜರುಗುವವು. ನಂತರ ಸಂಜೆ 7 ಕ್ಕೆ ತುಮಕೂರು ಜ್ಯೋತಿ ಆರ್ಕೆಸ್ಟ್ರಾ ಅವರಿಂದ ರಸಮಂಜರಿ ಕಾರ್ಯ ಕ್ರಮ ನಡೆಯುವುದು. ದಿ. 10 ರ ಶುಕ್ರವಾರ ಮಧ್ಯಾಹ್ನ 3 ಕ್ಕೆ ಮಲ್ಲ ಯುದ್ಧದ ಕುಸ್ತಿಗಳು ಜರುಗಲಿದೆ.

## ಸ್ಮಶಾನಕ್ಕೆ ತೆಗೆದು, ಉಳಿದ ಭೂಮಿಯನ್ನು ದಲಿತ ಕುಟುಂಬಗಳಿಗೆ ನೋಂದಣಿ ಮಾಡಿಸಲು ಒತ್ತಾಯ

ದಾವಣಗೆರೆ, ಮಾ. 7- ಹರಿಹರ ತಾಲ್ಲೂಕು ಸಾಲಕಟ್ಟೆ ಗ್ರಾಮದಲ್ಲಿ 2 ಎಕರೆ ಭೂಮಿಯನ್ನು ಸ್ಮಶಾನಕ್ಕೆ ತೆಗೆದಿರಿಸಿ ಉಳಿದ ಭೂಮಿಯನ್ನು ಸಾಗುವಳಿ ಮಾಡಿದ ದಲಿತ ಕುಟುಂಬಗಳಿಗೆ ರಿಜಿಸ್ಟರ್ ಮಾಡಿಸಿಕೊಡಬೇಕು ಎಂದು ಬಹುಜನ ಸಮಾಜ ಪಾರ್ಟಿ ಒತ್ತಾಯಿಸಿದೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಬಿಎಸ್‌ಪಿ ಜಿಲ್ಲಾಧ್ಯಕ್ಷ ಡಿ.ಹನುಮಂತಪ್ಪ, ಸಾಲಕಟ್ಟೆ ಗ್ರಾಮದಲ್ಲಿ ಊರಿನ ಪ್ರಮುಖರು ಉದ್ದೇಶಪೂರ್ವಕವಾಗಿ ಸುಮಾರು 5 ದಲಿತ ಕುಟುಂಬಗಳು ಸಾಗುವಳಿ ಮಾಡಿದ ಸರ್ಕಾರಿ ಭೂಮಿಯನ್ನು ಸ್ಮಶಾನ ಭೂಮಿಯೆಂದು ಮೀಸಲಿರಿಸುವ ಕುತಂತ್ರ ನಡೆಸಿದ್ದಾರೆ ಎಂದು ಆರೋಪಿಸಿದರು.

ಸಾಲಕಟ್ಟೆಯಲ್ಲಿ 15 ಎಕರೆ 30 ಸೆಂಟ್ಸ್ ಗೋಮಾಳ ಜಮೀನಿದ್ದು, ಇದರಲ್ಲಿ 1 ಎಕರೆ 30 ಸೆಂಟ್ಸ್ ನಂತೆ 5 ದಲಿತ ಕುಟುಂಬಗಳು ಉಳುಮೆ ಮಾಡುತ್ತಿವೆ. ಆದರೆ ದಲಿತರು ಸಾಗುವಳಿ ಮಾಡಿದ ಜಮೀನನ್ನು ಸೇರಿಸಿ 8 ಎಕರೆ ಭೂಮಿಯನ್ನು ಕೇವಲ 500 ಮನೆ ಇರುವ ಗ್ರಾಮಕ್ಕೆ ಸ್ಮಶಾನವನ್ನಾಗಿ ಮಾರ್ಪಡಿಸಿದ್ದಾರೆ. ಇನ್ನು ಉಳಿದ ಜಮೀನನ್ನು ಮೇಲ್ವರ್ಗದವರು ಸಾಗುವಳಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಜಿಲ್ಲಾಧಿಕಾರಿಗಳು ಗ್ರಾಮದಲ್ಲಿ 2 ಎಕರೆ ಭೂಮಿಯನ್ನು ಸ್ಮಶಾನಕ್ಕೆ ತೆಗೆದಿರಿಸಿ ಉಳಿದ ಭೂಮಿ ಯನ್ನು ಸಾಗುವಳಿ ಮಾಡಿದ ದಲಿತ ಕುಟುಂಬಗಳಿಗೆ ರಿಜಿಸ್ಟರ್ ಮಾಡಿಸಿಕೊಟ್ಟು ದಲಿತರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಯಬೇಕು ಎಂದು ಒತ್ತಾಯಿಸಿದ ಅವರು, ಈ ಬಗ್ಗೆ ಮಾ.10 ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ ಹೆಚ್.ಮಲ್ಲೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಮಿಲಿಟರಿ ಪಿಂಚಣಿದಾರರು ಜೀವಂತ ಪ್ರಮಾಣ ಪತ್ರ ನೀಡಲು ಸೂಚನೆ

ದಾವಣಗೆರೆ, ಮಾ.7- ಈವರೆಗೆ ಜೀವಂತ ಪ್ರಮಾಣ ಪತ್ರ ಸಲ್ಲಿಸದ ಮಿಲಿಟರಿ ಪಿಂಚಣಿದಾರರು ಕೂಡಲೇ ಬ್ಯಾಂಕ್ ಅಥವಾ ಆನ್‌ಲೈನ್‌ನಲ್ಲಿ ಜೀವಂತ ಪ್ರಮಾಣ ಪತ್ರವನ್ನು ಸಲ್ಲಿಸಿ ಮಿಲಿಟರಿ ಪಿಂಚಣಿಯನ್ನು ಮುಂದುವರೆಸಿಕೊಳ್ಳಬೇಕಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಕೋರಿದ್ದಾರೆ.

ಸ್ಪರ್ಶ್‌ಗೆ ವರ್ಗಾಹಿಸಲ್ಪಟ್ಟಿರುವ ಮಿಲಿಟರಿ ಪಿಂಚಣಿ / ಮಿಲಿಟರಿ ವಿಧವಾ ಪಿಂಚಣಿದಾರರು ಪ್ರತಿ ವರ್ಷದಂತೆ ನವೆಂಬರ್ ತಿಂಗಳು ಜೀವಂತ ಪ್ರಮಾಣ ಪತ್ರವನ್ನು ಬ್ಯಾಂಕ್ ಅಥವಾ ಆನ್ ಲೈನ್ ಮುಖಾಂತರ ಸಲ್ಲಿಸಲು ಕೋರಲಾಗಿತ್ತಾದರೂ ಬಹು ಸಂಖ್ಯೆಯ ಪಿಂಚಣಿದಾರರು ಈವರೆಗೆ ಜೀವಂತ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಸದರಿ ಪಿಂಚಣಿಯನ್ನು ನಿಲ್ಲಿಸಲಾಗುವುದು ಎಂದು ಪಿ.ಸಿ.ಡಿ.ಎ ಅಲಹಬಾದ್ ಕಚೇರಿಯಿಂದ ಮಾಹಿತಿಯನ್ನು ನೀಡಿರುತ್ತಾರೆ. ಆದ ಕಾರಣ ತಕ್ಷಣವೇ ಜೀವಂತ ಪ್ರಮಾಣ ಪತ್ರ ಸಲ್ಲಿಸಲು ಮಿಲಿಟರಿ ಪಿಂಚಣಿದಾರರಿಗೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಛೇರಿಯ ದೂ. ಸಂ. 08182-220925ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆಯಿಂದ ದ್ವಿತೀಯ ಪಿಯುಸಿ ಪರೀಕ್ಷೆ : ನಿಷೇಧಾಜ್ಞೆ ಜಾರಿ

ದಾವಣಗೆರೆ, ಮಾ. 7- ಜಿಲ್ಲೆಯಲ್ಲಿ ನಾಡಿದ್ದು ದಿನಾಂಕ 9 ರಿಂದ 29 ರವರೆಗೆ ನಡೆಯುವ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ವ್ಯಾಪ್ತಿಯ 31 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸುವ ಹಿನ್ನೆಲೆಯಲ್ಲಿ ಪರೀಕ್ಷಾ ದಿನಗಳಂದು ಎಲ್ಲ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪರಿಧಿ ವ್ಯಾಪ್ತಿ ಪ್ರದೇಶವನ್ನು ಸಾರ್ವಜನಿಕ ಪ್ರವೇಶಕ್ಕೆ ನಿಷೇಧಿತ ಪ್ರದೇಶವೆಂದು ಮತ್ತು ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳು, ಸೈಬರ್‌ಕೆಫೆ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಲು ಆದೇಶ ಹೊರಡಿಸಿದ್ದಾರೆ.

ಆದೇಶವು ಪರೀಕ್ಷಾರ್ಥಿಗಳಿಗೆ ಹಾಗೂ ಪರೀಕ್ಷೆಯ ಕರ್ತವ್ಯ ನಿರ್ವಹಿಸಲು ನೇಮಕಾತಿ ಆದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ, ಪರೀಕ್ಷಾರ್ಥಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ಬಿಡಲು ಬರುವ ಪೋಷಕರು ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರದ ಬಳಿ ಗುಂಪುಗೂಡುವುದು, ನಿಲ್ಲುವುದು ಮತ್ತು ವಾಹನಗಳ ಪಾರ್ಕಿಂಗ್ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ವಿವರಿಸಿದ್ದಾರೆ.

## ಕುಶಲ ಕರ್ಮಿಗಳಿಂದ ನಿವೇಶನಕ್ಕೆ ಅರ್ಜಿ

ದಾವಣಗೆರೆ, ಮಾ.7 - ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ದಾವಣಗೆರೆ ತಾಲ್ಲೂಕಿನ ಅಣಬೇರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿಯ ಸಮಗಾರ, ಮಾದಾರ, ಡೋರ, ಮಚಗಾರ, ಮೋಚಿ ಚರ್ಮ ಕುಶಲ ಕರ್ಮಿ ನಿವೇಶನ ರಹಿತರಿಗೆ ನಿವೇಶನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ಕಡ್ಡಾಯವಾಗಿ ಚರ್ಮಗಾರಿಕೆಯಲ್ಲಿ ತೊಡಗಿದ್ದು, ನಿವೇಶನ ರಹಿತರಾಗಿರಬೇಕು, ಕುಟುಂ ಬದಲ್ಲಿ ಯಾರೂ ಸರ್ಕಾರಿ ನೌಕರಿ ಯಲ್ಲಿರಬಾರದು, ವಾರ್ಷಿಕ ವರಮಾನ ಗರಿಷ್ಟ ರೂ. 32.000 ಮಿತಿಯೊಳಗಿರ ಬೇಕು ಹಾಗೂ ಇ-ಶ್ರಮ್ ಕಾರ್ಡ್ ಹೊಂದಿರಬೇಕು ಎಂದು ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಸಂಯೋಜಕರು ತಿಳಿಸಿದ್ದಾರೆ.

## ಹೋಳಿ : ಜಿಲ್ಲೆಯಲ್ಲಿ ಇಂದು ಮದ್ಯ ಮಾರಾಟ ನಿಷೇಧ

ದಾವಣಗೆರೆ ಜಿಲ್ಲೆಯಾದ್ಯಂತ ಹೋಳಿ ಹಬ್ಬದ ಆಚರಣೆ ನಿಮಿತ್ತ ಇಂದು ಹೋಳಿ ಹಬ್ಬ ಮತ್ತು ಮುಸ್ಲಿಂ ಸಮಾಜದವರು ಷಬ್-ಎ-ಬರಾತ್ ಆಚರಣೆ ಹಮ್ಮಿಕೊಳ್ಳಲಾಗಿದ್ದು, ಎರಡು ದಿವಸ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶಿವಾನಂದ ಕಾಪಶಿ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯು ಮತೀಯ ದೃಷ್ಟಿಯಿಂದ ಅತೀ ಸೂಕ್ಷ್ಮ ಜಿಲ್ಲೆಯಾಗಿರುವ ಹಿನ್ನೆಲೆ ಈ ಹಬ್ಬದಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಮುಂಜಾಗ್ರತಾ ದೃಷ್ಟಿಯಿಂದ ಇಂದು ಮುಂಜಾನೆಯಿಂದ ಸಂಜೆ 5 ರವರೆಗೆ ದಾವಣಗೆರೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ, ಮದ್ಯ ಸರಬರಾಜನ್ನು ನಿಷೇಧಿಸ ಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸುರಕ್ಷಿತ ಶೌಚಾಲಯ ಮನುಷ್ಯನ ಆರೋಗ್ಯಕ್ಕೆ ಪೂರಕ



ಮಲೇಬೆನ್ನೂರು, ಮಾ. 7 - ಸುರಕ್ಷಿತ ಶೌಚಾಲಯ ಮನುಷ್ಯನ ಆರೋಗ್ಯಕ್ಕೆ ಪೂರಕ ಎಂದು ಬೆಂಗಳೂರಿನ ಕೃತಜ್ಞತಾ ಟ್ರಸ್ಟ್ ವ್ಯವಸ್ಥಾಪಕ ನಿರ್ದೇಶಕರಾದ ಅರುಣಾ ದಿವಾಕರ್ ತಿಳಿಸಿದರು.

ಧೂಳೆ ಹೊಳೆ ಗ್ರಾಮದ ಜಿ.ಎಂ.ಸಿ.ಜಿ. ಪ್ರೌಢಶಾಲೆಯಲ್ಲಿ ತಮ್ಮ ಟ್ರಸ್ಟ್ ವತಿಯಿಂದ ನಿರ್ಮಿಸಲಾದ ಬಾಲಕಿಯರ ಹೈಟೆಕ್ ಶೌಚಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಶೌಚಾಲಯ ಅತೀ ಮುಖ್ಯವಾದುದು. ಏಕೆಂದರೆ ಮನುಷ್ಯನಿಗೆ ವಿಸರ್ಜಿಸುವ ಮಲದಿಂದ ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಇದರಿಂದ ಅತಿಸಾರ ಭೇದಿಯಂತಹ ಕಾಯಿಲೆಗಳು ಬಂದು ಅವರ ಆರೋಗ್ಯವೇ ಏರುಪೇರಾಗುತ್ತದೆ. ಹಾಗಾಗಿ ಶೌಚಾಲಯ ಬಳಕೆ ಮತ್ತು ನೈರ್ಮಲ್ಯಕ್ಕೆ ಹೆಚ್ಚು ಗಮನ ನೀಡಬೇಕು.

ಮನುಷ್ಯನಿಗೆ ಉತ್ತಮ ಆರೋಗ್ಯ ದೊರೆಯಬೇಕಾದರೆ ಶೌಚಾಲಯ ಬಳಕೆ ಅತ್ಯಗತ್ಯ. ಬಯಲು ಶೌಚದಿಂದ ಮಕ್ಕಳು ಬಹುಬೇಗ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯದ ಕೊರತೆಯಿಂದ ಹೆಣ್ಣು ಮಕ್ಕಳು ಹೆಚ್ಚು ತೊಂದರೆಗೆ ಒಳಗಾಗುತ್ತಿದ್ದಾರೆ. ಆ ಉದ್ದೇಶದಿಂದ ನಮ್ಮ ಟ್ರಸ್ಟ್ ವತಿಯಿಂದ ವಿಶೇಷವಾಗಿ ಬಾಲಕಿಯರಿಗೆ ಶೌಚಾಲಯ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ರೆಂಟೋಕಿಲ್ ನ ಇಂಜಿನಿಯರ್ ಸುದೀಪ್ ಮಾತನಾಡಿ, ಶೌಚಾಲಯವನ್ನು ವಿದ್ಯಾರ್ಥಿನಿಯರು ಸ್ವಚ್ಛವಾಗಿಟ್ಟುಕೊಂಡು ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಸುಧಾರಣಾ ಸಮಿತಿ ಉಪಾಧ್ಯಕ್ಷ ಹೊಳೆಸಿರಿಗೆರೆಯ ಎನ್.ಜಿ. ನಾಗನಗೌಡ್ರು ವಹಿಸಿದ್ದರು. ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ, ಬಿಳಸನೂರು ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕೆ.ಆರ್. ವಿಶ್ವನಾಥ್, ಶಾಲಾ ಸುಧಾರಣಾ ಸಮಿತಿ ಸದಸ್ಯರಾದ ಕೆ.ಜಿ. ನಿಜಲಿಂಗಪ್ಪ, ಡಿ.ಪಿ. ವಿರುಪಾಕ್ಷಗೌಡ್ರು, ಕೆ. ಈಶ್ವರಪ್ಪ, ಕೆ.ಜಿ. ರಾಜು, ಶಾಲಾ ಮುಖ್ಯ ಶಿಕ್ಷಕ ಡಿ.ಎಂ. ಮಂಜುನಾಥಯ್ಯ, ಶಿಕ್ಷಕರಾದ ಜಿ. ನೀಲನಗೌಡ, ಕೆ.ಎಂ. ಗುರುಬಸಯ್ಯ, ಆರ್. ಶಂಕರ್ ನಾಯ್ಕ್, ಕೆ. ಸಂತೋಷ್ ಕುಮಾರ್, ಜಿ. ಮಲ್ಲಪ್ಪ, ಡಿ.ಹೆಚ್. ವೀರಭದ್ರಯ್ಯ, ದೇವೇಂದ್ರಪ್ಪ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

## ಕೃಷಿ ಡ್ರೋನ್ ಬಳಸಿ ದಾಖಲೆಯ ದ್ರಾವಣ ಸಿಂಪಡಣೆ



ದಾವಣಗೆರೆ, ಮಾ.7- ಕೃಷಿ ಡ್ರೋನ್ ಬಳಸುವ ಮೂಲಕ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಒಂದೇ ದಿನದಲ್ಲಿ 100 ಎಕರೆ ಭತ್ತದ ಬೆಳೆಗೆ ನ್ಯಾನೋ ಯೂರಿಯಾ ಸಿಂಪರಣೆ ಮಾಡಿ ದಾಖಲೆ ಮಾಡಲಾಗಿದೆ.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ವಿಸ್ತರಣಾ ನಿರ್ದೇಶನಾಲಯ, ಶಿವಮೊಗ್ಗ, ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ಉಡುಪಿ ಹಾಗೂ ಹಿರೇಕೊಗಲೂರು ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿ ಇವರ ಸಂಯುಕ್ತ ಆಶ್ರಯದಲ್ಲಿ ಕೃಷಿ ಡ್ರೋನ್ ತಂತ್ರಜ್ಞಾನ ಪರಿಚಯ ಕಾರ್ಯಕ್ರಮವನ್ನು ಚನ್ನಗಿರಿ ತಾಲ್ಲೂಕಿನ ವೆಂಕಟೇಶ್ವರ ಕ್ಯಾಂಪಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಂಪನಿಯ ಅಧ್ಯಕ್ಷ ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಕೃಷಿಯಲ್ಲಿ ವಿನೂತನ ತಾಂತ್ರಿಕತೆಗಳನ್ನು ರೈತರಿಗೆ ಪರಿಚಯಿಸಿ, ಅದರ ಸದುಪಯೋಗವನ್ನು ಭತ್ತದ ಬೆಳೆಗಾರರು ಪಡೆದುಕೊಳ್ಳಬೇಕು ಎಂದು ಕೇಂದ್ರದ ಮುಖ್ಯಸ್ಥ ಡಾ.ಟಿ. ಎನ್. ದೇವರಾಜ್ ಹೇಳಿದರು.

ಉಡುಪಿ ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿ ಎನ್. ನವೀನ್ ಮಾತನಾಡುತ್ತಾ, ಕೃಷಿ ಕಾರ್ಮಿಕರ ಅನುಪಸ್ಥಿತಿಯಲ್ಲೂ ಕೂಡ ಕೃಷಿಯನ್ನು ಮುಂದುವರೆಸಲು ಡ್ರೋನ್ ತಂತ್ರಜ್ಞಾನವು ನಿಖರವಾಗಿ, ವೈಜ್ಞಾನಿಕವಾಗಿ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಭತ್ತದ ಬೆಳೆಯು 30 ರಿಂದ 40 ದಿವಸದ ಹಂತದಲ್ಲಿದ್ದಾಗ ನ್ಯಾನೋ ಯೂರಿಯಾ ದ್ರಾವಣವನ್ನು ಡ್ರೋನ್ ಮುಖಾಂತರ ಸಿಂಪರಣೆ ಮಾಡುವುದರಿಂದ ರಸ ಗೊಬ್ಬರದ ಕಾರ್ಯಕ್ಷಮತೆ ಹೆಚ್ಚಿಸುವುದರ ಜೊತೆಗೆ ಬೆಳೆ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ತಿಳಿಸಿದರು.




**ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ರಥೋತ್ಸವವು ಮಂಗಳವಾರ ತಡರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಈ ಸಂದರ್ಭದಲ್ಲಿ ಸ್ವಾಮಿಯ ರಥಕ್ಕೆ ಬೃಹದಾಕಾರದ ಸೇಬುಹಣ್ಣಿನ ಹಾರವನ್ನು ಹಾಕಲಾಯಿತು.**

# ಮಾದಕ ವಸ್ತುಗಳ ಸೇವನೆ ಸಮಾಜಕ್ಕೆ ದೊಡ್ಡ ಪಿಡುಗು

### ಹರಪನಹಳ್ಳಿಯ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ

ಹರಪನಹಳ್ಳಿ, ಮಾ.7 - ಮಾದಕ ವಸ್ತುಗಳ ಸೇವನೆ ಸಾಮಾನ್ಯವಾಗಿ ಪ್ರಪಂಚದಾದ್ಯಂತ ಗಂಡು, ಹೆಣ್ಣು, ಬಡವ, ಶ್ರೀಮಂತ ಎನ್ನುವ ಭೇದವಿಲ್ಲದೆ ಕಂಡುಬರುವ ಒಂದು ದೊಡ್ಡ ಪಿಡುಗು ಎಂದು ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ತಿಳಿಸಿದರು.

ಸೋಮವಾರ ಪಟ್ಟಣದ ಎಸ್.ಸಿ.ಎಸ್. ಫಾರ್ಮಸಿ ಕಾಲೇಜಿನಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಟಿ.ಎಂ.ಎ.ಇ.ಸಂಸ್ಥೆಯ ಎಸ್.ಸಿ.ಎಸ್.ಫಾರ್ಮಸಿ ಕಾಲೇಜು, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಾದಕ ವ್ಯಸನ ತಡೆಗಟ್ಟುವಿಕೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಆರೋಗ್ಯವಂತ ಸಮಾಜ ಕಟ್ಟುವಲ್ಲಿ ಯುವಕರ ಪಾತ್ರ ಬಹಳ ಮುಖ್ಯ. ವಿದ್ಯಾರ್ಥಿಗಳು ದುಶ್ಚಟದಿಂದ ದೂರವಿದ್ದು,



ಪ್ರತಿಭಾವಂತ ವಿದ್ಯಾರ್ಥಿಗಳಾಗಿ ತಮ್ಮ ತಂದೆ-ತಾಯಿಗೆ ಸೃಜನಶೀಲ ಮಕ್ಕಳಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ಅಧಿಕಾರಿ ಡಾ.ಹಾಲಸ್ವಾಮಿ ಮಾತನಾಡಿ, ಉತ್ತೇಜಕ ಪದಾರ್ಥ ಸೇವಿಸುವುದರಿಂದ ವ್ಯಕ್ತಿಯು ಮನೋವಿಕಲ್ಪ ಸಮಾಧಿ ಸ್ಥಿತಿ ತಲುಪುತ್ತಾನೆ. ಮದ್ಯ, ತುಂಬಾಕು, ಗಾಂಜಾ, ಕೊಕೇನ್ ಓಪಿಯಮ್, ಆಂಫಿಟಮೈನ್, ಹೆರಾಯಿನ್, ಎಲ್.ಎಸ್.ಡಿ.ಪಿ.ಸಿ.ಪಿ. ನಿದ್ದೆ ಮಾತ್ರೆಗಳು, ಅನಿಲಗಳು ಮಾದಕ ವಸ್ತು ಗಳಾಗಿದ್ದು, ಇವುಗಳ ಸೇವನೆಯಿಂದ ವ್ಯಕ್ತಿಯು ಲೋಲುಪ್ತತೆನ್ನು ಬೆಳೆಸಿಕೊಳ್ಳುವುದರೊಂದಿಗೆ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಾರೆ ಎಂದು ವಿದ್ಯಾರ್ಥಿಗಳಿಗೆ ವಿಶ್ಲೇಷಿಸಿದರು.

ಈ ಸಂದರ್ಭದಲ್ಲಿ ಟಿ.ಎಂ.ಎ.ಇ. ಸಂಸ್ಥೆಯ ಆಡಳಿತಾಧಿಕಾರಿ ಟಿ.ಎಂ. ಪ್ರತೀಕ್, ವಕೀಲರ ಸಂಘದ ಅಧ್ಯಕ್ಷ ಎಂ.ಅಜ್ಜಣ್ಣ ಮಾತನಾಡಿದರು, ಅಪರ ಸರ್ಕಾರಿ ವಕೀಲ ವಿ.ಜಿ.ಪ್ರಕಾಶಗೌಡ, ವಕೀಲರ ಸಂಘದ ಉಪಾಧ್ಯಕ್ಷ ಕೆ.ವಿರುಪಾಕ್ಷಪ್ಪ, ಕಾರ್ಯದರ್ಶಿ ಕೆ.ಆನಂದ, ಪ್ರಾಚಾರ್ಯ ಡಾ.ಹೆಚ್.ಎಂ. ಶುಭುಲಿಂಗಯ್ಯ, ಡಾ.ನಾಗೇಂದ್ರಪ್ಪ, ವಕೀಲರಾದ ಎಂ.ಮೃತ್ಯುಂಜಯ, ಬಿ. ಸಿದ್ದೇಶ್, ಸಿ.ಹನುಮಂತಪ್ಪ, ಬಿ.ತಿಪ್ಪೇಶ್, ಕಾನೂನು ಸೇವಾ ಸಮಿತಿ ಸಿಬ್ಬಂದಿಗಳಾದ ಕೊಟ್ರೇಶ್, ಬಸವರಾಜ, ಕಾಲೇಜು ಸಿಬ್ಬಂದಿಗಳು, ಮತ್ತಿತರರಿದ್ದರು.

## ರಾಣೇಬೆನ್ನೂರು : ನಿಜಗುಣಾನಂದ ಶ್ರೀ ಪ್ರವಚನ ಸಮಿತಿ ರಚನೆ



ರಾಣೇಬೆನ್ನೂರು, ಮಾ. 7 - ಇದೇ ದಿನಾಂಕ 15 ರಿಂದ ಏಪ್ರಿಲ್ 5 ರವರೆಗೆ ನಡೆಯುವ ಮುಂಡರಗಿ ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿಗಳ ವಿಶ್ವಧರ್ಮ ಪ್ರವಚನ ಸಮಿತಿಯನ್ನು ಎಂ.ಜಿ. ಪಾಟೀಲ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ವಾಸುದೇವ ಗುಪ್ತಾ ಗೌರವಾಧ್ಯಕ್ಷ, ಅಂದಾನಪ್ಪ ಅಸುಂಡಿ ಉಪಾಧ್ಯಕ್ಷ, ವಾಸು ಲದ್ವಾ ಪ್ರಧಾನ ಕಾರ್ಯದರ್ಶಿ, ರತ್ನಾಕರ ಕುಮದಾಪೂರ ಖಜಾಂಚಿ, ಮಹಾದೇವಪ್ಪ ಕನ್ನೂರ, ಎಂ.ಎಸ್. ಅರಕೇರಿ, ಬಸವರಾಜ ಪಟ್ಟಣಶೆಟ್ಟಿ, ಶ್ರೀ ನಿವಾಸ ಕಾಕಿ,ಸುವರ್ಣಮ್ಮ ಪಾಟೀಲ, ರುಕ್ಮಿಣಿ ಸಾವುಕಾರ, ವಿ.ಪಿ. ಲಿಂಗನಗೌಡ, ಎಸ್.ಜಿ.ಹಿರೇಮಠ್ ಸಲಹಾ ಮಂಡಳಿಗೆ ಆಯ್ಕೆಯಾಗಿದ್ದಾರೆ.

## ಬಾಂಗ್ಲಾ : ಏಳಂತಸ್ತಿನ ಕಟ್ಟಡದಲ್ಲಿ ಸ್ಫೋಟ ; 16 ಸಾವು

ಢಾಕಾ, ಮಾ. 7 – ಬಾಂಗ್ಲಾದೇಶದ ರಾಜಧಾನಿ ಢಾಕಾದ ಏಳು ಅಂತಸ್ತಿನ ಕಟ್ಟಡದಲ್ಲಿ ಶಕ್ತಿಶಾಲಿ ಸ್ಫೋಟ ಸಂಭವಿಸಿ 16 ಜನ ಸಾವನ್ನಪ್ಪಿದ್ದಾರೆ ಮತ್ತು ನೂರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಸ್ಥಳೀಯ ಕಾಲಮಾನದ ಪ್ರಕಾರ ಸಂಜೆ 4.50ರ ಸಮಯದಲ್ಲಿ ಹಳೆಯ ಢಾಕಾದ ಜನನಿಬಿಡ ಗುಲಿಸ್ತಾನ್ ಪ್ರದೇಶದಲ್ಲಿರುವ ಕಟ್ಟಡದಲ್ಲಿ ಸ್ಫೋಟ ಸಂಭವಿಸಿದೆ. ಬೆಂಕಿ ನಂದಿಸಲು ಹನ್ನೊಂದು ಅಗ್ನಿಶಾಮಕ ಘಟಕಗಳು ಶ್ರಮಿಸಿದವು.

ಇದುವರೆಗೂ 16 ಮೃತ ದೇಹಗಳು ಪತ್ತೆಯಾಗಿವೆ. ಆದರೆ, ರಕ್ಷಣಾ ಕಾರ್ಯಾಚರಣೆ ಈಗಲೂ ಮುಂದುವರೆದಿದ್ದು, ಮೃತರ ಸಂಖ್ಯೆ ಇನ್ನಷ್ಟು ಹೆಚ್ಚಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಫೋಟಕ್ಕೆ ಏನು ಕಾರಣ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಕಟ್ಟಡದಲ್ಲಿ ಅಕ್ರಮವಾಗಿ ಸಂಗ್ರಹಿಸಲಾಗಿದ್ದ ರಾಸಾಯನಿಕಗಳೇ ಸ್ಫೋಟಕ್ಕೆ ಕಾರಣ ಎಂದು ಸ್ಥಳೀಯರು ಶಂಕಿಸಿದ್ದಾರೆ. ಈ ಕಟ್ಟಡವನ್ನು ಬಹುತೇಕ ಕಚೇರಿ ಹಾಗೂ ಉದ್ಯಮ ಸಂಕೀರ್ಣವಾಗಿ ಬಳಸಲಾಗುತ್ತಿತ್ತು.

ಸ್ಫೋಟದ ನಂತರ ಇಡೀ ಸಿದ್ದಿಕ್ ಬಜಾರ್ ಪ್ರದೇಶ ನಡುಗಿತ್ತು. ನಾನು ಭೂಕಂಪ ಎಂದು ಹೆದರಿದ್ದೆ ಎಂದು ಪ್ರತ್ಯಕ್ಷ ದರ್ಶಿ ಸಫಾಯತ್ ಹೊಸೇನ್ ತಿಳಿಸಿದ್ದಾರೆ. ಕಟ್ಟಡ ಪರಿಶೀಲನೆಗಾಗಿ ಬಾಂಬ್ ನಿಷ್ಕ್ರಿಯ ದಳವೊಂದನ್ನು ರವಾನಿಸಲಾಯಿತು. ಗಾಯಗೊಂಡ ಹತ್ತಾರು ಜನರನ್ನು ಢಾಕಾ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಟ್ಟಡದ ಪಕ್ಕದಲ್ಲಿ ಬಿ.ಆರ್.ಎ.ಸಿ. ಬ್ಯಾಂಕ್ ಶಾಖೆ ಇತ್ತು. ಬ್ಯಾಂಕ್‌ನ ಗಾಜಿನ ಗೋಡೆಗಳು ಹಾಗೂ ಎದುರಿನಲ್ಲಿದ್ದ ಬಸ್ ತಂಗುದಾಣಕ್ಕೂ ಹಾನಿಯಾಗಿದೆ. ನೆಲ ಮಹಡಿಯಲ್ಲಿ ಸ್ಫೋಟ ಸಂಭವಿಸಿದೆ. ಕಟ್ಟಡದ ಮೊದಲ ಎರಡು ಅಂತಸ್ತುಗಳಿಗೆ ತೀವ್ರ ಹಾನಿಯಾಗಿದೆ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ. ಢಾಕಾದ ಸೈನ್ಸ್ ಲ್ಯಾಬೋರೇಟರಿ ಪ್ರದೇಶದ ಕಟ್ಟಡದಲ್ಲಿ ಎರಡು ದಿನಗಳ ಹಿಂದೆ ಸ್ಫೋಟ ಸಂಭವಿಸಿ ಮೂವರು ಸಾವನ್ನಪ್ಪಿದ್ದರು. ಕಳೆದ ವಾರ ಚಿತ್ತೋಗ್ರಾಮ್‌ನಲ್ಲಿರುವ ಆಕ್ಸಿಜನ್ ಘಟಕದಲ್ಲಿ ಸ್ಫೋಟ ಸಂಭವಿಸಿ ಏಳು ಜನ ಸಾವನ್ನಪ್ಪಿದ್ದರು.

## ಹೆಣ್ಣಿನ ಅಸ್ತಿತ್ವ

ನಾರಿಯನ್ನು ದೇವತೆ ಎನ್ನುವ ಜನ
ಸಾಲು ಸಾಲಾಗಿ ಆದಾಗ ಸ್ತ್ರೀ ಸಂತಾನ
ಏನೋ ಕೆಡುಕಾದಂತೆ ಶಪಿಸುವರು
ಹೆಣ್ಣು ಹುಟ್ಟಿದ ಮನೆ ತಣ್ಣಗೆ ಎನ್ನುವರು
ಮನದಲ್ಲಿ ವಾರಸುದಾರನ ಬಯಸುವರು

ಲಕ್ಷ್ಮಿ ಸರಸ್ವತಿಯ ಹೆಸರಿಟ್ಟು ಮಗಳಿಗೆ
ಶಿಕ್ಷಣಕ್ಕೂ ಕತ್ತರಿ ದುಡಿಮೆಗೂ ನಿರ್ಬಂಧ
ಮೌನ ಗೌರಿ ಅಂತಿದ್ದರೆ ತಪ್ಪಿದ್ದಲ್ಲ ಶೋಷಣೆ
ಸಿಡಿದು ಕಾಳಿಯಾಗಿ ನಿಂತರೆ ನಿರಂತರ ಬವಣೆ
ಅಡುಗೆ ಮನೆಯಲ್ಲಿ ಬಂಧಿತಳು ಅನ್ನಪೂರ್ಣೆ

ಹೆಣ್ಣು ಮಗು ಭಾರವೆನ್ನುವ ಆಲೋಚನೆ
ಅವಸರದ ವಿವಾಹ ವಿದ್ಯೆಗೆ ಅಡಚಣೆ
ವೇದಿಕೆಯಲ್ಲಿ ಮಹಿಳೆಯರ ಪರ ಭಾಷಣ
ವಾಸ್ತವದಲ್ಲಿ ಕುಗ್ಗಿಸುವ ಪ್ರಯತ್ನ
ಆಚರಣೆಗೆ ಬಾರದ ಸಮಾನತೆ

ದುರ್ಗೆಯ ಹಾಗೆ ಧೈರ್ಯ ತುಂಬಿ ಬೆಳೆಸಿದರೆ
ಶಾರದೆಯಂತೆ ಜ್ಞಾನವನ್ನು ಗಳಿಸಿದರೆ
ಪ್ರತಿ ಮಗಳೂ ತಂದೆ-ತಾಯಿಯರ ಸಿರಿಗೌರಿ
ಪ್ರತಿ ಹೆಣ್ಣೂ ತನ್ನ ಗಂಡನಿಗೆ ಮಹಾಲಕ್ಷ್ಮಿ
ಅದು ಆಕೆಯ ನೈಜ ಅಸ್ತಿತ್ವ...

- ಅನುಪಮ ವಿರುಪಾಕ್ಷಪ್ಪ, ದಾವಣಗೆರೆ

# ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಯೋಗಿ ನಾರೇಯಣರು

### ಕಾಲಜ್ಞಾನಿ ಶ್ರೀ ಕೈವಾರ ತಾತಯ್ಯನವರ ಜಯಂತ್ಯೋತ್ಸವ

ದಾವಣಗೆರೆ, ಮಾ.7 - ಶ್ರೀ ಯೋಗಿ ನಾರೇಯಣರು ಬಳೆಯ ವ್ಯಾಪಾರ ಮಾಡುತ್ತಲೇ ಕಾಲಜ್ಞಾನ ಬರೆದಂತಹ ಮಹಾತ್ಮರು. ಎಲ್ಲ ಸಮಾಜಗಳಿಗೂ ಸಲ್ಲುವಂತೆ ಕನ್ನಡ, ತೆಲುಗು, ಭಾಷೆಗಳಲ್ಲಿ ಅದ್ವಿತೀಯವಾದ ಅಧ್ಯಾತ್ಮ ಚಿಂತನೆಯನ್ನೊಳಗೊಂಡ ಕೀರ್ತನೆಗಳು, ತತ್ವಪದಗಳು, ವೇದಾಂತ ಸಾರಾವಳಿಗಳನ್ನು ಸರಳ ಭಾಷೆಯಲ್ಲಿ ರಚಿಸಿದವರು ತಾತಯ್ಯನವರು.

ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಶ್ರೀ ಯೋಗಿ ನಾರೇಯಣರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಪಿ. ಎನ್ ಲೋಕೇಶ್ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಮತ್ತು ಶ್ರೀ ಯೋಗಿ ನಾರೇಯಣ ಬಲಿಜ ಸಂಘ ಇವರ ಸಹಯೋಗ ದೊಂದಿಗೆ ಬಲಿಜ ವಿದ್ಯಾರ್ಥಿ ನಿಲಯದಲ್ಲಿ ಮಂಗಳವಾರ ಜರುಗಿದ ಕಾಲಜ್ಞಾನಿ ಶ್ರೀ ಯೋಗಿ ನಾರೇಯಣ ಯತೀಂದ್ರರ ಜಯಂತ್ಯೋತ್ಸವ ಉದ್ಘಾಟಿಸಿ ಮಾತನಾಡಿದರು.

ಶ್ರೀ ಯೋಗಿ ನಾರೇಯಣರು ಸಮಾಜ ಸುಧಾರಕರಾಗಿದ್ದು, ಅವರು ರಚಿಸಿದ ಕಾಲಜ್ಞಾನದಲ್ಲಿ ಜಗತ್ತು ಅರಿಯಬೇಕಾದ ಅನೇಕ ಅಂಶಗಳಿವೆ, ಅವರ



ತತ್ವ, ತೋರಿದ ಮಾರ್ಗದರ್ಶನ ಪಾಲಿಸಿದರೆ ಎಲ್ಲೆಡೆ ಶಾಂತಿ ನೆಲೆಸುವುದರಲ್ಲಿ ಸಂಶಯವಿಲ್ಲ ಎಂದರು.

17 ನೇ ಶತಮಾನವು ಅನೇಕ ಅವಧೂತರನ್ನು ಕಂಡ ಕಾಲಘಟ್ಟದಲ್ಲಿ ಯೋಗಿ ನಾರೇಯಣರು ಒಬ್ಬರು. ಜೀವನ ಜಂಜಾಟದಿಂದ ಲೌಕಿಕತೆಯಿಂದ ಅಲೌಕಿಕತೆಯ ಕಡೆಗೆ ವಾಲಿದ ಮಹಾ ಪವಾಡ ಪುರುಷ, ಸಾಮಾನ್ಯ ಜನರ ಒಳಿತಿಗಾಗಿ ಯಾವುದೇ ಜಾತಿ, ಜನಾಂಗ ಹಾಗೂ ಭೇದ ಭಾವವಿಲ್ಲದೆ ಕೀರ್ತನೆಗಳನ್ನು ಹಾಡುವ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದಿದವರು. ಮುಂದಿನ ಪೀಳಿಗೆಗೆ ಅವರ ತತ್ವಗಳು ದಾರಿದೀಪವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಬಲಿಜ ಸಮಾಜದ ಜಿಲ್ಲಾ ಅಧ್ಯಕ್ಷ ನರಸಿಂಹ ಮೂರ್ತಿ, ಸಮಾಜದ ಜಿಲ್ಲಾ ಮಹಿಳಾ ಅಧ್ಯಕ್ಷೆ ಜಯದೇವಮ್ಮ, ಉಪಾಧ್ಯಕ್ಷ ಗದ್ದಿಗೇಶ್ ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಸಕಾರಾತ್ಮಕ ಫಲಿತಾಂಶ ಸಾಧ್ಯ

### ಕೀಲು-ಮೂಳೆ ತಜ್ಞ ಡಾ. ಜಿ.ಸಿ.ಬಸವರಾಜ್ ಪ್ರತಿಪಾದನೆ



ಚಿತ್ರದುರ್ಗ, ಮಾ.7 - ತಾಲ್ಲೂಕಿನ ದೇವಸಮುದ್ರ ಗ್ರಾಮದ ಸರ್ಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಪೋಷಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೇವಸಮುದ್ರ ಗ್ರಾಮದವರೇ ಆದ ದಾವಣಗೆರೆಯ ಶಿಲ್ಪಾ ಡಯಾಗ್ನೋಸ್ಟಿಕ್ ಸೆಂಟರ್‌ನ ಹೆಸರಾಂತ ಕೀಲು, ಮೂಳೆ ತಜ್ಞ ಡಾ. ಜಿ.ಸಿ.ಬಸವರಾಜ್ ಮಾತನಾಡಿ, ಪ್ರಾಮಾಣಿಕವಾಗಿ, ಶ್ರದ್ಧೆಯಿಂದ ಶ್ರಮವಹಿಸಿ ಅಭ್ಯಾಸ ಮಾಡಿದರೆ ಸಕಾರಾತ್ಮಕ ಫಲಿತಾಂಶ ದೊರೆಯುತ್ತದೆ ಹಾಗಾಗಿ ವಿದ್ಯಾರ್ಥಿಗಳು ಈ ದಿಸೆಯಲ್ಲಿ ಪ್ರಯತ್ನಿಸುವಂತೆ ಕರೆ ನೀಡಿದರು. ಮುಖ್ಯೋಪಾಧ್ಯಾಯ ಶ್ರೀಧರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

# ಜಗದ್ಗುರು ರೇಣುಕಾಚಾರ್ಯರು ಧಾರ್ಮಿಕ ಸಂಸ್ಕೃತಿ ಬೋಧಿಸಿದ ಧರ್ಮ ಪುರುಷರು



ದಾವಣಗೆರೆ, ಮಾ.7 - ಜಗದ್ಗುರು ರೇಣುಕಾಚಾರ್ಯರು ಧಾರ್ಮಿಕ ಸಂಸ್ಕೃತಿ ಬೋಧಿಸಿದ ಧರ್ಮ ಪುರುಷರು ಎಂದು ಜಿಲ್ಲಾಧಿಕಾರಿ ಕಾಪಶಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಛೇರಿಯಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯೋತ್ಸವದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಮನುಷ್ಯನನ್ನು ಸುಸಂಸ್ಕೃತ ನನ್ನಾಗಿಸುವಲ್ಲಿ ಶ್ರೀ ರೇಣುಕಾಚಾರ್ಯರ ಪಾತ್ರ ಪ್ರಮುಖವಾದುದು. ಅವರ ಆದರ್ಶ ಗಳನ್ನು ಪಾಲಿಸ ಬೇಕಿದೆ ಎಂದರು. ಮನುಕುಲದ ಶಾಂತಿಯೇ ಎಲ್ಲಾ ಧರ್ಮಗಳ ಆಶಯವಾಗಿದೆ ಎಂದು ಹೇಳಿದರು.

ಜಿ.ಪಂ. ಸಿಇಓ ಡಾ. ಎ. ಚನ್ನಪ್ಪ ಮಾತನಾಡಿ, ಗುರು ರೇಣುಕಾಚಾರ್ಯರು ಬೋಧಿಸಿದ ತತ್ವಗಳನ್ನು ನಮ್ಮ ನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸರ್ಕಾರ ಜಯಂತ್ಯೋತ್ಸವ ಘೋಷಣೆ ಮಾಡಿದ ಕಾರಣಕ್ಕೆ ಸೌಲಭ್ಯಗಳ ಬೇಡಿಕೆಗಳನ್ನು ಮಂಡಿಸಬಾರದು ಎಂದು ಹೇಳಿದರು.

ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್ ಮುಂದಿನ ವರ್ಷ ಸಮಾಜದಿಂದ ಅದ್ದೂರಿಯಾಗಿ ಜಯಂತ್ಯೋತ್ಸವ ಆಚರಿಸಲಾಗುವುದು ಎಂದು ತಿಳಿಸಿದು.

ಸಾಹಿತಿ ಮಳಲಕೆರೆ ಗುರುಮೂರ್ತಿ ಉಪನ್ಯಾಸ ನೀಡಿದರು.

ಎಸ್ಪಿ ಸಿ.ಬಿ. ರಿಷ್ಯಂತ್, ತಹಶೀಲ್ದಾರ್ ಡಾ. ಅಶ್ವತ್ಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಮಠದ್, ಸಮಾಜದ ಮುಖಂಡರಾದ ಸಿದ್ಧಲಿಂಗಸ್ವಾಮಿ, ತ್ಯಾವಣಿಗಿ ವೀರಭದ್ರಸ್ವಾಮಿ, ಸಿದ್ದೇಶ್ ಕೋಟೆಹಾಳ್, ಬಲ್ಲೂರು ರವಿಕುಮಾರ್, ಇಂದೂಧರ ನಿಶಾನಿಮಠ, ದ್ರಾಕ್ಷಾಯಣಮ್ಮ ಇತರರಿದ್ದರು.

## ಅಖಿಲ ಭಾರತ ವೀರಶೈವದಿಂದ ಅಥಣಿ ವೀರಣ್ಣ ಅವರಿಗೆ ನಾಡಿದ್ದು ಸನ್ಮಾನ



ದಾವಣಗೆರೆ, ಮಾ.7 - ಪ್ರಣವ ಚಾರಿಟಬಲ್ ಸೊಸೈಟಿ ಅವರಿಂದ ಅಖಿಲ ಭಾರತ ವೀರಶೈವ ಇವರ ಸಹಯೋಗದಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ಡಾಕ್ಟರೇಟ್ ಪುರಸ್ಕೃತರಾದ ಕೈಗಾರಿಕೋದ್ಯಮಿ ಅಥಣಿ ವೀರಣ್ಣ ಅವರಿಗೆ ಇದೇ ದಿನಾಂಕ 11 ರ ಶನಿವಾರ ಸಂಜೆ 4 ಗಂಟೆಗೆ ಬೆಂಗಳೂರಿನ ಸದಾಶಿವ ನಗರದಲ್ಲಿರುವ ವೀರಶೈವ ಲಿಂಗಾಯತ ಭವನದ ಆಡಿಟೋರಿಯಂನಲ್ಲಿ ಸನ್ಮಾನಿಸಲಾಗುವುದು.

ಅಥಣಿ ವೀರಣ್ಣ ಅವರೊಂದಿಗೆ ಎಸ್. ಪನ್ನಾ ರಾಜ್ ಹಾಗೂ ಹೆಚ್. ಶಿವಲಿಂಗಪ್ಪ ಅವರುಗಳನ್ನೂ ಸನ್ಮಾನಿಸಲಾಗುವುದು. ಕಾರ್ಯಕ್ರಮದಲ್ಲಿ ಬಿ. ಎಸ್. ಪರಮಶಿವಯ್ಯ, ಶ್ರೀನಿವಾಸ ಎಂ. ಬಿದರಿ ಅವರುಗಳು ಉಪಸ್ಥಿತರಿರುವರು.



ಹೃನ್ಮನಗಳನ್ನು ಆವರಿಸಿಕೊಂಡಿರುವ ನಮ್ಮ ಮನೆ-ಮನದ ನಂದಾದೀವಿಗೆ
**ಶ್ರೀಮತಿ ಭವಾನಿ ಪ್ರಸಾದ್‌ರ**
ಆರನೇ ವಾರ್ಷಿಕ ಸ್ಮರಣೆ

08 ಮಾರ್ಚ್ 2017

ಹಳೇಬೀಡು ರಾಮಪ್ರಸಾದ್
97420 95430
ಹಳೇಬೀಡು ಅಭಿಷೇಕ್
9738365897
ಶ್ರೀಮತಿ ಸುಪ್ರಿಯಾ ಅಭಿಷೇಕ್
ಮಾಸ್ಟರ್ ಅಭಿಷೇಕ್

# ದೂಡಾದ ವಿವಿಧ ಕಾಮಗಾರಿಗಳಿಗೆ ಸಂಸದ, ಶಾಸಕರಿಂದ ಚಾಲನೆ



ದಾವಣಗೆರೆ, ಮಾ.7 - ದಾವಣಗೆರೆ - ಹರಿಹರ ನಗರಾಭಿವೃದ್ಧಿಕಾರದ ವತಿಯಿಂದ ಜೆ.ಹೆಚ್.ಪಟೇಲ್ ಬಡಾವಣೆ 'ಎ' ಬ್ಲಾಕ್ ಮತ್ತು ದುರ್ಗಾಂಬಿಕಾ ಬಡಾವಣೆಯಲ್ಲಿ ಕೈಗೊಳ್ಳಲುದ್ದೇಶಿಸಿರುವ ವಿವಿಧ ಕಾಮಗಾರಿಗಳಿಗೆ ಸಂಸದ ಜಿ.ಎಂ.ಸಿದ್ದೇಶ್ವರ ಮತ್ತು ಹಿರಿಯ ಶಾಸಕ ಎಸ್.ಎ.ರವೀಂದ್ರನಾಥ್ ಅವರುಗಳು ಇಂದು ಚಾಲನೆ ನೀಡಿದರು.

ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಸಂಸದರು ಮತ್ತು ಶಾಸಕರು ಕಾಮಗಾರಿಯ ಗುಣಮಟ್ಟವನ್ನು ಕಾಪಾಡುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ದೂಡಾ ಅಧ್ಯಕ್ಷ ಎ.ವೈ.ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಈ ಕಾರ್ಯಕ್ರಮದಲ್ಲಿ ದೂಡಾ ಸದಸ್ಯರುಗಳಾದ ಮಾರುತಿರಾವ್ ಘಾಟ್ಗೆ, ಲಕ್ಷ್ಮಣ್, ಬಾತಿ ಚಂದ್ರಶೇಖರ್, ಗೌರಮ್ಮ ವಿ. ಪಾಟೀಲ್, ದೂಡಾ ಮಾಜಿ ಅಧ್ಯಕ್ಷ ಕೆ.ಎಂ.ಸುರೇಶ್ ನಗರ ಪಾಲಿಕೆ ಸದಸ್ಯ ಕೆ.ಎಂ.ವೀರೇಶ್ ಮತ್ತಿತರರು ಭಾಗವಹಿಸಿದ್ದರು.

ದೂಡಾ ಆಯುಕ್ತ ಬಸವನಗೌಡ ಕೊಟೂರು, ಅಭಿಯಂತರುಗಳಾದ ಸುಜಯ್‌ಕುಮಾರ್, ಶ್ರೀಕರ್, ಅಕ್ಷತಾ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನಿಂದ ಅಥಣಿ ವೀರಣ್ಣ ಅವರಿಗೆ ಅಭಿನಂದನೆ



ದಾವಣಗೆರೆ, ಮಾ. 7 - ದಾವಣಗೆರೆ ವಿಶ್ವವಿದ್ಯಾನಿಲಯದ ವತಿಯಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವ ಲೆಕ್ಕ ಪರಿಶೋಧಕರೂ ಆಗಿರುವ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಅಥಣಿ ವೀರಣ್ಣ ಅವರಿಗೆ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ವತಿಯಿಂದ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಉಪಾಧ್ಯಕ್ಷ ಎಂ.ಹೆಚ್. ನಿಜಾನಂದ, ಕಾರ್ಯದರ್ಶಿ ಎನ್.ಎ. ಮುರುಗೇಶ್, ಟ್ರಸ್ಟಿಗಳಾದ ಎಸ್.ಎಸ್. ಮಲ್ಲಿಕಾರ್ಜುನ್, ಬಿ.ಸಿ. ಉಮಾಪತಿ, ಆರ್. ರಮಾನಂದ, ಆರ್. ವೆಂಕಟರೆಡ್ಡಿ, ಕೆ.ಜಿ. ಸುಗಂಧರಾಜ್, ಬಿ.ಸಿ. ಶಿವಕುಮಾರ್, ಎಂ. ಮಹೇಶ್ಚಂದ್ರಬಾಬು, ಎಸ್.ಕೆ. ವೀರಣ್ಣ, ಐ.ಪಿ. ಏಕೋರಾಮಾರಾಧ್ಯ, ಎ.ಕೆ. ಪ್ರಶಾಂತ್, ಎಂ.ವಿ. ವೀರೇಂದ್ರ, ಎ.ವಿ. ಪ್ರಸಾದ್, ಡಾ. ಹೆಚ್.ಬಿ. ಮೋಹನ್ ಹಾಗೂ ಟ್ರಸ್ಟ್‌ನ ಆಶ್ರಯದಲ್ಲಿ ನಡೆಯುವ ಗುಂಡಿ ನರ್ಸರಿ ಶಾಲೆ, ಪಿ.ಎಸ್. ಪ್ರಾಥಮಿಕ ಶಾಲೆ, ಅಥಣಿ ಪ್ರೌಢಶಾಲೆ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಎಸ್‌ಬಿಸಿ ಪ್ರಥಮ ದರ್ಜೆ ಕಾಲೇಜು ಅಥಣಿ ಸ್ನಾತಕೋತ್ತರ ಕೇಂದ್ರ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕಾಶೀಪುರ ಗ್ರಾಮದ ಹಾಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ವಾಸಿ, ಶ್ರೀ ಪುಟ್ಟಗನಹಾಳ್ ಪುಟ್ಟಪ್ಪ ಅವರ ಧರ್ಮಪತ್ನಿ **ಶ್ರೀಮತಿ ಹಾಲಮ್ಮ** ಅವರು ದಿನಾಂಕ 8-3-2023ರ ಬುಧವಾರ ಬೆಳಗಿನ ಜಾವ 12.55ಕ್ಕೆ ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು.

ಪತಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8-3-2023ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ಕಾಶೀಪುರ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಪತಿ : ಪುಟ್ಟಗನಹಾಳ್ ಪುಟ್ಟಪ್ಪನವರು ಮತ್ತು
ಮಕ್ಕಳಾದ : ನೀಲಕಂಠಪ್ಪ ಮತ್ತು ಸಹೋದರರು ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಮತ್ತು ಕಾಶೀಪುರ ಗ್ರಾಮಸ್ಥರು
ಮೊ. : 99028 66619, 99015 37204

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte